ಗುರುವಾರ, ಜೂನ್ 23, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪ್ರಚಾರ

ಮುಂಬೈನಲ್ಲಿ ಬುಧವಾರ ನಡೆದ ‘ಖುದಾ ಹಾಫಿಜ್ ಚಾಪ್ಟರ್ 2 ಅಗ್ನಿ ಪರೀಕ್ಷಾ’ ಬಾಲಿವುಡ್ ಚಿತ್ರದ ಪ್ರಮೋಶನ್‌ನಲ್ಲಿ ನಟ ಶಿವಾಲಿಕಾ ಒಬೆರಾಯ್ ಭಾಗವಹಿಸಿದ್ದರು



ಯಾವುದೇ ಕಾರ್ಯಕ್ರಮಕ್ಕೆ ಅನುಮತಿ ನೀಡುವುದಿಲ್ಲ: ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್

ಈದ್ಗಾ ಮೈದಾನ ನಮ್ಮ ಸ್ವತ್ತಲ್ಲ: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಮರಾಜಪೇಟೆ ಈದ್ಗಾ ಮೈದಾನ ಪಾಲಿಕೆಯ ಸ್ವತ್ತಲ್ಲ. ಆದ್ದರಿಂದ ಯಾವುದೇ ಕಾರ್ಯಕ್ರಮಕ್ಕೂ ಅನುಮತಿ ನೀಡುವ ಅಧಿಕಾರ ನಮಗೆ ಇಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ಪಷ್ಟಪಡಿಸಿದರು.

'ಸುಪ್ರೀಂಕೋರ್ಟ್ ಆದೇಶ ಸೇರಿ ವಕ್ಫ್ ಮಂಡಳಿ ನೀಡಿರುವ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಎಲ್ಲವನ್ನೂ ಗಮನಿಸಿದ ಬಳಿಕ ಈ ಆಸ್ತಿ ಪಾಲಿಕೆಯದ್ದಲ್ಲ ಎಂಬುದು ಸ್ಪಷ್ಟವಾಗಿದೆ' ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಒಪ್ಪಿಕೊಂಡರು.



ಈದ್ಗಾ ಮೈದಾನ

'ವಕ್ಫ್ ಮಂಡಳಿಗೆ ಸೇರಿದ ಆಸ್ತಿ ಎಂಬುದು ಸುಪ್ರೀಂ ಕೋರ್ಟ್ ಆದೇಶದಲ್ಲಿ ಇದೆ. ಆದರೆ, ಈವರೆಗೆ ವಕ್ಫ್ ಮಂಡಳಿ ಹೆಸರಿಗೆ ಖಾತೆ ಬದಲಾವಣೆ ಆಗಿಲ್ಲ. ಆದ್ದರಿಂದ ಪಾಲಿಕೆಯ ಸ್ವಾಧೀನದಲ್ಲೇ ಮೈದಾನ ಇತ್ತು. 1974ರಲ್ಲಿ ನಗರ ಸರ್ವೆ ನಡೆದಿದ್ದು, ಪಾಲಿಕೆ ಸ್ವಾಧೀನದ ಆಸ್ತಿ ಎಂದೇ ದಾಖಲಿಸಲಾಗಿದೆ. ಆದ್ದರಿಂದ ಇದು ಪಾಲಿಕೆ ಆಸ್ತಿ ಇರಬಹುದು ಎಂದು ಭಾವಿಸಿದ್ದೆವು. ದಾಖಲೆಗಳನ್ನು ಪರಿಶೀಲಿಸಿದ ಬಳಿಕ ವಕ್ಫ್ ಮಂಡಳಿ ಆಸ್ತಿ ಎಂಬುದು ಗೊತ್ತಾಗಿದೆ' ಎಂದು ವಿವರಿಸಿದರು.

'2005ರಲ್ಲಿ ಈದ್ಗಾ ಮೈದಾನದ ಒಂದು ಭಾಗದಲ್ಲಿ ನಿರ್ಮಲ ಶೌಚಾಲಯ ನಿರ್ಮಿಸಲಾಗಿದೆ. ಆಗಲೂ ವಕ್ಫ್ ಮಂಡಳಿ ತಕರಾರು ತೆಗೆದಿಲ್ಲ. ಈಗ ಖಾತೆ ಬದಲಾವಣೆಗೆ ವಕ್ಫ್ ಮಂಡಳಿ ಅರ್ಜಿ ಸಲ್ಲಿಸಿದರೆ ದಾಖಲೆಗಳನ್ನು ಪರಿಶೀಲಿಸಲಾಗುವುದು. ಎಲ್ಲವೂ ಸರಿಯಿದ್ದರೆ ಖಾತೆ ಮಾಡಿಕೊಡಲಾಗುವುದು. ಖಾತೆ ಬದಲಾವಣೆ ಆಗುವ ತನಕ ಪಾಲಿಕೆಯ ಸ್ವಾಧೀನದಲ್ಲೇ ಆಸ್ತಿ ಇರಲಿದೆ. ಆದರೆ, ವಕ್ಫ್ ಮಂಡಳಿ ಮಾಲೀಕತ್ವದ ಆಸ್ತಿ ಆಗಿರುವುದರಿಂದ ಬೇರೆ ಯಾವುದೇ ಕಾರ್ಯಕ್ರಮಕ್ಕೂ ಪಾಲಿಕೆ ಅನುಮತಿ ನೀಡುವುದಿಲ್ಲ' ಎಂದರು.

ಜಮೀರ್–ತುಷಾರ್ ನಡುವೆ ಡೀಲ್: ಸನಾತನ ಪರಿಷತ್ ಆರೋಪ

ಚಾಮರಾಜಪೇಟೆ ಶಾಸಕ ಜಮೀರ್ ಅಹಮದ್ ಮತ್ತು ತುಷಾರ್ ಗಿರಿನಾಥ್ ನಡುವೆ ಯಾವುದೋ 'ಡೀಲ್'(ಅವ್ಯವಹಾರ) ನಡೆದಿದೆ ಎಂದು ವಿಶ್ವ ಸನಾತನ ಪರಿಷತ್ತಿನ ಅಧ್ಯಕ್ಷ ಎಸ್.ಭಾಸ್ಕರನ್ ಆರೋಪಿಸಿದರು.

'ಜಮೀರ್ ಅಹಮದ್, ರಿಜ್ವಾನ್ ಅರ್ಷದ್ ಮತ್ತು ಇನ್ನೂ ಇಬ್ಬರು ಪಾಲಿಕೆ ಮಾಜಿ ಸದಸ್ಯರ ಜತೆ ತುಷಾರ್ ಗಿರಿನಾಥ್ ಅವರು ವಾರದ ಹಿಂದೆ ಗೋಪ್ಯ ಸಭೆ ನಡೆಸಿದ್ದಾರೆ. ಇದರ ಚಿತ್ರಗಳು ನನ್ನ ಬಳಿ ಇವೆ. ಸಭೆಯ ಬಳಿಕ ಜಮೀರ್ ಆಗಲಿ, ತುಷಾರ್ ಗಿರಿನಾಥ್ ಆಗಲಿ ಮಾಹಿತಿ ನೀಡಿಲ್ಲ. ಇದನ್ನು ಗಮನಿಸಿದರೆ ನಡೆಯಬಾರದ ಡೀಲ್ ನಡೆದಿದೆ ಎಂಬುದು ಸ್ಪಷ್ಟ' ಎಂದು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಇಷ್ಟು ದಿನ ಬಿಬಿಎಂಪಿ ಆಸ್ತಿ ಎಂದು ಹೇಳುತ್ತಿದ್ದವರು ಈಗ ಏಕಾಏಕಿ ನಮ್ಮ ಆಸ್ತಿಯಲ್ಲ ಎನ್ನುತ್ತಿದ್ದಾರೆ. ವಕ್ಫ್ ಮಂಡಳಿಯೇ ಮಾಹಿತಿ ಹಕ್ಕು ಕಾಯ್ದೆಯಡಿ ನೀಡಿರುವ ದಾಖಲೆಗಳ ಪ್ರಕಾರ ಇದು ಬಿಬಿಎಂಪಿ ಆಟದ ಮೈದಾನ. ವಕ್ಫ್ ಮಂಡಳಿ ಆಸ್ತಿಯಾಗಿದ್ದರೆ ಇಷ್ಟು ದಿನ ನಾಮಫಲಕ ಹಾಕದೆ ಬಿಡುತ್ತಿರಲಿಲ್ಲ' ಎಂದರು.

'ಸುಪ್ರೀಂ ಕೋರ್ಟ್ ಆದೇಶದ ಬಗ್ಗೆ ತುಷಾರ್ ಗಿರಿನಾಥ್ ಉಲ್ಲೇಖಿಸಿದ್ದಾರೆ. ಸುಪ್ರೀಂ ಕೋರ್ಟ್‌ಗೆ ಹೋಗಿದ್ದವರು ರುಕ್-ಉಲ್-ಮುಲ್ಕ್ ಎಸ್. ಅಬ್ದುಲ್ ವಾಜಿದ್ ಎಂಬುವರೇ ಹೊರತು ವಕ್ಫ್ ಮಂಡಳಿಯಾಗಲಿ, ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್(ಸಿಎಂಎ) ಆಗಲಿ ಅಲ್ಲ. ಈ ಪ್ರಕರಣದಲ್ಲಿ ಅವರು ಪ್ರತಿವಾದಿಗಳೇ ಅಲ್ಲ. ಪ್ರತಿವಾದಿ ಅಲ್ಲದವರಿಗೆ ಈ ಆಸ್ತಿ ಮಾಲೀಕತ್ವ ಹೇಗೆ ಹೋಗುತ್ತದೆ' ಎಂದು ಪ್ರಶ್ನಿಸಿದರು.



ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಬುಧವಾರ ರಾತ್ರಿ ತಮ್ಮ ಅಧಿಕೃತ ನಿವಾಸ 'ವರ್ಷಾ' ತೊರೆದು ತಮ್ಮ ಸ್ವಗೃಹ 'ಮಾತೋಶ್ರೀ'ಗೆ ಬಂದಾಗ ಅಪಾರ ಸಂಖ್ಯೆಯ ಅಭಿಮಾನಿಗಳು ಅವರನ್ನು ಸ್ವಾಗತಿಸಿದರು –ಪಿಟಿಐ ಚಿತ್ರ

ಉದ್ಧವ್ ವಿರುದ್ಧ ಕೋವಿಡ್ ನಿಯಮ ಉಲ್ಲಂಘನೆ ದೂರು

ಮುಂಬೈ (ಪಿಟಿಐ): ಕೋವಿಡ್–19 ದೃಢಪಟ್ಟಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಬುಧವಾರ ರಾತ್ರಿ ತಮ್ಮ ಅಧಿಕೃತ ಮನೆ 'ವರ್ಷ'ದಿಂದ ತಮ್ಮ ವೈಯಕ್ತಿಕ ನಿವಾಸ 'ಮಾತೋಶ್ರೀ'ಗೆ ತೆರಳುತ್ತಿದ್ದಾಗ ಬೆಂಬಲಿಗರನ್ನು ಭೇಟಿ ಮಾಡುವ ಮೂಲಕ ಕೋವಿಡ್ ಸಂಬಂಧಿತ ಶಿಷ್ಟಾಚಾರವನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ದೆಹಲಿಯ ಬಿಜೆಪಿ ನಾಯಕರೊಬ್ಬರು ದೂರು ದಾಖಲಿಸಿದ್ದಾರೆ.

ದೆಹಲಿ ಬಿಜೆಪಿ ವಕ್ತಾರ ತಜೀಂದರ್ ಪಾಲ್ ಸಿಂಗ್ ಬಗ್ಗಾ ಅವರು ಮಲಬಾರ್ ಹಿಲ್ ಪೊಲೀಸರಿಗೆ ಠಾಕ್ರೆ ವಿರುದ್ಧ ಆನ್‌ಲೈನ್ ಮೂಲಕ ದೂರು ಸಲ್ಲಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಶಿವಸೇನಾ ನಾಯಕ ಏಕನಾಥ್ ಶಿಂಧೆ ನೇತೃತ್ವದಲ್ಲಿ ಹಲವು ಶಿವಸೇನಾ ಶಾಸಕರು ಬಂಡಾಯ ಎದ್ದಿರುವ ಕಾರಣ, ಮುಖ್ಯಮಂತ್ರಿ ಸ್ಥಾನ ತ್ಯಜಿಸುವುದಾಗಿ ಪ್ರಸ್ತಾಪಿಸಿದ ಬಳಿಕ ಠಾಕ್ರೆ ಅವರು ತಮ್ಮ ಅಧಿಕೃತ ನಿವಾಸದಿಂದ ಕುಟುಂಬ ಸಮೇತ ತೆರಳಿದರು.

ಪ್ರತ್ಯೇಕವಾಸದಲ್ಲಿ ಇರಬೇಕಾದ ಮುಖ್ಯಮಂತ್ರಿ ಠಾಕ್ರೆ ಅವರು ಶಿಷ್ಟಾಚಾರವನ್ನು ಉಲ್ಲಂಘಿಸಿರುವುದು ಸುದ್ದಿ ವಾಹಿನಿಗಳಲ್ಲಿ ಬಿತ್ತರವಾಗಿದೆ. ಹೀಗಾಗಿ ಠಾಕ್ರೆ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಬಗ್ಗಾ ಅವರು ಪೊಲೀಸರಲ್ಲಿ ಮನವಿ ಮಾಡಿದ್ದಾರೆ.

ಬಂಡಾಯ ಗುಂಪುಸೇರಿದ ನಾಲ್ವರು ಶಾಸಕರು: ಬಂಡಾಯ ಎದ್ದಿರುವ ಶಿವಸೇನಾ ಶಾಸಕರ ಗುಂಪನ್ನು ಮಹಾರಾಷ್ಟ್ರದ ನಾಲ್ವರು ಶಾಸಕರು ಮತ್ತೊಂದು ಚಾರ್ಟರ್ಡ್ ವಿಮಾನದಲ್ಲಿ ಗುಜರಾತ್‌ನ ಸೂರತ್ ಮೂಲಕ ಅಸ್ಸಾಂನ ಗುವಾಹಟಿಗೆ ಬುಧವಾರ ಬಂದಿಳಿದರು.

ಶಾಸಕರಾದ ಚಂದ್ರಕಾಂತ್ ಪಾಟೀಲ್, ಯೋಗೇಶ್ ಕದಂ, ಮಂಜುಳಾ ಗಾವಿತ್ ಮತ್ತು ಗುಲಾಬ್ರಾವ್ ಪಾಟೀಲ್ ಅವರು ಏಕನಾಥ್ ಶಿಂಧೆ ಅವರ ತಂಡ ಸೇರಿದವರು.

'ಬಹುಮತ ಸಾಬೀತುಪಡಿಸುತ್ತೇವೆ'

ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ. ಅಗತ್ಯವಿದ್ದರೆ ಆಡಳಿತಾರೂಢ ಮಹಾ ವಿಕಾಸ್ ಅಘಾಡಿ (ಎಂವಿಎ) ವಿಧಾನಸಭೆಯಲ್ಲಿ ತನ್ನ ಬಹುಮತವನ್ನು ಸಾಬೀತು ಪಡಿಸುತ್ತದೆ ಎಂದು ಶಿವಸೇನೆಯ ಮುಖ್ಯ ವಕ್ತಾರ ಸಂಜಯ್ ರಾವುತ್ ಪ್ರತಿಪಾದಿಸಿದ್ದಾರೆ.

'ಪ್ರಜಾವಾಣಿ ಸಾಧಕರು' ಪ್ರಶಸ್ತಿ ಪ್ರದಾನ ಇಂದು

ಬೆಂಗಳೂರು: ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತಾ, ಸದ್ದಿಲ್ಲದೇ ಸಾಧನೆ ಮಾಡಿರುವವರನ್ನು ಗುರುತಿಸಿ 'ಪ್ರಜಾವಾಣಿ' ಪತ್ರಿಕಾ ಬಳಗವು ನೀಡುವ 'ಪ್ರಜಾವಾಣಿ ಸಾಧಕರು–2022' ಪ್ರಶಸ್ತಿ ಪ್ರದಾನ ಸಮಾರಂಭ ಜೂನ್ 23ರಂದು ಸಂಜೆ 4 ಗಂಟೆಗೆ ನಗರದ ಕೆ.ಜಿ. ರಸ್ತೆಯ ಮೈಸೂರು ಬ್ಯಾಂಕ್ ವೃತ್ತದ ಬಳಿಯ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಸರ್ ಎಂ.ವಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ (ಕೆ.ಎಸ್. ಡಿ.ಎಲ್) ಪ್ರಾಯೋಜಕತ್ವ ಹಾಗೂ ಎಫ್‌ಕೆಸಿಸಿಐ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಚನ್ನಗಿರಿ ಶಾಸಕ ಹಾಗೂ ಕೆಎಸ್ ಅಂಡ್ ಡಿಎಲ್‌ನ ಅಧ್ಯಕ್ಷರಾದ ಕೆ. ಮಾಡಾಳ್ ವಿರೂಪಾಕ್ಷಪ್ಪ, ಚಲನಚಿತ್ರ ನಟ ನಾಗಭೂಷಣ್, ಕೆಎಸ್ ಅಂಡ್ ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಮಹೇಶ್ ಎಂ. ಮತ್ತು ಎಫ್‌ಕೆಸಿಸಿಐ ಅಧ್ಯಕ್ಷರಾದ ಡಾ. ಐ.ಎಸ್. ಪ್ರಸಾದ್ ಪಾಲ್ಗೊಳ್ಳಲಿದ್ದಾರೆ.



ಮಾಡಾಳ್ ವಿರೂಪಾಕ್ಷಪ್ಪ



ನಾಗಭೂಷಣ್



ಡಾ.ಐ.ಎಸ್.ಪ್ರಸಾದ್

ಸಮಾಜ ಸೇವೆ, ಕೃಷಿ, ಕ್ರೀಡೆ, ವೈದ್ಯಕೀಯ, ಶಿಕ್ಷಣ, ವಿಜ್ಞಾನ, ಉದ್ಯಮ... ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಒಟ್ಟು 22 ಜನರಿಗೆ 'ಪ್ರಜಾವಾಣಿ ಸಾಧಕರು–2022' ಪ್ರಶಸ್ತಿ ಪ್ರದಾನ ನಡೆಯಲಿದೆ.

ಸಾಲುಮರದ ತಿಮ್ಮಕ್ಕಗೆ ಬಿಡಿಎ ನಿವೇಶನ

ಬೆಂಗಳೂರು: ಸಾಲುಮರದ ತಿಮ್ಮಕ್ಕ ಅವರಿಗೆ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 50x80 ಅಳತೆಯ ನಿವೇಶನವನ್ನು ಬಿಡಿಎ ಮಂಜೂರು ಮಾಡಿದ್ದು, ಬುಧವಾರ ನಿವೇಶನ ಪತ್ರಗಳನ್ನು ಹಸ್ತಾಂತರಿಸಲಾಯಿತು.

ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಮತ್ತು ಆಯುಕ್ತ ರಾಜೇಶ್ ಗೌಡ ಅವರು ನಿವೇಶನದ ನೋಂದಣಿ ಪತ್ರವನ್ನು ಹಸ್ತಾಂತರ ಮಾಡಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆಯ ಮೇರೆಗೆ ಕೆಂಪೇಗೌಡ ಬಡಾವಣೆಯ 7ನೇ ಬ್ಲಾಕ್‌ನಲ್ಲಿ ನಿವೇಶನವನ್ನು ಗುರುತಿಸಿ ವಿತರಿಸಲಾಗುತ್ತಿದೆ' ಎಂದು ವಿಶ್ವನಾಥ್ ಹೇಳಿದರು.

'ಬಿಡಿಎ ನಿವೇಶನ ನೀಡಿರುವುದು ಸಂತಸದ ವಿಷಯ. ಎಲ್ಲರೂ ಪರಿಸರ ರಕ್ಷಣೆಯತ್ತ ಕಾಳಜಿ ವಹಿಸಬೇಕು' ಎಂದು ಸಾಲುಮರದ ತಿಮ್ಮಕ್ಕ ಹೇಳಿದರು.



ಬಿಡಿಎ ಅಧ್ಯಕ್ಷ ಎಸ್‌.ಆರ್‌.ವಿಶ್ವನಾಥ್ ಅವರು ಸಾಲುಮರದ ತಿಮ್ಮಕ್ಕ ಅವರಿಗೆ ನಿವೇಶನ ಪತ್ರ ವಿತರಿಸಿದರು. ಬಿಡಿಎ ಕಾರ್ಯದರ್ಶಿ ಆನಂದ್, ಉಮೇಶ್, ಆಯುಕ್ತ ರಾಜೇಶ್‌ಗೌಡ, ಉಪಕಾರ್ಯದರ್ಶಿ ಮಧು ಇದ್ದರು

ದ್ರೌಪದಿ ಉತ್ತಮ ಅಭ್ಯರ್ಥಿ: ದೇವೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಪತಿ ಚುನಾವಣೆಗೆ ಅಭ್ಯರ್ಥಿಯನ್ನಾಗಿ ಆದಿವಾಸಿ ಸಮುದಾಯದ ದ್ರೌಪದಿ ಮುರ್ಮು ಅವರನ್ನು ಎನ್‌ಡಿಎ ಕಣಕ್ಕಿಳಿಸಿದೆ. ದ್ರೌಪದಿ ಒಬ್ಬ ಉತ್ತಮ ಅಭ್ಯರ್ಥಿ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ದ್ರೌಪದಿ ಮುರ್ಮು

ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಅನೇಕ ಹೆಸರುಗಳು ಚರ್ಚೆಗೆ ಬಂದು ಅಂತಿಮವಾಗಿ ದ್ರೌಪದಿ ಅವರನ್ನು ಆಯ್ಕೆ ಮಾಡಿದ್ದಾರೆ. ಯಾವುದೇ ವಿವಾದಗಳಿಲ್ಲದ ಅಭ್ಯರ್ಥಿ ಎಂದು ಹೇಳಿದರು.

'ವಿರೋಧ ಪಕ್ಷಗಳ ವತಿಯಿಂದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಬಗ್ಗೆ ಮಮತಾ ಬ್ಯಾನರ್ಜಿ ಕರೆದ ಮೊದಲ ಸಭೆಗೆ ಹೋಗಿದ್ದೆ' ಎಂದು ಅವರು ಹೇಳಿದರು. ಯಶವಂತ ಸಿನ್ಹಾ ಮತ್ತು ದ್ರೌಪದಿ ಅವರಲ್ಲಿ ಯಾರಿಗೆ ಬೆಂಬಲ ನೀಡುತ್ತೀರಿ ಎಂಬ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಲಿಲ್ಲ.

'ಕೋಡಿಹಳ್ಳಿ ಹಸಿರು ಟವೆಲ್ ಧರಿಸಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಗೂ ಮತ್ತು ಕೋಡಿಹಳ್ಳಿ ಚಂದ್ರಶೇಖರಗೂ ಯಾವುದೇ ಸಂಬಂಧವಿಲ್ಲ. ಭ್ರಷ್ಟಾಚಾರ ಆರೋಪ ಮುಕ್ತವಾಗುವರೆಗೂ ಅವರು ಹಸಿರು ಟವೆಲ್ ಧರಿಸಬಾರದು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಚ್.ಆರ್.ಬಸವರಾಜಪ್ಪ ಆಗ್ರಹಿಸಿದರು.

'ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನೌಕರರ ಹೋರಾಟದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಆರೋಪದಲ್ಲಿ ಕೋಡಿಹಳ್ಳಿ ಚಂದ್ರಶೇಖರ ಭಾಗಿಯಾಗಿದ್ದಾರೆ ಎಂಬ ಆರೋಪವಿದೆ. ಈ ಕುರಿತು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಶಿವಮೊಗ್ಗದಲ್ಲಿ ತುರ್ತು ಸಭೆ ನಡೆಸಿತ್ತು. ರೈತ ಮುಖಂಡರ ಒಮ್ಮತದಿಂದ ಕೋಡಿಹಳ್ಳಿ ಅವರನ್ನು ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಲಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕೋಡಿಹಳ್ಳಿ ಮೊಂಡುತನ ಪ್ರದರ್ಶಿಸಿ ತಾನೇ ಸರ್ವಾಧ್ಯಕ್ಷ ಎಂದು ಹೇಳುತ್ತಿರುವುದು ರೈತ ಸಂಘದ ಮೂಲ ಆಶಯಗಳಿಗೆ ಅಪಮಾನ ಮಾಡಿದಂತಾಗಿದೆ. ಶಿವಮೊಗ್ಗದಲ್ಲಿ ನಡೆದ ಸಭೆಗೂ ನನಗೂ ಯಾವುದೇ ರೀತಿ ಸಂಬಂಧವಿಲ್ಲ, ಈಗಲೂ ನಾನೇ ರಾಜ್ಯ ಘಟಕದ ಅಧ್ಯಕ್ಷನೆಂದು ಅವರು ಹೇಳುತ್ತಿರುವುದು ಗೊಂದಲದ ಹೇಳಿಕೆಗಳನ್ನು ನೀಡುತ್ತಿರುವುದು ಖಂಡನೀಯ' ಎಂದರು.

'ಕೇಂದ್ರ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದಿದೆ. ಆದರೆ ರಾಜ್ಯ ಸರ್ಕಾರ ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿ ಕಾಯ್ದೆಗಳನ್ನು ಹಿಂಪಡೆದಿಲ್ಲ. ಎಲ್ಲಾ ರೈತ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಉಗ್ರ ಹೋರಾಟ ಮಾಡಲಾಗುವುದು' ಎಂದು ಮಾಹಿತಿ ನೀಡಿದರು.

'ಕೇಂದ್ರ ಸರ್ಕಾರ ಖಾಸಗೀಕರಣದ ಹೆಸರಿನಲ್ಲಿ ರೈತರಿಗೆ ಮಾರಕವಾಗಿರುವ ವಿದ್ಯುತ್ ಕಾಯ್ದೆ ಜಾರಿಗೆ ತರಲು ಮುಂದಾಗಿದ್ದು, ಇದನ್ನು ಕೂಡಲೇ ಕೈಬಿಡಬೇಕು' ಎಂದೂ ಅವರು ಆಗ್ರಹಿಸಿದರು.

ಹಿಜಾಬ್: ಟಿಸಿ ಪಡೆದ ವಿದ್ಯಾರ್ಥಿನಿ

ಮಂಗಳೂರು: ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ಐವರು ವಿದ್ಯಾರ್ಥಿನಿಯರ ಪೈಕಿ ಒಬ್ಬರು ಬುಧವಾರ ವರ್ಗಾವಣೆ ಪ್ರಮಾಣಪತ್ರ (ಟಿಸಿ) ಪಡೆದುಕೊಂಡಿದ್ದಾರೆ. ಐವರು ಈ ಹಿಂದೆ ಟಿಸಿಗಾಗಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ಸಮರ್ಪಕವಾಗಿಲ್ಲ ಎಂಬ ಕಾರಣ ನೀಡಿ, ಮರು ಅರ್ಜಿ ಸಲ್ಲಿಸುವಂತೆ ಕಾಲೇಜಿನಿಂದ ಸೂಚಿಸಲಾಗಿತ್ತು.

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ




ದ್ರೌಪದಿ ಮುರ್ಮು ಗೆಲುವಿನ ಹಾದಿ ಸುಗಮ 11

ಅಫ್ಗಾನಿಸ್ತಾನದಲ್ಲಿ ಭೂಕಂಪ: ಸಾವಿರಕ್ಕೂ ಹೆಚ್ಚು ಮಂದಿ ಸಾವು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
51,822	15,413	₹ 52,630 (ಬೆಂಗಳೂರು)	₹62,800 (ಬೆಂಗಳೂರು)	78.40



ಆಳ–ಅಗಲ



ಅಂಬೇಡ್ಕರ್ ವಿಚಾರ ಕೈಬಿಟ್ಟ ಚಕ್ರತೀರ್ಥ ಸಮಿತಿ 9

ಪಟ್ಟು ಬಿಡದ ಶಿಂಧೆ, ಅಧಿಕೃತ ನಿವಾಸ ತೊರೆದ ಮುಖ್ಯಮಂತ್ರಿ ಠಾಕ್ರೆ

‘ಅಘಾಡಿ’ ಸರ್ಕಾರ ಅತಂತ್ರ

ಪ್ರಜಾವಾಣಿ ವಾರ್ತೆ



ಉದ್ಧವ್ ಠಾಕ್ರೆ

ಮುಂಬೈ: ಮಹಾರಾಷ್ಟ್ರದ ಮಹಾ ವಿಕಾಸ ಅಘಾಡಿ (ಎಂವಿಎ) ಸರ್ಕಾರದ ಭವಿಷ್ಯ ಇನ್ನೂ ಅತಂತ್ರವಾಗಿಯೇ ಇದೆ. ಅಘಾಡಿ ಸರ್ಕಾರವನ್ನು ಉರುಳಿಸುತ್ತೇವೆ ಎಂದು ಶಿವಸೇನಾ ಭಿನ್ನಮತೀಯ ಶಾಸಕ ಏಕನಾಥ ಶಿಂಧೆ ಅವರು ಹೇಳಿದ್ದಾರೆ.

ಪಕ್ಷದ ಶಾಸಕರು ಬಯಸಿದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಉದ್ಧವ್ ಠಾಕ್ರೆ ಅವರು ಬುಧವಾರ ಸಂಜೆ ಪ್ರತಿಕ್ರಿಯಿಸಿದ್ದಾರೆ. ಜತೆಗೆ, ‘ಶಿವಸೇನಾ ಶಾಸಕರೇ ಮುಖ್ಯಮಂತ್ರಿಯಾಗಬೇಕು’ ಎಂದು ಅವರು ಷರತ್ತು ಹಾಕಿದ್ದಾರೆ.

ಆದರೆ, ಉದ್ಧವ್ ಅವರು ರಾಜೀನಾಮೆ ನೀಡದೆ ಇದ್ದರೂ ಮುಖ್ಯಮಂತ್ರಿಗಳ ಅಧಿಕೃತ ನಿವಾಸವನ್ನು ತೊರೆದು ತಮ್ಮ ನಿವಾಸ ‘ಮಾತೋಶ್ರೀ’ಗೆ ಹೋಗಿದ್ದಾರೆ.

ಠಾಕ್ರೆ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ಶಿಂಧೆ, ‘ಶಿವಸೇನಾ ಉಳಿಯಬೇಕು ಎಂದಿದ್ದರೆ, ಎನ್‌ಸಿಪಿ ಮತ್ತು ಕಾಂಗ್ರೆಸ್ ಜತೆಗಿನ ಅಸಹಜ ಮೈತ್ರಿಯನ್ನು ತೊರೆಯಿರಿ’ ಎಂದು ಪಟ್ಟು ಹಿಡಿದಿದ್ದಾರೆ ಎಂದು ಮೂಲಗಳು ತಿಳಿಸಿವೆ.

11ನೇ ಪುಟ ನೋಡಿ

‘ವಿಸರ್ಜನೆಯತ್ತ ವಿಧಾನಸಭೆ...’

‘ಮಹಾರಾಷ್ಟ್ರ ವಿಧಾನಸಭೆಯು ವಿಸರ್ಜನೆಯತ್ತ ಜಾರುತ್ತಿದೆ’ ಎಂದು ಶಿವಸೇನಾ ವಕ್ತಾರ ಮತ್ತು ಸಂಸದ ಸಂಜಯ್ ರಾವುತ್ ಬುಧವಾರ ಬೆಳಿಗ್ಗೆ ಟ್ವೀಟ್ ಮಾಡಿದ್ದರು.

ವಿಧಾನಸಭೆಯನ್ನು ವಿಸರ್ಜನೆ ಮಾಡುವ ಯೋಚನೆಯನ್ನು ಎಂವಿಎ ಮಿತ್ರಪಕ್ಷಗಳಾದ ಎನ್‌ಸಿಪಿ ಮತ್ತು ಕಾಂಗ್ರೆಸ್ ವಿರೋಧಿಸಿವೆ. ಅದರ ಬೆನ್ನಲ್ಲೇ ರಾವುತ್ ಸ್ಪಷ್ಟನೆ ನೀಡಿದ್ದು, ‘ನಾನು ಹಲವು ದಶಕಗಳಿಂದ ರಾಜಕೀಯದಲ್ಲಿದ್ದೇನೆ. ಅದರ ಅನುಭವದಲ್ಲಿ ಈ ಮಾತು ಹೇಳಿದ್ದೇನೆ’ ಎಂದು ಹೇಳಿದ್ದಾರೆ.

ಕಾದು ನೋಡುವ ತಂತ್ರ: ಮಹಾರಾಷ್ಟ್ರ ಸರ್ಕಾರದ ಸದ್ಯದ ಸ್ಥಿತಿಯ ಬಗ್ಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

‘ಸರ್ಕಾರದಲ್ಲಿ ಏನಾಗಲಿದೆ ಎಂಬುದನ್ನು ಬಿಜೆಪಿ ಕಾದು ನೋಡಲಿದೆ’ ಎಂದಷ್ಟೇ ಅವರು ಹೇಳಿದ್ದಾರೆ.

ಶಿವಸೇನಾ ಬಿಜೆಪಿ ಜತೆ ಸೇರಲಿದೆ ಎಂದು ಹೇಳಲಾಗುತ್ತಿದೆ. ಬಿಜೆಪಿಯ ಜತೆಗಿದ್ದು, ನೋವು ಅನುಭವಿಸಿದ್ದೇವೆ. ಮತ್ತೆ ಅವರೊಟ್ಟಿಗೆ ಹೋಗಲು ಹೇಗೆ ಸಾಧ್ಯ?

ಉದ್ಧವ್ ಠಾಕ್ರೆ, ಮಹಾರಾಷ್ಟ್ರ ಮುಖ್ಯಮಂತ್ರಿ

ರಾಜ್ಯಪಾಲರಿಗೆ ಪತ್ರ

‘ಏಕನಾಥ ಶಿಂಧೆ ಅವರೇ ನಮ್ಮ ನಾಯಕ’ ಎಂದು 34 ಶಾಸಕರು ಸಹಿ ಮಾಡಿರುವ ಪತ್ರವನ್ನು ಶಿಂಧೆ ಅವರು ಬುಧವಾರ ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. 34ರಲ್ಲಿ, 30 ಶಿವಸೇನಾ ಮತ್ತು ನಾಲ್ವರು ಪಕ್ಷೇತರ ಶಾಸಕರಿದ್ದಾರೆ.

ಬಿಜೆಪಿಗೆ 106 ಶಾಸಕರ ಬಲವಿದೆ. ಈಗಿನ ಸರ್ಕಾರವನ್ನು ಉರುಳಿಸಿ, ತಮ್ಮ ಸರ್ಕಾರವನ್ನು ರಚಿಸಲು ಬಿಜೆಪಿಗೆ ಇನ್ನೂ 37 ಶಾಸಕರ ಅಗತ್ಯವಿದೆ. ಆದರೆ, ಮೂಲಗಳ ಪ್ರಕಾರ ಶಿಂಧೆ ಅವರ ಬಣದಲ್ಲಿ ಅಷ್ಟು ಶಾಸಕರಿಲ್ಲ. ಹೀಗಾಗಿ ಮತ್ತಷ್ಟು ಶಾಸಕರನ್ನು ಸೆಳೆಯುವ ಯತ್ನ ನಡೆಯುತ್ತಿದೆ. ಇದರ ಮಧ್ಯೆ, ‘ಗುವಾಹಟಿಯಲ್ಲಿರುವ ಶಾಸಕರಲ್ಲಿ 17 ಮಂದಿ ಮುಂಬೈಗೆ ವಾಪಸಾಗಲು ಸಿದ್ಧರಿದ್ದಾರೆ. ಆದರೆ, ಅವರನ್ನು ಬಲವಂತವಾಗಿ ಇರಿಸಿಕೊಳ್ಳಲಾಗಿದೆ’ ಎಂದು ಕಾಂಗ್ರೆಸ್ ಆರೋಪಿಸಿದೆ.



ಚಿನಕುರಳಿ

ಪ್ರಕಾಶ್ ಶೆಟ್ಟಿ



ಕುಪೆಕ ಪ್ರತಿನಿಧಿಗಳ ಸಭೆ ಬಳಿಕ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ

ಎಂಜಿನಿಯರಿಂಗ್ ಶುಲ್ಕ ಶೇ 10ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಶುಲ್ಕವನ್ನು ಶೇಕಡ 10ರಷ್ಟು ಹೆಚ್ಚಿಸಲು ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ.

ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಒಕ್ಕೂಟ (ಕುಪೆಕ) ಪ್ರತಿನಿಧಿಗಳ ಜತೆ ಬುಧವಾರ ಉನ್ನತಮಟ್ಟದ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ‘ಎರಡು ವರ್ಷಗಳಿಂದ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಶುಲ್ಕ ಹೆಚ್ಚಳಕ್ಕೆ ಅನುಮತಿ ನೀಡಿರಲಿಲ್ಲ. ಈ ಬಾರಿ ಶೇ 25ರಷ್ಟು ಶುಲ್ಕ ಹೆಚ್ಚಳಕ್ಕೆ ಕುಪೆಕ ಬೇಡಿಕೆ ಇಟ್ಟಿತ್ತು. ಶೇ 10ರಷ್ಟು ಶುಲ್ಕ ಹೆಚ್ಚಳಕ್ಕೆ ಮಾತ್ರ ಸಮ್ಮತಿ ಸೂಚಿಸಲಾಗಿದೆ’ ಎಂದರು.

‘ಶೇ 10ರಷ್ಟು ಶುಲ್ಕ ಹೆಚ್ಚಳಕ್ಕೆ ಎಂಜಿನಿಯರಿಂಗ್ ಕಾಲೇಜುಗಳ ಶುಲ್ಕ ನಿಗದಿ ಸಮಿತಿ ಶಿಫಾರಸು ಮಾಡಿತ್ತು. ಅದನ್ನು ಅಂಗೀಕರಿಸಿ, ಶುಲ್ಕ ಹೆಚ್ಚಳಕ್ಕೆ ಅವಕಾಶ ನೀಡಲಾಗಿದೆ. ನಿಗದಿತ ಶುಲ್ಕದ ಹೊರತಾಗಿ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಹಣ ಸಂಗ್ರಹಿಸದಂತೆ ಖಾಸಗಿ ಎಂಜಿನಿಯರಿಂಗ್ ಕಾಲೇಜು ಆಡಳಿತ ಮಂಡಳಿಗಳಿಗೆ ನಿರ್ದೇಶನ ನೀಡಲಾಗಿದೆ. ಅವರೂ ಒಪ್ಪಿಗೆ ಸೂಚಿಸಿದ್ದಾರೆ’ ಎಂದರು.

ಸಾಮಾನ್ಯ ವರ್ಗಕ್ಕೆ ಸೇರಿದ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಶೇ 45ರಷ್ಟು ಸೀಟುಗಳನ್ನು ಕಡಿಮೆ ದರದ ಶುಲ್ಕದಲ್ಲಿ ನೀಡಲಾಗುತ್ತದೆ.

5ನೇ ಪುಟ ನೋಡಿ

ಮುಂದಿನ ವರ್ಷದಿಂದ ಕಾಮೆಡ್‌–ಕೆ ರದ್ದು

‘ರಾಜ್ಯದಲ್ಲಿ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಮುಂದಿನ ವರ್ಷದಿಂದ ಕಾಮೆಡ್‌–ಕೆ ಪ್ರವೇಶ ಪರೀಕ್ಷೆ ಇರುವುದಿಲ್ಲ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

‘ಕಾಮೆಡ್‌–ಕೆ ಪ್ರವೇಶ ಪರೀಕ್ಷೆಯನ್ನು ರದ್ದುಮಾಡಿ, ಸರ್ಕಾರದ ಸಿಇಟಿಯ ಭಾಗವಾಗಲು ಖಾಸಗಿ ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳ ಒಕ್ಕೂಟ ಒಪ್ಪಿಕೊಂಡಿದೆ. ಈ ಸಂಬಂಧ ಒಪ್ಪಂದ ಮಾಡಿಕೊಂಡು, ಮುಂದಿನ ವರ್ಷದಿಂದ ಸಿಇಟಿ ಮೂಲಕ ವೃತ್ತಿಶಿಕ್ಷಣ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ನಡೆಸಲಾಗುವುದು’ ಎಂದರು.



‘ಲೋಕಸಭೆ ಚುನಾವಣೆ ಬಳಿಕ ಉ. ಕ ಪ್ರತ್ಯೇಕ ರಾಜ್ಯ’

ಬೆಳಗಾವಿ: ‘2024ರ ಲೋಕಸಭಾ ಚುನಾವಣೆಯ ಬಳಿಕ ಉತ್ತರ ಕರ್ನಾಟಕವು ಪ್ರತ್ಯೇಕ ರಾಜ್ಯವಾಗಿ ನಿರ್ಮಾಣ ಆಗಲಿದೆ’ ಎಂದು ಅರಣ್ಯ ಸಚಿವ ಉಮೇಶ ಕತ್ತಿ ಹೇಳಿದರು.

ಇಲ್ಲಿನ ಬಾರ್ ಅಸೋಸಿಯೇಷನ್ ವತಿಯಿಂದ ಬುಧವಾರ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತ ನಾಡಿ, ‘ದೇಶದಲ್ಲಿ 50 ಹೊಸ ರಾಜ್ಯಗಳನ್ನು ರಚನೆ ಮಾಡುವ ಕುರಿತು ಚರ್ಚೆ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರೇ ಇವುಗಳನ್ನು ರಚನೆ ಮಾಡಲಿದ್ದಾರೆ. ಇದರಲ್ಲಿ ಉತ್ತರ ಕರ್ನಾಟಕವೂ ಸೇರಿದೆ’ ಎಂದು ತಿಳಿಸಿದರು.

‘ಸದ್ಯ ಕರ್ನಾಟಕದ ಸಮಗ್ರ ಜನ ಸಂಖ್ಯೆಗೆ ಅನುಗುಣವಾಗಿ ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯ ಮಾಡುವುದು ನಿಶ್ಚಿತ. ಎಲ್ಲರೂ ಹೋರಾಟ ಮಾಡಲು ಸಿದ್ಧತೆ ಮಾಡಿಕೊಳ್ಳಬೇಕು. ಮಹಾರಾಷ್ಟ್ರವನ್ನು ಮೂರು ರಾಜ್ಯಗಳಾಗಿ, ಉತ್ತರ ಪ್ರದೇಶದಲ್ಲಿ ನಾಲ್ಕು ರಾಜ್ಯಗಳಾಗಿ ಮಾಡುವ ಪ್ರಸ್ತಾಪವೂ ಇದೆ’ ಎಂದರು.

‘ಬೆಂಗಳೂರಿನಲ್ಲಿ ಈಗಾಗಲೇ ಸಾಕಷ್ಟು ಐಟಿ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಇನ್ನು ಹೊಸ ಐಟಿ, ಬಿಟಿ ಕಂಪನಿ ಬರಲು ಸಾಧ್ಯವಿಲ್ಲ. ಉತ್ತರ ಕರ್ನಾಟಕದ ಜನರೇ ಬೆಂಗಳೂರಿಗೆ ಹೋಗಿ ಅಲ್ಲಿ ಕೆಲಸ ಮಾಡಬೇಕಾಗಿದೆ. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾದರೆ ಎಲ್ಲ ಕೆಲಸಗಳೂ ಇಲ್ಲೇ ಸಿಗಲಿವೆ’ ಎಂದೂ ಅವರು ಹೇಳಿದರು.

ಕೊಮ್ಮಘಟ್ಟ ಮಾದರಿ ಎಲ್ಲೆಡೆಯೂ ಬರಲಿ

ರಸ್ತೆ ದುರಸ್ತಿಗೊಳಿಸಿ



ನಾನು ದಿನವೂ ವಿದ್ಯಾರಣ್ಯಪುರದಿಂದ ವಸಂತ ನಗರಕ್ಕೆ ನ್ಯೂ ಬಿಇಎಲ್ ರಸ್ತೆ ಮೂಲಕ ಸಂಚರಿಸುತ್ತೇನೆ. ನ್ಯೂ ಬಿಇಎಲ್ ರಸ್ತೆ ಪ್ರವೇಶ ದ್ವಾರದಿಂದ ಸದಾಶಿವ ನಗರ ಪೊಲೀಸ್ ಸ್ಟೇಷನ್‌ವರೆಗಿನ ರಸ್ತೆ (ಎರಡೂ ಕಡೆ) ತುಂಬಾ ಗುಂಡಿಗಳಿವೆ. ದ್ವಿಚಕ್ರ ವಾಹನ, ಆಟೊ, ಕಾರಿನಲ್ಲಿ ಸರಾಗವಾಗಿ ಸಂಚರಿಸುವುದಕ್ಕೂ ತುಂಬಾ ಕಷ್ಟವಾಗುತ್ತದೆ. ಮಳೆ ಬಂದರೆ ರಸ್ತೆ ಎಲ್ಲಿದೆ, ಹಳ್ಳ ಎಲ್ಲಿದೆ ಎಂಬುದೇ ಗೊತ್ತಾಗುವುದಿಲ್ಲ.

ಎಂ.ಎಸ್. ರಾಮಯ್ಯ ಆಸ್ಪತ್ರೆ ಸುತ್ತಮುತ್ತ ರಾಜಕಾರಣಿಗಳ ಮನೆಗಳಿವೆ. ಆ ರಸ್ತೆಗಳು ಬಹಳ ಚೆನ್ನಾಗಿವೆ. ಸಂಚಾರ ದಟ್ಟಣೆ ಇರುವ ಈ ರಸ್ತೆಗಳಲ್ಲಿ ಟಾರ್ ಹಾಕಿದರೆ, ಗರ್ಭಿಣಿಯರು ಹಾಗೂ ಹಿರಿಯ ನಾಗರಿಕರು ಸೇರಿ ಎಲ್ಲರಿಗೂ ತುಂಬಾ ಅನುಕೂಲವಾಗುತ್ತದೆ. ಸಂಬಂಧ ಪಟ್ಟ ನಾಯಕರು ಈ ಕೋರಿಕೆಯನ್ನು ಪರಿಗಣಿಸಿ, ಸಾರ್ವಜನಿಕರಿಗೆ ಸಹಾಯ ಮಾಡಬೇಕೆಂದು ಮನವಿ.

ಇದಕ್ಕೆ 40 ತಿಂಗಳು ಬೇಕಾಗುವುದಿಲ್ಲ. ಗರಿಷ್ಠ 40 ದಿನ ಸಾಕು.

ಅಶ್ವಿನಿ ಕೆ. ವಿದ್ಯಾರಣ್ಯಪುರ.

ನಿಮ್ಮ ಪ್ರದೇಶದ ಸಮಸ್ಯೆ ತಿಳಿಸಿ

40 ವರ್ಷಗಳಿಂದ ಆಗದ ಅಭಿವೃದ್ಧಿಯನ್ನು 40 ತಿಂಗಳಲ್ಲಿ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ. ಬೆಂಗಳೂರಿನಲ್ಲಿ ನಿಮ್ಮ ಪ್ರದೇಶದ ಏನೆಲ್ಲಾ ಅಭಿವೃದ್ಧಿ ಬಾಕಿ ಇವೆ, ಜ್ವಲಂತ ಸಮಸ್ಯೆಗಳು ಏನೇನಿವೆ ಎಂಬುದನ್ನು ಸಾರ್ವಜನಿಕರು ‘ಪ್ರಜಾವಾಣಿ’ ಜತೆ ಹಂಚಿಕೊಳ್ಳಿ. ವಾಟ್ಸ್‌ಆ್ಯಪ್ ಮೂಲಕ ಸಂಕ್ಷಿಪ್ತವಾಗಿ ವಿವರ ಕಳುಹಿಸಿ. ಸಮಸ್ಯೆ ಬರೆಯುವುದರ ಜತೆಗೆ ನಿಮ್ಮದೊಂದು ಪಾಸ್‌ಪೋರ್ಟ್ ಅಳತೆಯ ಫೋಟೊ ಕೂಡ ‘ಅಟ್ಯಾಚ್’ ಮಾಡಿ ಕಳುಹಿಸಿ.

9606038256

ರಸ್ತೆ ನಿರ್ಮಿಸಿ



ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಕಾಮಾಕ್ಷಿಪಾಳ್ಯ ವಾರ್ಡ್‌ನಲ್ಲಿರುವ ಗೋಪಿ ಸ್ಕೂಲ್ ರಸ್ತೆಯನ್ನು ಎಂಇಎಸ್ ಸ್ಕೂಲ್ ರಸ್ತೆ ಜೊತೆ ಸಂಪರ್ಕಿಸಲು ಯಾವುದೇ ರಸ್ತೆ ಇಲ್ಲ. ಕಾಲು ದಾರಿಯಂತಹ ಸಣ್ಣ ಮಣ್ಣಿನ ರಸ್ತೆಯಲ್ಲಿಯೇ ಜನರು ಸಂಚರಿಸುತ್ತಿದ್ದು, ಸಾರ್ವಜನಿಕರು ಪ್ರತಿದಿನ ತೊಂದರೆ ಅನುಭವಿಸುವಂತಾಗಿದೆ. ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿಗಳು ಇತ್ತ ಗಮನ ಹರಿಸಿ ಆದಷ್ಟು ಬೇಗ ರಸ್ತೆ ನಿರ್ಮಿಸಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಸರಿಪಡಿಸಲು ಮನವಿ.

ಮಂಜುನಾಥ್ ನಾಯಕ್ ಕಾಮಾಕ್ಷಿಪಾಳ್ಯ




ಕಾಮಾಕ್ಷಿಪಾಳ್ಯ ವಾರ್ಡ್‌ನ ಗೋಪಿ ಸ್ಕೂಲ್ ರಸ್ತೆಯ ದುಃಸ್ಥಿತಿ

ಪಾಲಿಕೆ ಆರೋಗ್ಯ ಇಲಾಖೆಗೆ ಅನಾರೋಗ್ಯ



ಕಪಾಲಿ ರಸ್ತೆ ಮುಂಭಾಗ ಪಾದಚಾರಿ ಮಾರ್ಗ ಗಬ್ಬೆದ್ದು ನಾರುತ್ತಿರುವುದು



ಪ್ರಧಾನಿ ಮೋದಿಯವರ ಸ್ವಚ್ಛ ಭಾರತ ಅಭಿಯಾನಕ್ಕೆ ಬೆಂಗಳೂರು ನಗರ ಪಾಲಿಕೆ ತಿಲಾಂಜಲಿ ಇಟ್ಟಂತಾಗಿದೆ. ನಗರದ ಕೇಂದ್ರ ಭಾಗವಾಗಿರುವ ಕಪಾಲಿ ಚಿತ್ರಮಂದಿರದ ಮುಂಭಾಗದ ರಸ್ತೆ, ಧನ್ವಂತ್ರಿ ಹಾಗೂ ಸುಬೇದಾರ ಛತ್ರಂ ರಸ್ತೆಗಳು ಗಬ್ಬೆದ್ದು ನಾರುತ್ತಿವೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಪಾಲಿಕೆ ಆಯುಕ್ತರ ಕಣ್ಣಿಗೆ ಕಾಣುತ್ತಿಲ್ಲವೇ?

ಶಿವಪ್ರಸಾದ, ಸ್ಥಳೀಯ ನಿವಾಸಿ

ಸುದ್ದಿ 2 ನಿಮಿಷ


ಶ್ಯಾಮ ಪ್ರಸಾದ್ ಮುಖರ್ಜಿ ಬಲಿದಾನ ದಿನ: ಇಂದಿನಿಂದ ಅಭಿಯಾನ

ಬೆಂಗಳೂರು: ಭಾರತೀಯ ಜನಸಂಘದ ಸಂಸ್ಥಾಪಕರಾದ ಶ್ಯಾಮಪ್ರಸಾದ್ ಮುಖರ್ಜಿ ಅವರ ಬಲಿದಾನದ ದಿನವಾದ ಜೂನ್ 23 ರಿಂದ ಜುಲೈ 6 ರವರೆಗೆ ರಾಜ್ಯದಾದ್ಯಂತ ಮುಖರ್ಜಿ ಅವರ ಜೀವನ ಚರಿತ್ರೆ ಹಾಗೂ ಸೇವಾ ಚಟುವಟಿಕೆಗಳ ಮಾಹಿತಿಯನ್ನು ಎಲ್ಲ ಜಿಲ್ಲೆ, ಮಂಡಲ ಮತ್ತು ಬೂತ್‌ಗಳಿಗೆ ತಲುಪಿಸುವ ಕಾರ್ಯಕ್ರಮವನ್ನು ಬಿಜೆಪಿ ಹಮ್ಮಿಕೊಂಡಿದೆ.

ಈ ಕಾರ್ಯಕ್ರಮಗಳ ರಾಜ್ಯ ಸಂಚಾಲಕರನ್ನಾಗಿ ಬಿಜೆಪಿ ರಾಜ್ಯ ರೈತ ಮೋರ್ಚಾದ ಅಧ್ಯಕ್ಷ ಈರಣ್ಣ ಕಡಾಡಿ, ಸಹ ಸಂಚಾಲಕರನ್ನಾಗಿ ರಾಜ್ಯ ಕಾರ್ಯದರ್ಶಿ ಮುನಿರಾಜು ಗೌಡ ಮತ್ತು ಇನ್ನೊಬ್ಬ ಸಹ ಸಂಚಾಲಕರನ್ನಾಗಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಡಾ.ಸಂದೀಪ್ ಕುಮಾರ್ ಅವರನ್ನು ನೇಮಿಸಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಿಳಿಸಿದ್ದಾರೆ.

ಪ್ರತಿ ಬೂತ್‌ನಲ್ಲೂ ಮುಖರ್ಜಿ ಅವರ ಜೀವನ ಮತ್ತು ಆದರ್ಶಗಳ ಕುರಿತು ಬೆಳಕು ಚೆಲ್ಲುವ zಕಾರ್ಯ ನಡೆಯಲಿದೆ. ನಂತರ ಸಸಿ ನೆಡುವುದು, ಸೀಡ್ ಬಾಲ್ ತಯಾರಿಸಿ ವಿತರಿಸಲಾಗುವುದು ಎಂದು ಕಡಾಡಿ ತಿಳಿಸಿದ್ದಾರೆ.

ಬಿಬಿಎಂಪಿ ಕೌನ್ಸಿಲ್ ಸಭಾಂಗಣ ನವೀಕರಣ



ಬೆಂಗಳೂರು: ಬಿಬಿಎಂಪಿ ಸದಸ್ಯರ ಸಂಖ್ಯೆ 198ರಿಂದ 243ಕ್ಕೆ ಏರಿಕೆ ಆಗುತ್ತಿರುವುದರಿಂದ ಅವರಿಗೆ ಆಸನಗಳ ವ್ಯವಸ್ಥೆ ಮಾಡಲು ಬಿಬಿಎಂಪಿ ಸಿದ್ಧತೆ ಆರಂಭಿಸಿದೆ.

₹10 ಕೋಟಿ ವೆಚ್ಚದಲ್ಲಿ ಕೌನ್ಸಿಲ್ ಸಭಾಂಗಣ ನವೀಕರಣ ಕಾಮಗಾರಿಯನ್ನು ಪಾಲಿಕೆ ಆರಂಭಿಸಿದೆ. ಮೂರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ ಸಭಾಂಗಣದಲ್ಲಿ ಇದ್ದ ಆಸನಗಳಲ್ಲಿ 243 ಸದಸ್ಯರು, ಇವರೊಂದಿಗೆ ನಾಮನಿರ್ದೇಶಿತ ಸದಸ್ಯರು, ಅಧಿಕಾರಿ ಮತ್ತು ಸಿಬ್ಬಂದಿ ಕೂರಲು ಕಷ್ಟವಾಗಿತ್ತು. ಆದ್ದರಿಂದ ನವೀಕರಿಸಲು ನಿರ್ಧರಿಸಲಾಗಿದೆ ಎಂದರು.

16 ಸಾವಿರ ಫ್ಲೆಕ್ಸ್ ತೆರವುಗೊಳಿಸಿದ ಬಿಬಿಎಂಪಿ • ಒಂದು ವಾರದಲ್ಲಿ ಫ್ಲೆಕ್ಸ್ ತೆಗೆಯದಿದ್ದರೆ ಪ್ರಕರಣ

ಮೋದಿಗೆ ಸ್ವಾಗತದ ಫ್ಲೆಕ್ಸ್ ತೆರವಿಗೆ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ವಾಗತ ಕೋರಲು ಹಾಕಿದ್ದ ಫ್ಲೆಕ್ಸ್‌ಗಳ ತೆರವಿಗೆ ಒಂದು ವಾರ ಕಾಲಾವಕಾಶವನ್ನು ಬಿಬಿಎಂಪಿ ನೀಡಿದೆ. ಅಲ್ಲದೇ 16 ಸಾವಿರ ಫ್ಲೆಕ್ಸ್‌ಗಳನ್ನು ಪಾಲಿಕೆಯೇ ತೆರವುಗೊಳಿಸಿದೆ.

ನಗರದಲ್ಲಿ ಫ್ಲೆಕ್ಸ್ ಅಳವಡಿಕೆಗೆ ಅವಕಾಶ ನೀಡಬಾರದು ಎಂದು ಹೈಕೋರ್ಟ್ ಆದೇಶ ಹೊರಡಿಸಿದ್ದು, ಅದಾದ ನಂತರ ಯಾವುದೇ ಫ್ಲೆಕ್ಸ್ ಅಳವಡಿಕೆಗೆ ಬಿಬಿಎಂಪಿ ಅನುಮತಿ ನೀಡುತ್ತಿಲ್ಲ. ಆದರೂ, ಪ್ರಧಾನಿಯವರು ಬೆಂಗಳೂರಿಗೆ ಬಂದಾಗ ಅವರು ಸಂಚರಿಸಿದ ರಸ್ತೆಗಳಲ್ಲಿ ಸಾವಿರಾರು ಫ್ಲೆಕ್ಸ್, ಬಂಟಿಂಗ್‌ಗಳು ರಾರಾಜಿಸಿದವು.

ಯಾರ ವಿರುದ್ಧವೂ ಪ್ರಕರಣ ದಾಖಲಿಸದ ಬಿಬಿಎಂಪಿ ಈಗ, ಅವುಗಳ ತೆರವಿಗೆ ಒಂದು ವಾರ ಕಾಲಾವಕಾಶ ನೀಡಿದೆ. ‘ಹೈಕೋರ್ಟ್ ಆದೇಶದ ಪ್ರಕಾರ ಫ್ಲೆಕ್ಸ್ ಅಳವಡಿಕೆ ನಿಷೇಧ. ಅನಿವಾರ್ಯ ಸಂದರ್ಭದಲ್ಲಿ ವಿನಾಯಿತಿ ನೀಡಬೇಕಾಗುತ್ತದೆ. ತೆರವುಗೊಳಿಸಬೇಕು ಎಂದು ಜೂನ್ 18ರಂದೇ ಆದೇಶ ಹೊರಡಿಸಿದ್ದೇವೆ. ಒಂದು ವಾರದಲ್ಲಿ ತೆರವುಗೊಳಿಸದಿದ್ದರೆ ಪ್ರಕರಣ ದಾಖಲಿಸಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಪ್ರಧಾನಿ ಬಂದಿದ್ದ ಕಾರ್ಯಕ್ರಮ ಎಂಬ ಕಾರಣಕ್ಕೆ ಫ್ಲೆಕ್ಸ್ ಹಾಕಲು ಪಾಲಿಕೆ ಯಾರಿಗೂ ಅನುಮತಿ ನೀಡಿಲ್ಲ, ನೀಡುವ ಪ್ರಶ್ನೆಯೂ ಇಲ್ಲ. ಏಕಾಏಕಿ ಪ್ರಕರಣ ದಾಖಲಿಸುವ ಬದಲು ಕಾಲಾವಕಾಶ ನೀಡುವುದು ಸೂಕ್ತ. ವಾರದಲ್ಲಿ ತೆರವುಗೊಳಿಸದಿದ್ದರೆ ಅದರಲ್ಲಿರುವ ಹೆಸರುಗಳನ್ನು ಆಧರಿಸಿ ಪ್ರಕರಣ ದಾಖಲಿಸುತ್ತೇವೆ’ ಎಂದು ಹೇಳಿದರು.

‘ಬೇರೆ ಪಕ್ಷದವರು ಫ್ಲೆಕ್ಸ್ ಹಾಕಿದರೆ ಒಂದು ವಾರ ಕಾಲಾವಕಾಶ ನೀಡಲಾಗುವುದೇ’ ಎಂಬ ಪ್ರಶ್ನೆಗೆ, ‘ಇಲ್ಲ, ಯಾರಿಗೂ ಅವಕಾಶ ನೀಡುವುದಿಲ್ಲ. ವಿಶೇಷ ಸಂದರ್ಭ ಆಗಿದ್ದರಿಂದ ವಿನಾಯಿತಿ ನೀಡಬೇಕಾಗುತ್ತದೆ’ ಎಂದರು.

ಪ್ರಧಾನಿ ಹಾದು ಹೋದ ರಸ್ತೆ: 3 ವರ್ಷ ವೈಟ್‌ಟಾಪಿಂಗ್ ಇಲ್ಲ

‘ಪ್ರಧಾನಿ ಅವರು ಹಾದು ಹೋದ 14 ಕಿಲೋ ಮೀಟರ್ ರಸ್ತೆಯಲ್ಲಿ ಮೂರು ವರ್ಷಗಳ ಕಾಲ ವೈಟ್‌ಟಾಪಿಂಗ್ ಕಾಮಗಾರಿ ಕೈಗೊಳ್ಳುವುದಿಲ್ಲ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ಪಷ್ಟಪಡಿಸಿದರು.

‘ಪ್ರಧಾನಿ ಅವರು ಬರುವ ದಾರಿಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ತುರ್ತು ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ವೈಟ್‌ಟಾಪಿಂಗ್ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಿದ್ದ ರಸ್ತೆಗಳೂ ಇದರಲ್ಲಿವೆ. ವೈಟ್‌ಟಾಪಿಂಗ್ ಕಾಮಗಾರಿ ತುರ್ತಾಗಿ ನಿರ್ವಹಿಸಲು ಸಾಧ್ಯವಿಲ್ಲ. ಆದ್ದರಿಂದ ಡಾಂಬರ್ ಹಾಕಲಾಗಿದೆ’ ಎಂದರು.

ಮಳೆಯ ನಡುವೆ ಕಾಮಗಾರಿ ನಿರ್ವಹಿಸಿದ್ದರಿಂದ ಒಂದು ಕಡೆ ಗುಣಮಟ್ಟ ಸರಿ ಇಲ್ಲ ಎಂಬ ದೂರು ಇದೆ. ಪರಿಶೀಲಿಸಿ ಸರಿಪಡಿಸಲಾಗುವುದು ಎಂದು ಹೇಳಿದರು.

ನೆಕ್ಸಸ್ ಮಾಲ್‌ನಲ್ಲಿ ಜಿಯೊ–ಬಿಪಿ ಚಾರ್ಜಿಂಗ್ ಕೇಂದ್ರ

ಬೆಂಗಳೂರು: ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಬಿಪಿ ಕಂಪನಿ ಸಹಭಾಗಿತ್ವದ ‘ಜಿಯೊ-ಬಿಪಿ’ಯು ಬೆಂಗಳೂರು ಸೇರಿದಂತೆ ದೇಶದ 13 ನಗರಗಳಲ್ಲಿನ ನೆಕ್ಸಸ್ ಮಾಲ್‌ಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್‌ಗೆ ಅಗತ್ಯವಿರುವ ಮೂಲಸೌಕರ್ಯವನ್ನು ತಿಂಗಳಾಂತ್ಯಕ್ಕೆ ಒದಗಿಸಲಿದೆ.

ನೆಕ್ಸಸ್ ಮಾಲ್‌ಗಳಲ್ಲಿ ಬ್ಯಾಟರಿ ಸ್ವ್ಯಾಪಿಂಗ್ ಕೇಂದ್ರಗಳೂ ಆರಂಭವಾಗಲಿವೆ ಎಂದು ಜಿಯೊ–ಬಿಪಿ ಪ್ರಕಟಣೆ ತಿಳಿಸಿದೆ. ಮೊದಲ ಹಂತದಲ್ಲಿ ನವಿ ಮುಂಬೈ, ಬೆಂಗಳೂರು, ಹೈದರಾಬಾದ್, ಪುಣೆ ಮತ್ತು ಅಹಮದಾಬಾದ್‌ನ ನೆಕ್ಸಸ್ ಮಾಲ್‌ಗಳಲ್ಲಿ ಚಾರ್ಜಿಂಗ್ ಕೇಂದ್ರಗಳು ಶುರುವಾಗಲಿವೆ.

ಸ್ನಾತಕೋತ್ತರ ಪದವಿಗೆ ಆನ್‌ಲೈನ್ ಪ್ರವೇಶಾತಿ

ಬೆಂಗಳೂರು: ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಆನ್‌ಲೈನ್ ಮೂಲಕ ಪ್ರವೇಶಾತಿ ಕಲ್ಪಿಸಲಾಗುವುದು ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರು ತಿಳಿಸಿದ್ದಾರೆ.

ಉನ್ನತ ಶಿಕ್ಷಣ ಇಲಾಖೆಯು 2022-23ನೇ ಸಾಲಿನ ಪ್ರಥಮ ಪದವಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ‘ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ’ ಮೂಲಕ ಕೈಗೊಳ್ಳಲು ನಿರ್ದೇಶನ ನೀಡಿದೆ.

ಹೀಗಾಗಿ, ಬೆಂಗಳೂರು ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯಲ್ಲಿರುವ ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ನಡೆಸುತ್ತಿರುವ ಸಂಯೋಜಿತ ಕಾಲೇಜುಗಳಿಗೆ ಪ್ರವೇಶಾತಿಯನ್ನು ‘uucms’ ಪೋರ್ಟಲ್ ಮೂಲಕ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದೇ 28ರಿಂದ ಪ್ರವೇಶಾತಿ ಪ್ರಕ್ರಿಯೆಯು http://uucms.karnataka.gov.in/ ಮೂಲಕ ಪ್ರಾರಂಭವಾಗಲಿದೆ ಎಂದು ಕುಲಸಚಿವರು ತಿಳಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯವು ಬಿ.ಎ. ಮತ್ತು ಬಿ.ಎಸ್ಸಿ. (ಹಾನರ್ಸ್) ಪದವಿ ಕೋರ್ಸ್‌ಗಳನ್ನು ಜ್ಞಾನಭಾರತಿ ಆವರಣದಲ್ಲಿ ಪ್ರಾರಂಭಿಸಿದೆ. ಈ ಕೋರ್ಸ್‌ಗೂ ಪ್ರವೇಶಾತಿಗೆ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಬೇಡಿಕೆ ಈಡೇರಿಸಲು ನಾಳೆ ದಲಿತ ಸಂಘರ್ಷ ಸಮಿತಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತ, ದಮನಿತ ವರ್ಗಗಳ ಉಳಿವಿಗಾಗಿ ಭೂಮಿ, ವಸತಿ, ವಿದ್ಯಾರ್ಥಿವೇತನ, ಹಾಗೂ ಪಿಟಿಸಿಎಲ್ ಕಾಯ್ದೆ ತಿದ್ದುಪಡಿ, ದಲಿತರ ಮೇಲಿನ ದೌರ್ಜನ್ಯಗಳ ನಿಯಂತ್ರಣ, ನಾಗರಿಕ ಹಕ್ಕು ಜಾರಿ ದಳಕ್ಕೆ ರಕ್ಷಣಾತ್ಮಕ ಅಧಿಕಾರ ನೀಡಬೇಕು ಎಂದು ಆಗ್ರಹಿಸಿ ಜೂನ್ 24ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳ ಮುಂಭಾಗದಲ್ಲಿ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಿಳಿಸಿದೆ.

‘ಶಿಕ್ಷಣ ತಜ್ಞರಲ್ಲದ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯಲ್ಲಿ ಪರಿಷ್ಕರಿಸಿರುವ ಪಠ್ಯಪುಸ್ತಕಗಳನ್ನು ರದ್ದುಗೊಳಿಸಿ, ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ವಿತರಿಸಬೇಕು’ ಎಂದು ಸಮಿತಿಯ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

‘ನ್ಯಾಯಮೂರ್ತಿ ನಾಗಮೋಹನದಾಸ್ ನೀಡಿರುವ ವರದಿಯಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕು. ಪೌರಕಾರ್ಮಿಕರನ್ನು ಕಾಯಂಗೊಳಿಸಬೇಕು. ವಸತಿರಹಿತ ದಲಿತರಿಗೆ ಉಚಿತ ವಸತಿ ಕಲ್ಪಿಸಬೇಕು’ ಎಂದು ತಿಳಿಸಿದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಕಾಯ್ದಿರಿಸಿರುವ ಎಸ್‌ಸಿಪಿ–ಟಿಎಸ್‌ಪಿ ಹಣದ ದುರುಪಯೋಗವನ್ನು ತಡೆಗಟ್ಟಬೇಕು. ಕಾಯ್ದೆಯಲ್ಲಿರುವ ದಲಿತ ವಿರೋಧಿ ಸೆಕ್ಷನ್ 7(ಡಿ) ರದ್ದುಪಡಿಸಬೇಕು. ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೊಳಿಸಿ ಈಗಾಗಲೇ ನ್ಯಾಯಾಲಯಗಳಲ್ಲಿರುವ, ಪರಿಶಿಷ್ಟರ ವಿರುದ್ಧ ನೀಡಿರುವ ತೀರ್ಪುಗಳನ್ನು ರದ್ದು ಮಾಡಬೇಕು’ ಎಂದು ಒತ್ತಾಯಿಸಿದರು.

‘ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ನಿಯಂತ್ರಣ ಕಾಯ್ದೆ 1989) ರಕ್ಷಣಾತ್ಮಕ ಅಧಿಕಾರ ನೀಡಬೇಕು. ಬೇಡ ಜಂಗಮ ಸೇರಿದಂತೆ ಬೇರೆಯವರು ಪಡೆದಿರುವ ಸಾವಿರಾರು ಸುಳ್ಳು ಜಾತಿ ಪ್ರಮಾಣಪತ್ರಗಳನ್ನು ರದ್ದುಗೊಳಿಸಬೇಕು’ ಎಂದು ಹೇಳಿದರು.

ಸಂಚಾರ ಸಮಸ್ಯೆಯೇ ಮೂಲ ವಿಚಾರ

ಬಿಬಿಎಂಪಿ ಚುನಾವಣೆ: ಜನಾಗ್ರಹ ಸಂಸ್ಥೆಯಿಂದ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಗರದ 8 ವಲಯಗಳ 27 ವಾರ್ಡ್‌ಗಳಲ್ಲಿ ನಡೆದ ಸಮೀಕ್ಷೆ
- ಶೇ 86 ಜನ ಮೊದಲ ಬಾರಿಗೆ ಮತದಾನ ಮಾಡಲು ಕಾತರ
- ಪಾದಚಾರಿ ಮಾರ್ಗಗಳ ಬಗ್ಗೆ ಜನರ ತೀವ್ರ ಅಸಮಾಧಾನ

ಬೆಂಗಳೂರು: ಬಿಬಿಎಂಪಿ ಚುನಾವಣೆ ಕೆಲವೇ ತಿಂಗಳಲ್ಲಿ ನಡೆಯಲಿದ್ದು, ‘ಜನಾಗ್ರಹ ಸೆಂಟರ್ ಫಾರ್ ಸಿಟಿಜನ್‌ಶಿಪ್ ಆ್ಯಂಡ್ ಡೆಮಾಕ್ರಸಿ ಸಂಸ್ಥೆ’ ನಡೆಸಿದ ಕೇಂದ್ರ ನಗರ ರಾಜಕೀಯ ಸಮೀಕ್ಷಾ ವರದಿ’ಯನ್ನು ಮಂಗಳವಾರ ಬಿಡುಗಡೆಗೊಳಿಸಿದೆ.

ನಗರ ಮತ್ತು ವಾರ್ಡ್‌ಗಳ ಆಡಳಿತದ ಬಗ್ಗೆ ಮತದಾರರಲ್ಲಿ ಜಾಗೃತಿ ಮೂಡಿಸಲು ಮತ್ತು ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಲು ‘ಜನಾಗ್ರಹದ ನಗರ ರಾಜಕೀಯ ಸಮೀಕ್ಷೆ’ಯನ್ನು ನಡೆಸಲಾಯಿತು ಎಂದು ಜನಾಗ್ರಹ ಸಹಭಾಗಿತ್ವದ ಮುಖ್ಯಸ್ಥ ಶ್ರೀನಿವಾಸ ಅಲವಿಲ್ಲಿ ಹೇಳಿದರು.

‘2021ರ ಡಿಸೆಂಬರ್ 16ರಿಂದ 2022ರ ಜನವರಿ 2ರವರೆಗೆ ನಡೆದ ಸಮೀಕ್ಷೆಯಲ್ಲಿ ಬೆಂಗಳೂರಿನ ಎಂಟು ವಲಯಗಳ 27 ವಾರ್ಡ್‌ಗಳ ವಿವಿಧ ವಯೋಮಿತಿ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಹಿನ್ನೆಲೆಗೆ ಸೇರಿದ 503 ಜನ ಭಾಗಿಯಾಗಿದ್ದರು. ಈ ವರ್ಷದ ಬಿಬಿಎಂಪಿ ಚುನಾವಣೆಯಲ್ಲಿ ಶೇ 86ರಷ್ಟು ಜನ ಪ್ರಥಮ ಬಾರಿಗೆ ಮತ ಚಲಾವಣೆ ಮಾಡಲು ಉತ್ಸುಕರಾಗಿದ್ದಾರೆ. ಹವಾಮಾನ ವೈಪರೀತ್ಯದಿಂದಾಗಿ ಉಂಟಾಗುವ ಸಮಸ್ಯೆಗಳ ನಿವಾರಣೆ ಮತ್ತು ಶೇ 88ರಷ್ಟು ಮತದಾರರಿಗೆ ಸುಸಜ್ಜಿತ ಸ್ಥಳೀಯ ಆಡಳಿತ ನೀಡುವಂತಹ ಬಲಿಷ್ಠ ಬಿಬಿಎಂಪಿ ಭವಿಷ್ಯಕ್ಕೆ ಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ’ ಎಂದು ಮಾಹಿತಿ ನೀಡಿದರು.

ನಗರದಲ್ಲಿರುವ ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇ 23ರಷ್ಟು ಜನ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಗೊಳಿಸಬೇಕು ಎಂದಿದ್ದಾರೆ. ಶೇ 20ರಷ್ಟು ಜನ ಸಮರ್ಪಕ ತ್ಯಾಜ್ಯ ವಿಲೇವಾರಿಗೆ ಆದ್ಯತೆ ನೀಡಬೇಕು ಎಂದು ಹೇಳಿದರೆ, ಶೇ 16ರಷ್ಟು ಮಂದಿ ಸಂಚಾರ ದಟ್ಟಣೆ ಮತ್ತು ಶೇ 15ರಷ್ಟು ಜನ ಕುಡಿಯುವ ನೀರಿನ ತಮ್ಮ ಪ್ರಮುಖ ಸಮಸ್ಯೆಗಳಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ತಮ್ಮ ಪ್ರಣಾಳಿಕೆಯಲ್ಲಿ ಈ ಸಮಸ್ಯೆಗಳ ನಿವಾರಣೆಗೆ ಆದ್ಯತೆ ನೀಡಬೇಕು’ ಎಂದು ಅವರು ತಿಳಿಸಿದರು.

‘ಶೇ 82ರಷ್ಟು ಮತದಾರರು ಬಿಬಿಎಂಪಿ ಮತ್ತು ಇತರೆ ಆಡಳಿತ ಸಂಸ್ಥೆಗಳಾದ ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಟಿಸಿ ಸಹಕಾರದೊಂದಿಗೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು. ಜೊತೆಗೆ ಶೇ 94ರಷ್ಟು ಜನರಿಗೆ 2021–22ರ ಆರ್ಥಿಕ ಸಾಲಿನಲ್ಲಿ ಬಿಬಿಎಂಪಿ ಪ್ರತಿ ವಾರ್ಡ್‌ನ ಅಭಿವೃದ್ಧಿಗೆ ₹60 ಲಕ್ಷ ಹಂಚಿಕೆ ಮಾಡಿರುವ ಬಗ್ಗೆ ತಿಳಿದಿಲ್ಲ’ ಎಂಬುದು ಸಮೀಕ್ಷೆ ವರದಿಯಲ್ಲಿ ತಿಳಿದುಬಂದಿದೆ.

ಸಪ್ನಾ ಕರೀಂ, ತನಿಮಾ ದುಬೆ, ಮಹಾಲಕ್ಷ್ಮಿ ಮತ್ತು ಮಂಜುನಾಥ ಹಂಪಾಪುರ್ ಎಲ್. ಇದ್ದರು.

ಕಡಬದಲ್ಲಿ ಸಾಂಕ್ರಾಮಿಕ ರೋಗ

ಕಡಬ (ದಕ್ಷಿಣ ಕನ್ನಡ): ಇಲ್ಲಿನ ಖಾಸಗಿ ಶಾಲೆಯೊಂದರ ವಿದ್ಯಾರ್ಥಿಗಳಲ್ಲಿ ಸಾಂಕ್ರಾಮಿಕ ರೋಗ(ಚಿಕನ್ ಪಾಕ್ಸ್) ಹರಡುತ್ತಿದ್ದು, ಶಾಲೆಗೆ ಒಂದು ವಾರ ರಜೆ ನೀಡಲಾಗಿದೆ.

‘ಈ ಶಾಲೆಯ ವಿದ್ಯಾರ್ಥಿಗಳಲ್ಲಿ ವಾರದಿಂದ ಜ್ವರ ಹಾಗೂ ರೋಗ ಲಕ್ಷಣಗಳು ಕಂಡುಬಂದಿದ್ದು, ಆರೋಗ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದರು. ರೋಗ ವ್ಯಾಪಿಸದಂತೆ ಕ್ರಮಕ್ಕೆ ಶಿಕ್ಷಣ ಇಲಾಖೆಗೆ ಸೂಚಿಸಿದ್ದೆವು’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಕಿಶೋರ್ ಕುಮಾರ್ ತಿಳಿಸಿದರು.

‘ಗುತ್ತಿಗೆ ಕೆಲಸ ಕೈಬಿಡಿ, ಕಾಯಂ ಹುದ್ದೆ ನೀಡಿ’

ಪ್ರಜಾವಾಣಿ ವಾರ್ತೆ



ಅಗ್ನಿಪಥ ಯೋಜನೆ ವಿರೋಧಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ


ಬೆಂಗಳೂರು: ಅಗ್ನಿಪಥ ಯೋಜನೆ ಕೈಬಿಡಬೇಕು ಎಂದು ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

‘ಅಗ್ನಿಪಥ ಯೋಜನೆಯನ್ನು ಕೈಬಿಟ್ಟು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಗುತ್ತಿಗೆ ಕೆಲಸಗಳನ್ನು ಕೈಬಿಟ್ಟು ಕಾಯಂ ಉದ್ಯೋಗ ನೀಡಬೇಕು. ನಿರುದ್ಯೋಗಿ ಯುವಕರೊಂದಿಗೆ ಚೆಲ್ಲಾಟವಾಡುತ್ತಿರುವ ಸರ್ಕಾರಕ್ಕೆ ಧಿಕ್ಕಾರ’ ಎಂದು ಎಐಡಿವೈಒ ಸಂಘಟನೆ ರಾಜ್ಯ ಘಟಕದ ಉಪಾಧ್ಯಕ್ಷ ಕೃಷ್ಣ ಆಕ್ರೋಶ ವ್ಯಕ್ತಪಡಿಸಿದರು.

‘ಅಗ್ನಿಪಥ ಯೋಜನೆಯು ಉದ್ಯೋಗ ಭದ್ರತೆಯ ಬುನಾದಿಗೆ ಪೆಟ್ಟು ನೀಡುವಂತಹದ್ದು. ನಿರುದ್ಯೋಗ ಸಮಸ್ಯೆ ಪರಿಹರಿಸಲು ಸರ್ಕಾರ ಶ್ರಮ ವಹಿಸುತ್ತಿದೆ ಎಂದು ಬಿಂಬಿಸಿ, ಯುವಜನರನ್ನು ವಂಚಿಸುವ ತಂತ್ರವಾಗಿದೆ’ ಎಂದು ಆರೋಪಿಸಿದರು.

‘ಅಗ್ನಿಪಥ ಯೋಜನೆ ಅಡಿಯಲ್ಲಿ 4 ವರ್ಷ ರಕ್ಷಣಾ ಪಡೆಯಲ್ಲಿ ಕಾರ್ಯನಿರ್ವಹಿಸಿದ ನಂತರ ನಾಗರಿಕ ಸಮಾಜಕ್ಕೆ ಕಾಲಿಡುವ ಯುವಕರ ಜೀವನ ದುಸ್ತರವಾಗಲಿದೆ. ರಕ್ಷಣಾ ಪಡೆಯಲ್ಲಿ ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇದ್ದರೂ, ಭರ್ತಿ ಮಾಡಿಕೊಳ್ಳಲು ಸರ್ಕಾರ ಆಸಕ್ತಿ ತೋರಿಸುತ್ತಿಲ್ಲ’ ಎಂದು ದೂರಿದರು.

ತರಬೇತಿ ಪಡೆದ ಅಗ್ನಿವೀರರನ್ನು ಪಕ್ಷದ ಸೆಕ್ಯುರಿಟಿ ಗಾರ್ಡ್‌ಗಳಾಗಿ ನೇಮಿಸಿಕೊಳ್ಳಲಾಗುವುದು ಎಂದು ಬಿಜೆಪಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ ಹೇಳಿಕೆ ಖಂಡನೀಯ. ಮುಂದಿನ ದಿನಗಳಲ್ಲಿ ತರಬೇತಿ ಪಡೆದ ನಿರುದ್ಯೋಗಿ ಪಡೆಯನ್ನು ಹೇಗೆಲ್ಲಾ ಬಳಸಿಕೊಳ್ಳಬಹುದು ಎಂದು ಸಂಘಟನೆ ಜಿಲ್ಲಾ ಕಾರ್ಯದರ್ಶಿ ಜಯಣ್ಣ ಆತಂಕ ವ್ಯಕ್ತಪಡಿಸಿದರು.



ಆನೇಕಲ್ ಬನ್ನೇರುಘಟ್ಟ ಜೈವಿಕ ಉದ್ಯಾನಲ್ಲಿ ಮೃತಪಟ್ಟಿರುವ ಕಾಡೆಮ್ಮೆ ಕುಮ್ಮಾ

ಬನ್ನೇರುಘಟ್ಟ : ಕಾಡೆಮ್ಮೆ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಸಸ್ಯಾಹಾರಿ ಸಫಾರಿಯಲ್ಲಿನ ಕಾಡೆಮ್ಮೆ ಕುಮ್ಮಾ(11) ಮೃತಪಟ್ಟಿದೆ.

ಕುಮ್ಮಾಳನ್ನು 2012ರಲ್ಲಿ ಮೈಸೂರಿನ ಚಾಮರಾಜೇಂದ್ರ ಮೃಗಾಲಯದಿಂದ ತರಲಾಗಿತ್ತು. ಈ ಕಾಡೆಮ್ಮೆಯು ಬನ್ನೇರುಘಟ್ಟ ಉದ್ಯಾನಕ್ಕೆ ಬಂದ ನಂತರ ಎರಡು ಗಂಡು ಮತ್ತು ಎರಡು ಹೆಣ್ಣು ಮರಿಗಳಿಗೆ ಜನ್ಮ ನೀಡಿದೆ. ಜೈವಿಕ ಉದ್ಯಾನದ ಸಸ್ಯಾಹಾರಿ ಸಫಾರಿಯಲ್ಲಿ 10 ಕಾಡೆಮ್ಮೆಗಳಿದ್ದವು. ಕುಮ್ಮಾ ನಿಧನದಿಂದ ಕಾಡೆಮ್ಮೆಗಳ ಸಂಖ್ಯೆ ಇದೀಗ 9ಕ್ಕೆ ಇಳಿದಿದೆ ಎಂದು ಉದ್ಯಾನವನ ತಿಳಿಸಿದೆ.

ಈ ಕಾಡೆಮ್ಮೆ ಕರುಳಿನ ತೊಂದರೆಯಿಂದ ಬಳಲುತ್ತಿತ್ತು ಎನ್ನಲಾಗಿದ್ದು, ಮರಣೋತ್ತರ ಪರೀಕ್ಷೆಯ ನಂತರ ಅಂಗಾಂಗಗಳ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಉದ್ಯಾನದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಗರದಲ್ಲಿ ಇಂದು

‘ದಲಿತ ಮತ್ತು ಮಹಿಳಾ ಸಾಹಿತ್ಯ–ಹೊಸ ಸಾಧ್ಯತೆಗಳು’ ಉಪನ್ಯಾಸ ಕಾರ್ಯಕ್ರಮ: ಉದ್ಘಾಟನೆ: ಡಾ.ಎಲ್. ಹನುಮಂತಯ್ಯ, ಅಧ್ಯಕ್ಷತೆ: ಡಾ.ವಿಕ್ಟರ್ ಲೋಬೊ.ಎಸ್.ಜೆ, ಉಪಸ್ಥಿತಿ: ಡಾ.ಈರಯ್ಯ ಹಂಪಾಪುರ, ಆಯೋಜಕರು: ಸಂತ ಜೋಸೆಫರ ಕಾಲೇಜು, ಸ್ಥಳ: ಕಾಲೇಜಿನ ಕ್ಸೇವಿಯರ್ ಹಾಲ್ (ಪಿ.ಜಿ. ಬ್ಲಾಕ್), ಲಾಂಗ್‌ಫೋರ್ಡ್ ರಸ್ತೆ, ಬೆಳಿಗ್ಗೆ: 10

ಡಾ.ಜಯದೇವಿತಾಯಿ ಲಿಗಾಡೆ ಅವರ 110ನೇ ಜನ್ಮದಿನಾಚರಣೆ ಸಮಾರಂಭ: ಉದ್ಘಾಟನೆ: ಸಚಿನ್ ಕಲ್ಯಾಣಶೆಟ್ಟಿ, ಉಪಸ್ಥಿತಿ: ಲೀಲಾದೇವಿ. ಆರ್.ಪ್ರಸಾದ್, ಡಾ.ಮಧುಮಾಲಾ ಲಿಗಾಡೆ, ಡಾ.ನಿರ್ಮಲಾ ಎಲಿಗಾರ್, ಅಧ್ಯಕ್ಷತೆ: ಡಾ.ಸಿ. ಸೋಮಶೇಖರ, ಆಯೋಜಕರು: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸುಮಂಗಲಿ ಸೇವಾಶ್ರಮ, ಸ್ಥಳ: ಗಾಂಧಿಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ: 10.30

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–4, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕಳಿಗೆ ಮಹಾಬಲ ಭಂಡಾರಿ, ಜಯದೇವಿತಾಯಿ ಲಿಗಾಡೆ– ಕನ್ನಡ ಕೆಲಸ ಚಿಂತನೆ: ಅಧ್ಯಕ್ಷತೆ: ವ.ಚ. ಚನ್ನೇಗೌಡ, ಉಪಸ್ಥಿತಿ: ಡಾ.ಎಸ್.ಎಲ್. ಮಂಜುನಾಥ್, ರಾ.ನಂ. ಚಂದ್ರಶೇಖರ, ಡಾ.ಪೂರ್ಣಿಮಾ.ಎಸ್, ಆಯೋಜಕರು: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು ಬಸವನಗುಡಿ, ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ: 11

ರಾಜ್ಯಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶದ ಸಮಾರೋಪ ಸಮಾರಂಭ: ಅತಿಥಿಗಳು: ಡಾ.ಸಿ. ಸೋಮಶೇಖರ್, ಅಧ್ಯಕ್ಷತೆ: ವಿ.ಎಸ್. ಕುಬೇರ, ಎಚ್. ಹನುಮಂತಪ್ಪ, ಶಶಿಕಲಾ.ವಿ. ಟೆಂಗಳಿ, ಪ್ರಮೀಳಾ ನಾಯ್ಡು. ಆರ್, ಡಾ.ಎಸ್. ರಾಜೇಂದ್ರಪ್ರಸಾದ್, ಲೀಲಾದೇವಿ.ಆರ್. ಪ್ರಸಾದ್, ರಾಣಿ ಸತೀಶ್, ಮೋಟಮ್ಮ, ಡಾ.ಎಸ್.ಜಿ. ಸುಶೀಲಮ್ಮ, ಡಾ.ನಿರ್ಮಲಾ ಎಲಿಗಾರ್, ನಾಗರಾಜಮೂರ್ತಿ, ಆಯೋಜಕರು: ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸುಮಂಗಲಿ ಸೇವಾ ಆಶ್ರಮ, ಸ್ಥಳ: ಗಾಂಧಿಭವನ ಸಭಾಂಗಣ, ಕುಮಾರ ಕೃಪಾ ರಸ್ತೆ, ಸಂಜೆ: 4

‘ಅನಭಿಷಿಕ್ತ ದೊರೆ’ ಯಕ್ಷಗಾನ ತಾಳಮದ್ದಳೆ ಪರ್ವ: ಹಿಮ್ಮೇಳ: ಕಾವ್ಯಶ್ರೀ ನಾಯಕ ಆಜೇರು, ಶ್ರೀಶಾ ರಾವ್ ನಿಡ್ಲೆ, ಅಕ್ಷಯ ರಾವ್ ವಿಟ್ಲ, ಮುಮ್ಮೇಳ: ಸುಣ್ಣಂಬಳ ವಿಶ್ವೇಶ್ವರ ಭಟ್, ಉಜಿರೆ ಅಶೋಕ ಭಟ್, ಅಜಿತ ಕಾರಂತ, ಸಿಬಂತಿ ಪದ್ಮನಾಭ ಕೆ.ವಿ, ಅವಿನಾಶ ಶೆಟ್ಟಿ ಉಬರಡ್ಕ, ಪ್ರಸನ್ನ ಮಾಗೋಡು, ಆಯೋಜಕರು: ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಪಲಿಮಾರು ಮಠ, ಮಲ್ಲೇಶ್ವರ, ಸಂಜೆ: 4.45



ದಿಶಾ ಟ್ರಸ್ಟ್‌ನ ವಿದ್ಯಾರ್ಥಿಗಳು

ಭರತನಾಟ್ಯ ಪ್ರದರ್ಶನ: **ಪ್ರಸ್ತುತಿ:** ದಿಶಾ ಟ್ರಸ್ಟ್‌ನ ವಿದ್ಯಾರ್ಥಿಗಳು, ಸಾನ್ನಿಧ್ಯ: ಸುಬುಧೇಂದ್ರತೀರ್ಥ ಸ್ವಾಮೀಜಿ, ನಿರ್ದೇಶನ: ದರ್ಶಿನಿ ಮಂಜುನಾಥ್, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ: 7.30

ಭಾಷಾಭಿಮಾನ ಹಾಗೂ ಶುದ್ಧ ಬರವಣಿಗೆ ಉಪನ್ಯಾಸ ಕಾರ್ಯಕ್ರಮ: **ಉಪನ್ಯಾಸಕರು:** ಗಿರಿಜಾ ಶಂಕರ ದೇಶಪಾಂಡೆ, ಉಪಸ್ಥಿತಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಮಹಾಂತೇಶ ದೇಗಾವಿ, ಆಯೋಜಕರು: ಕನ್ನಡ ಯುವಜನ ಸಂಘ, ಸ್ಥಳ: ಕನ್ನಡ ಯುವಜನ ಸಂಘ ಸಭಾಂಗಣ, ಎಚ್. ಸಿದ್ದಯ್ಯ ರಸ್ತೆ ಹೊಂಬೇಗೌಡ ನಗರ, ಸಂಜೆ: 6.30

ಹೊಸದಾಗಿ ಕರೆಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಧಾರ

‘ಪಿಆರ್‌ಆರ್’ ಯೋಜನೆ ಟೆಂಡರ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆಯ ಟೆಂಡರ್ ಪ್ರಕ್ರಿಯೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ರದ್ದುಪಡಿಸಿದೆ.

ಹೊಸದಾಗಿಯೇ ಟೆಂಡರ್ ಕರೆಯಲು ಬಿಡಿಎ ನಿರ್ಧರಿಸಿದೆ. ಭೂಸ್ವಾಧೀನ ಮತ್ತು ವಾಹನಗಳ ಸಂಚಾರ ದಟ್ಟಣೆಗೆ ಸಂಬಂಧಿಸಿದಂತೆ ಮತ್ತಷ್ಟು ವಿವರಗಳ ಅಗತ್ಯವಿದೆ ಎಂದು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ಹೂಡಿಕೆದಾರರು ತಿಳಿಸಿದ್ದರಿಂದ ಬಿಡಿಎ ಈ ತೀರ್ಮಾನ ಕೈಗೊಂಡಿದೆ.

ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಬಿಡಿಎ ಕಾಯ್ದೆಯೇ ಅನ್ವಯವಾಗುತ್ತ-ದೆ. ಹೀಗಾಗಿ, ‘ನ್ಯಾಯಯುತ ಪರಿಹಾರ ಹಕ್ಕು ಮತ್ತು ಭೂಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಕಾಯ್ದೆ-2013’ ಅನ್ವಯವಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಆದೇಶವನ್ನು ಬಿಡಿಎ ಅಧಿಕಾರಿಗಳು ಉಲ್ಲೇಖಿಸಿದ್ದರು.

2013ರ ಕಾಯ್ದೆ ಅನ್ವಯ ಪರಿಹಾರ ನೀಡುವುದಾದರೆ ₹14 ಸಾವಿರ ಕೋಟಿ ಪಾವತಿಸಬೇಕಾಗುತ್ತದೆ ಎಂದು ಬಿಡಿಎ ಕಳೆದ ವರ್ಷ ಅಂದಾಜಿಸಿತ್ತು.

ತುಮಕೂರು ರಸ್ತೆಯಿಂದ ಹೊಸೂರು ರಸ್ತೆ ಸಂಪರ್ಕಕ್ಕೆ ಪಿಆರ್‌ಆರ್ ನಿರ್ಮಿಸಲಾಗುತ್ತಿದೆ. ಸುಮಾರು 74 ಕಿ.ಮೀ ಉದ್ದದ ಹಾಗೂ ಎಂಟು ಪಥಗಳ ಪಿಆರ್‌ಆರ್ ಸರ್ವಿಸ್ ರಸ್ತೆಗಳನ್ನೂ ಒಳಗೊಳ್ಳಲಿದೆ. 100 ಮೀ. ಅಗಲದ ರಸ್ತೆ ಹಾಗೂ ಸೇತುವೆಗಳು, ಮೇಲ್ಸೇತುವೆಗಳು, ರೈಲ್ವೆ ಕೆಳ ಸೇತುವೆಗಳು, ರೈಲ್ವೆ ಮೇಲ್ಸೇತುವೆಗಳು ಈ ಯೋಜನೆ ಅಡಿಯಲ್ಲಿ ನಿರ್ಮಾಣ-ವಾಗಲಿವೆ. ಈ ಯೋಜನೆಗೆ 2,560 ಎಕರೆ ಜಮೀನು ಅಗತ್ಯವಿದೆ ಎಂದು ಅಂದಾಜಿಸಲಾಗಿದೆ.

ಮುಂದಿನ ಟೆಂಡರ್ ಅನ್ನು ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿಯು ಅನುಮೋದನೆ ನೀಡಿದ ಬಳಿಕ ಕರೆಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಿಂದಿನ ಟೆಂಡರ್‌ನಲ್ಲಿ ಎರಡು ವಿದೇಶಿ ಕಂಪನಿಗಳು ಸೇರಿದಂತೆ ಎಂಟು ಕಂಪನಿಗಳು ಭಾಗವಹಿಸಲು ಆಸಕ್ತಿ ತೋರಿದ್ದವು. ಭಾರತದ ನಾಗರ್ಜುನ್, ಐಆರ್‌ಬಿ, ಅದಾನಿ, ಎಲ್ ಆ್ಯಂಡ್ ಟಿ ಸೇರಿದಂತೆ ಆರು ಕಂಪನಿಗಳು ಆಸಕ್ತಿ ವಹಿಸಿದ್ದವು. ಈ ಯೋಜನೆಯ ಬಗ್ಗೆ ಅಧ್ಯಯನ ಮಾಡಲು ಹೆಚ್ಚು ಸಮಯಾವಕಾಶವನ್ನು ಕೋರಿವೆ ಎಂದು ತಿಳಿಸಿದ್ದಾರೆ.

‘ಅಧ್ಯಯನಕ್ಕೆ ಹೆಚ್ಚು ಸಮಯಾವಕಾಶ ಅಗತ್ಯವಿದೆ’

‘ಪೆರಿಫೆರಲ್ ವರ್ತುಲ ರಸ್ತೆ ಯೋಜನೆಯ ಬಗ್ಗೆ ಅಧ್ಯಯನ ಮಾಡಲು ಕಂಪನಿಗಳು ಹೆಚ್ಚಿನ ಸಮಯಾವಕಾಶ ಕೋರಿವೆ’ ಎಂದು ಬಿಡಿಎ ಆಯುಕ್ತ ರಾಜೇಶ್ ಗೌಡ ತಿಳಿಸಿದ್ದಾರೆ.

‘ಈ ಯೋಜನೆಗಾಗಿ ಕರೆಯಲಾಗಿದ್ದ ಟೆಂಡರ್‌ನಲ್ಲಿ ಭಾಗವಹಿಸಲು ಮೊದಲು ಒಂದು ತಿಂಗಳು ಕಾಲಾವಕಾಶ ನೀಡಲಾಗಿತ್ತು. ನಂತರ 3 ವಾರಗಳ ಸಮಯ ನೀಡಲಾಯಿತು. ಈ ಅವಧಿಯಲ್ಲಿ ಬಿಡ್‌ಗಳು ಬಂದಿಲ್ಲ. ಪ್ರಿ–ಬಿಡ್‌ನಲ್ಲಿ 8 ಕಂಪನಿಗಳು ಭಾಗವಹಿಸಿದ್ದವು. ಬಹುತೇಕ ಕಂಪನಿ ಗಳಿಗೆ ಹೆಚ್ಚಿನ ಸಮಯಾವಕಾಶ ಬೇಕಾಗಿದೆ. ಮುಖ್ಯವಾಗಿ ಟ್ರಾಫಿಕ್ ಅಧ್ಯಯನ ಮಾಡಬೇಕಾಗಿದ್ದು, 45 ದಿನಗಳು ಬೇಕಾಗಿದೆ. ಸರ್ಕಾರದ ಅನುಮೋದನೆ ಪಡೆದು ಮತ್ತೊಮ್ಮೆ ಹೊಸದಾಗಿ ಇನ್ನೊಂದು ತಿಂಗಳಲ್ಲಿ ಟೆಂಡರ್ ಕರೆಯಲಾಗುವುದು’ ಎಂದರು.

ಭೂಸ್ವಾಧೀನದಲ್ಲಿ ಅಕ್ರಮ: ಎಎಪಿ

ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆಯ ಟೆಂಡರ್ ಪ್ರಕ್ರಿಯೆ ರದ್ದುಗೊಳಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಆಮ್ ಆದ್ಮಿ ಪಾರ್ಟಿ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಭಾರಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿದೆ.

‘ತುಮಕೂರು ಹಾಗೂ ಹೊಸೂರು ರಸ್ತೆ ಸಂಪರ್ಕ ಕಲ್ಪಿಸುವ 74 ಕಿ.ಮೀ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣದಿಂದ ಬೆಂಗಳೂರು ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸಲು ಸಾಧ್ಯ. ಇದಕ್ಕೆ ಸರ್ಕಾರ 2,560 ಎಕರೆ ಜಮೀನು ಸರ್ಕಾರ ಭೂಸ್ವಾಧೀನ ಮಾಡಬೇಕಿದೆ. 15 ವರ್ಷಗಳಲ್ಲಿ ಕೇವಲ 1,180 ಎಕರೆ ಭೂಮಿ ಮಾತ್ರ ನೋಟಿಫೈ ಮಾಡಲು ಸಾಧ್ಯವಾಗಿದೆ’ ಎಂದು ಎಎಪಿ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಸುದ್ದಿಗೋಷ್ಠಿಯಲ್ಲಿ ದೂರಿದರು.

‘ಕಳೆದ ಹದಿನೈದು ವರ್ಷಗಳಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಈ ಯೋಜನೆಯನ್ನು ದಂಧೆಯಾಗಿ ಮಾಡಿಕೊಂಡಿವೆ. ಆರಂಭದಲ್ಲಿ ರಸ್ತೆ ಅಭಿವೃದ್ಧಿಗೆ ₹3000 ಕೋಟಿ ವೆಚ್ಚ ಎಂದು ಅಂದಾಜಿಸಲಾ-ಗಿತ್ತು. ಆದರೆ, ಸದ್ಯ ₹20,000 ಕೋಟಿಗೂ ಅಧಿಕ ವೆಚ್ಚವಾಗುತ್ತದೆ. ರಿಯಲ್ ಎಸ್ಟೇಟ್ ತಾಳಕ್ಕೆ ರಾಜ್ಯ ಬಿಜೆಪಿ ಸರ್ಕಾರ ಕುಣಿಯುತ್ತಿದೆ’ ಎಂದು ಆರೋಪಿಸಿದರು. ‘ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳುವ ಭೂಮಾಲೀಕರಿಗೆ ಪರಿಹಾರ ನೀಡುವಂತ ನಿಯಮಾವಳಿ ರೂಪಿಸಬೇಕೆಂದು ರಾಜ್ಯ ಮುಖ್ಯ-ಕಾರ್ಯದರ್ಶಿಗೆ ಬಿಡಿಎ ಪತ್ರ ಬರೆದಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಆದರೆ ಸರ್ಕಾರ ಮಾರುಕಟ್ಟೆ ಬೆಲೆ ನೀಡಲು ಮೀನಮೇಷ ಎಣಿಸುತ್ತಿದೆ. ಗುತ್ತಿಗೆ ಪಡೆಯುವ ಉದ್ಯಮಿಗಳಿಂದ ಸರ್ಕಾರ ಕಮಿಷನ್ ಪಡೆಯುವುದೇ ಸರ್ಕಾರ ಉದ್ದೇಶ. ಸರ್ಕಾರ ಕೂಡಲೇ ರೈತರಿಗೆ ಉತ್ತಮ ಪಾವತಿಸಬೇಕು. ಇಲ್ಲದಿದ್ದರೆ ಎಎಪಿ ಹೋರಾಡಲಿದೆ’ ಎಂದು ಎಚ್ಚರಿಸಿದರು.

ಶಾಸಕ ಗೌರಿಶಂಕರ್ ಚುನಾವಣಾ ಅಕ್ರಮ ಆರೋಪ

ಹೈಕೋರ್ಟ್‌ಗೆ ದಾಖಲೆ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಹದಿನಾರು ಸಾವಿರ ಮಕ್ಕಳ ಆರೋಗ್ಯ ವಿಮೆಯನ್ನು ಕಮ್ಮಗೊಂ-ಡನಹಳ್ಳಿ ಮಾರುತಿ ಸೇವಾ ಸಮಿತಿ ವತಿಯಿಂದ ಸುಮಾರು ಆರು ಲಕ್ಷ ಹಣ ನೀಡಿ ಪಡೆಯಲಾಗಿದೆ ಮತ್ತು ಚುನಾವಣಾ ಸಂದರ್ಭದಲ್ಲಿ ನಕಲಿ ಬಾಂಡ್‌ಗಳನ್ನು ಹಂಚಿ ಗೌರಿಶಂಕರ್ ಚುನಾವಣಾ ಅಪರಾಧ ಎಸಗಿದ್ದಾರೆ’ ಎಂಬ ಆರೋಪಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹೈಕೋರ್ಟ್‌ಗೆ ಮನವರಿಕೆ ಮಾಡಿಕೊಡಲಾಯಿತು.

‘ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಶಾಸಕ ಡಿ.ಸಿ. ಗೌರಿಶಂಕರ್ ಆಯ್ಕೆಯನ್ನು ಅಸಿಂಧು-ಗೊಳಿಸಬೇಕು‘ ಎಂದು ಕೋರಿ ಪರಾಜಿತ ಅಭ್ಯರ್ಥಿ ಬಿ.ಸುರೇಶ್ ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಸುರೇಶ್ ಗೌಡ ಪರ ವಾದ ಮುಂದುವರಿಸಿದ ಹಿರಿಯ ವಕೀಲೆ ನಳಿನಾ ಮಾಯೇಗೌಡ, ಗೌರಿಶಂಕರ್ 2018ರ ಚುನಾವಣಾ ಸಂದರ್ಭದಲ್ಲಿ ಮತದಾರರಿಗೆ ನಕಲಿ ಬಾಂಡ್ ಹಂಚಿರುವ ಆರೋಪಕ್ಕೆ ಸಂಬಂಧಿಸಿದಂತೆ ರಮೇಶ್ ಬೆಟ್ಟಯ್ಯ ನೀಡಿದ್ದ ದೂರಿನನ್ವಯ ಇನ್ಶೂರೆನ್ಸ್ ಕಂಪನಿ ಆರೋಗ್ಯ ವಿಮೆಯನ್ನು ರದ್ದುಗೊಳಿಸಿದ್ದ ದಾಖಲೆಗಳನ್ನು ನ್ಯಾಯಪೀಠಕ್ಕೆ ಸಾದರಪಡಿಸಿದರು.

ವಿಮಾ ಕಂತನ್ನು ಕಮ್ಮಗೊಂಡನ-ಹಳ್ಳಿ ಮಾರುತಿ ಸೇವಾ ಸಮಿತಿಯವರೇ ಭರಿಸಿದ್ದು, ವಿಮಾ ಪಾಲಿಸಿ ರದ್ದಾದ ನಂತರ ವಿಮಾ ಕಂತಿನ ಹಣವನ್ನು, ಕಮ್ಮಗೊಂಡನಹಳ್ಳಿ ಮಾರುತಿ ಸೇವಾ ಸಮಿತಿಯವರಿಗೆ ಹಿಂದಿರುಗಿಸಲಾಗಿ-ದೆ ಎಂಬ ಮಾಹಿತಿಯನ್ನು ದಾಖಲೆ ಸಮೇತ ನ್ಯಾಯಪೀಠಕ್ಕೆ ನೀಡಿದರು. ವಾದ ಮಂಡನೆ ಅಪೂರ್ಣಗೊಂಡಿ-ದ್ದು, ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಲಾಗಿದೆ.

ಕೋರಿಕೆ ಏನು?: ‘2018ರ ಸಾರ್ವತ್ರಿಕ ಚುನಾವಣೆಯಲ್ಲಿ ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಗೌರಿಶಂಕರ್ ವ್ಯಾಪಕ ಚುನಾವಣಾ ಅಕ್ರಮ ಎಸಗಿ ಆಯ್ಕೆಯಾಗಿದ್ದಾರೆ. ಪ್ರಜಾ ಪ್ರತಿನಿಧಿ ಕಾಯ್ದೆಯ ಕಲಂ 123 ಅನ್ನು ಉಲ್ಲಂ-ಘಿಸಿದ್ದಾರೆ. ನಾಮಪತ್ರ ಸಲ್ಲಿಕೆ ನಂತರ ಮತದಾರರಿಗೆ ಮತಯಾಚನೆ ಪತ್ರದ ಜೊತೆ ಗುಂಪು ಆರೋಗ್ಯ ವಿಮಾ ಪಾಲಿಸಿಯ ಆಮಿಷವೊಡ್ಡಿ ಅವರಿಂದ ಮತಗಳನ್ನು ಪಡೆದು ಆರಿಸಿ ಬಂದಿದ್ದಾರೆ. ಹಾಗಾಗಿ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇ-ಕು’ ಎಂದು ಅರ್ಜಿದಾರ ಸುರೇಶ್‌ಗೌಡ ಕೋರಿದ್ದಾರೆ.



ಪದ್ಮಾಲಯ ಪ್ರಕಾಶನ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ‘ನುಡಿಮುತ್ತುಗಳಲ್ಲಿ ಜೀವನ ಮೌಲ್ಯಗಳು’ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಶಾಸಕ ಎ.ಟಿ.ರಾಮಸ್ವಾಮಿ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ, ಲೇಖಕಿ ಬಿ.ಟಿ.ಲಲಿತಾ ನಾಯಕ್ ಮತ್ತು ಲೇಖಕ ಎನ್. ಪದ್ಮನಾಭ ರಾವ್ ಇದ್ದಾರೆ — ಪ್ರಜಾವಾಣಿ ಚಿತ್ರ

ಸ್ತ್ರೀಶಕ್ತಿಗೆ ನೆರವು ಯೋಜನೆ: ಅ.2ಕ್ಕೆ ಚಾಲನೆ

ಸ್ವಯಂಸೇವಾ ಸಂಸ್ಥೆಗಳ ಸಮಾವೇಶದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಗೆ ಅಕ್ಟೋಬರ್ 2ರಂದು ಚಾಲನೆ ನೀಡಲು ತೀರ್ಮಾನಿಸಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ರಾಜ್ಯಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶದಲ್ಲಿ ಈ ವಿಷಯ ತಿಳಿಸಿದರು.



ಬೆಂಗಳೂರಿನಲ್ಲಿ ಬುಧವಾರ ನಡೆದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶದಲ್ಲಿ ಮಾಗಡಿಯ ಬುಡಕಟ್ಟು ಮಹಿಳೆಯರು ತಾವು ತಯಾರಿಸಿದ ಬಿದಿರಿನ ಬುಟ್ಟಿಗಳನ್ನು ಪ್ರದರ್ಶಿಸಿದರು — ಪ್ರಜಾವಾಣಿ ಚಿತ್ರ

‘ಸದ್ಯ, ಪ್ರತಿಯೊಂದು ಸ್ತ್ರೀಶಕ್ತಿ ಸಂಘಕ್ಕೆ ₹1.5 ಲಕ್ಷ ಆರ್ಥಿಕ ನೆರವು ಹಾಗೂ 25ರಿಂದ 30 ಪ್ರಾಜೆಕ್ಟ್‌ಗಳ-ನ್ನು ನೀಡಲಾಗುತ್ತಿದೆ. ಆರ್ಥಿಕವಾಗಿ ಈ ಸಂಘಗಳನ್ನು ಬಲಪಡಿಸಲು ಆ್ಯಂಕರ್ ಬ್ಯಾಂಕ್ ಸಹ ಸ್ಥಾಪಿಸಲಾಗು-ತ್ತಿದೆ. ಅಮೆಜಾನ್‌ನಂತಹ ಆನ್‌ಲೈನ್ ವೇದಿಕೆಗಳಲ್ಲಿ ಸ್ತ್ರೀಶಕ್ತಿ ಸಂಘಗಳು ತಯಾರಿಸುವ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗುವುದು’ ಎಂದರು.

‘ಸ್ತ್ರೀಶಕ್ತಿ ಸಂಘಗಳ ವಹಿವಾಟು ಈಗ ಹೆಚ್ಚಾಗಿದೆ. ಪ್ರತಿ ತಿಂಗಳು ₹50 ಸಾವಿರ ವಹಿವಾಟು ಮಾಡುತ್ತಿದ್ದ ಸಂಘಗಳು ಈಗ 50 ಲಕ್ಷ ವಹಿವಾಟು ಮಾಡುತ್ತಿವೆ. ಇದು ಸಂಘಟಿತ ಶ್ರಮದ ಶಕ್ತಿ. ಸ್ಥಳೀಯ ಸಂಘ ಸಂಸ್ಥೆಗಳು ತಯಾರಿಸುವ ಉತ್ಪನ್ನಗಳು ವಿದೇಶದಲ್ಲಿ ಮಾರಾಟವಾದರೆ ಆರ್ಥಿಕತೆಗೆ ಶಕ್ತಿ ಬರುತ್ತದೆ’ ಎಂದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ‘ಕೃಷಿ ಉತ್ಪಾದನೆಯಲ್ಲಿ ದೇಶವು ಗುರಿ ಮೀರಿ ಸಾಧನೆ ಮಾಡಿದೆ. ಶೇ 70ರಷ್ಟು ಖಾದ್ಯ ತೈಲವನ್ನು ಮಾತ್ರ ಆಮದು ಮಾಡಿಕೊಳ್ಳಲಾಗುತ್ತಿದೆ. ಕೃಷಿ ಉತ್ಪನ್ನಗಳ ರಫ್ತು ಪ್ರಮಾಣದಲ್ಲಿ ಭಾರತ ಈಗ 9ನೇ ಸ್ಥಾನ ಪಡೆದಿದೆ’ ಎಂದು ವಿವರಿಸಿದರು.

ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ, ‘ವಿದೇಶಿ ಬಂಡವಾಳ ಹೂಡಿಕೆಯಲ್ಲಿ ರಾಜ್ಯವು ಪ್ರಸಕ್ತ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಮೊದಲ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಬೆಸ್ಕಾಂ ಅದಾಲತ್‌ನಲ್ಲಿ ಸ್ಥಳದಲ್ಲೇ ಪರಿಹಾರ

ಬೆಂಗಳೂರು: ಗ್ರಾಮೀಣ ಭಾಗದ ಗ್ರಾಹಕರ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಶೀಘ್ರ ಪರಿಹಾರಕ್ಕಾಗಿ ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ 47 ತಾಲ್ಲೂಕುಗಳಲ್ಲಿ ಶನಿವಾರ ಆಯೋಜಿಸಿದ್ದ ವಿದ್ಯುತ್ ಅದಾಲತ್‌ನಲ್ಲಿ 3,671 ಗ್ರಾಹಕರು ಭಾಗವಹಿಸಿ, 1,142 ಮನವಿ ಸಲ್ಲಿಸಿದ್ದಾರೆ.

ಇವುಗಳಲ್ಲಿ 321 ಮನವಿಗಳಿಗೆ ಬೆಸ್ಕಾಂ ಅಧಿಕಾರಿಗಳು ಸ್ಥಳದಲ್ಲೇ ಪರಿಹಾರ ಒದಗಿಸಿದ್ದಾರೆ. ಇನ್ನುಳಿದ 821 ಮನವಿಗಳನ್ನು ಮುಂದಿನ ಕ್ರಮಕ್ಕಾಗಿ ಹಿರಿಯ ಅಧಿಕಾರಿಗಳಿಗೆ ರವಾನಿಸಲಾಗಿದೆ. ಹೆಚ್ಚುವರಿ ಮತ್ತು ಹೊಸ ವಿದ್ಯುತ್ ಪರಿವರ್ತಕ, ಬಿಲ್ಲಿಂಗ್, ವಿದ್ಯುತ್ ವ್ಯತ್ಯಯ, ಹೊಸ ಸಂಪರ್ಕ, ಎಲ್‌ಟಿ ಲೈನ್ ಬೇಡಿಕೆ ಸೇರಿದಂತೆ ಹಲವು ಸಮಸ್ಯೆಗಳನ್ನು ಕುರಿತು ಗ್ರಾಹಕರು ಅದಾಲತ್ ನಲ್ಲಿ ಅಧಿಕಾರಿಗಳ ಗಮನ ಸೆಳೆದರು.

ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ವೆಂಕಟೇಸುಲು ಆಯ್ಕೆ



ನೆಲಮಂಗಲ: ವೈದ್ಯ ಜಿ.ಎ.ವೆಂಕಟೇಸುಲು ಅವರು ಲಯನ್ಸ್ ಕ್ಲಬ್ ನೂತನ ತಾಲ್ಲೂಕು ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ ಎಂದು ಲಯನ್ಸ್ ಸಂಸ್ಥೆ ನಿಕಟಪೂರ್ವ ಅಧ್ಯಕ್ಷ ಡಾ.ಎಂ. ಜಯಪ್ರಸಾದ್ ತಿಳಿಸಿದ್ದಾರೆ.

ಕೋವಿಡ್: 10 ವಾರ್ಡ್‌ಗಳಲ್ಲಿ ಅಧಿಕ ಕೇಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, ವಾರದಲ್ಲಿ 4,512 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಬೆಳ್ಳಂದೂರು ಸೇರಿದಂತೆ ಹತ್ತು ವಾರ್ಡ್‌ಗಳಲ್ಲಿ ವಾರದಿಂದ ಅಧಿಕ ಪ್ರಕರಣಗಳು ಪತ್ತೆ-ಯಾಗುತ್ತಿವೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಐದು ಸಾವಿರದ ಗಡಿ ಸಮೀಪಿಸಿದೆ. ವಾರದಲ್ಲಿ ವರದಿಯಾದ ಪ್ರಕರಣಗಳ-ನ್ನು ಬಿಬಿಎಂಪಿ ವಾರ್ ರೂಮ್ ವಿಶ್ಲೇಷಿಸಿದೆ. ಬೆಳ್ಳಂದೂರು (69), ದೊಡ್ಡ ನೆಕ್ಕುಂದಿ (34), ಕಾಡುಗೋಡಿ (32), ವರ್ತೂರು (24), ಹಗದೂರು (18), ಎಚ್‌ಎಸ್‌ಆರ್ ಲೇಔಟ್ (15), ಹೊರಮಾವು (14), ಹೂಡಿ (14), ವಿಜಯನಗರ (10) ಹಾಗೂ ಬೇಗೂರು ವಾರ್ಡ್‌ನಲ್ಲಿ (10) ದೈನಂದಿನ ಪ್ರಕರಣಗಳ ಸರಾಸರಿ ಅಧಿಕವಿದೆ. ಈ ವಾರ್ಡ್‌ಗಳಲ್ಲಿ ನೂರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ.

ಬನಶಂಕರಿ ದೇವಾಲಯ, ಹೊಸಕೆರೆಹಳ್ಳಿ, ಕೆಂಗೇರಿ, ಗಾಳಿ ಆಂಜನೇಯ ದೇವಾಲಯ, ಛಲವಾದಿಪಾಳ್ಯ, ರಾಯಪುರ, ಪಾದರಾಯನಪುರ, ಬಾಪೂಜಿನಗರ, ನಾಯಂಡನಹಳ್ಳಿ ಹಾಗೂ ಮಾರುತಿ ಮಂದಿರ ವಾರ್ಡ್‌ನಲ್ಲಿ ವಾರದಿಂದ ದೈನಂದಿನ ಸರಾಸರಿ ಶೂನ್ಯವಿದೆ.

ದಾಖಲಾತಿ ಹೆಚ್ಚಳ: ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಹೆಚ್ಚಳದಿಂದ ಆಸ್ಪತ್ರೆ ದಾಖಲಾತಿಯೂ ಕೊಂಚ ಏರಿಕೆಯಾಗಿದೆ. ಸದ್ಯ 42 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. ಸೋಂಕಿತರಲ್ಲಿ 34 ಮಂದಿ ಸಾಮಾನ್ಯ ಹಾಸಿಗೆ, ಐವರು ಐಸಿಯು ಹಾಸಿಗೆ ಹಾಗೂ ಮೂವರು ಎಚ್‌ಡಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆ-ದುಕೊಳ್ಳುತ್ತಿದ್ದಾರೆ.

ದೈನಂದಿನ ಕೋವಿಡ್ ಪರೀಕ್ಷೆಗಳ ಸಂಖ್ಯೆ 16 ಸಾವಿರದ ಗಡಿ ದಾಟಿದೆ. ಸೋಂಕು ದೃಢ ಪ್ರಮಾಣ ಶೇ 4ಕ್ಕೆ ತಲುಪಿದೆ. ಹೊಸ ಪ್ರಕರಣಗಳ ಸಂಖ್ಯೆ 700ರ ಗಡಿಯ ಆಸುಪಾಸಿಗೆ ಏರಿಕೆಯಾಗಿದ್ದರೂ ಸೋಂಕಿತರಲ್ಲಿ ಪ್ರತಿನಿತ್ಯ ನಾಲ್ಕರಿಂದ ಐದು ಮಂದಿ ಮಾತ್ರ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗುತ್ತಿದ್ದಾ-ರೆ. ದಾಖಲಾಗುತ್ತಿರುವ ಹೆಚ್ಚಿನವರಿಗೆ ಸಾಮಾನ್ಯ ಹಾಸಿಗೆಗಳಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ.

ಕೊರೊನಾ ಸೋಂಕಿತರ ಚಿಕಿತ್ಸೆಗೆ ಮೀಸಲಿಟ್ಟಿರುವ 2,395 ಹಾಸಿಗೆಗಳಲ್ಲಿ 2,353 ಹಾಸಿಗೆಗಳು ಖಾಲಿ ಉಳಿದಿವೆ. ಪ್ರಕರಣಗಳ ಸಂಖ್ಯೆ ಹೆಚ್ಚಳವಾಗು-ತ್ತಿರುವುದರಿಂದ ಚಿಕಿತ್ಸಾ ನಿರ್ಧಾರ ಕೇಂದ್ರಗಳಲ್ಲಿ (ಟ್ರಯಾಜ್ ಸೆಂಟರ್) ಸೋಂಕಿತರನ್ನು ವಿಶ್ಲೇಷಣೆಗೆ ಒಳಪಡಿ-ಸಲಾಗುತ್ತಿದೆ. ನಗರದಲ್ಲಿ 48 ಟ್ರಯಾಜ್ ಸೆಂಟರ್‌ಗಳಿವೆ.

ಐಐಎಂ– ಬೆಂಗಳೂರು, ಸುಭಿಕ್ಷಾ ಸಹಕಾರ ಜತೆ ಒಪ್ಪಂದ

ಮಹಿಳಾ ಉದ್ಯಮಿಗಳು, ರೈತರಿಗೆ ‘ಸಂಜೀವಿನಿ’ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಉದ್ಯಮಿಗಳಿಗೆ ಉತ್ತೇಜನ ನೀಡುವುದು ಮತ್ತು ಸಾವಯವ ಕೃಷಿಯಲ್ಲಿ ನಿರತರಾಗಿರುವ ರೈತರಿಗೆ ಪ್ರೋತ್ಸಾಹ ನಿಡುವುದಕ್ಕೆ ಐಐಎಂ– ಬೆಂಗಳೂರು ಹಾಗೂ ಸುಭಿಕ್ಷಾ– ಬಹುರಾಜ್ಯ ಸೌಹಾರ್ದ ಸಹಕಾರಿ ಸಂಸ್ಥೆಗಳ ಜತೆ ಕರ್ನಾಟಕ ಗ್ರಾಮೀಣ ಜೀವನೋಪಾಯ ಮಿಷನ್ (ಕೆಎಸ್‌ಆರ್‌ಎಲ್‌ಎಂ) – ಸಂಜೀವಿನಿ ಎರಡು ಪ್ರತ್ಯೇಕ ಒಪ್ಪಂದಗಳಿಗೆ ಬುಧವಾರ ಸಹಿ ಮಾಡಿತು.

ಕೌಶಲ್ಯಾಭಿವೃದ್ಧಿ ಖಾತೆ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಉಪಸ್ಥಿತಿಯಲ್ಲಿ ಮೂರೂ ಸಂಸ್ಥೆಗಳು ಒಪ್ಪಂದದ ಪತ್ರಗಳನ್ನು ವಿನಿಮಯ ಮಾಡಿಕೊಂಡವು. ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ (ಎನ್‌ಆರ್‌ಇಟಿಪಿ), ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಮತ್ತು ಕೆಎಸ್‌ಆರ್‌ಎಲ್‌ಎಂ ಸಹಯೋಗದಲ್ಲಿ ಈ ಒಪ್ಪಂದಗಳನ್ನು ಅನುಷ್ಠಾನಕ್ಕೆ ತರಲಾಗುತ್ತದೆ.

ಒಪ್ಪಂದದ ಬಳಿಕ ಮಾತನಾಡಿದ ಸಚಿವ ಅಶ್ವತ್ಥ ನಾರಾಯಣ ಅವರು, ‘ಐಐಎಂಬಿ–ಬಿಯಲ್ಲಿ ಗ್ರಾಮೀಣ ಮಹಿಳಾ ಉದ್ಯಮಿ-ಗಳನ್ನು ಪ್ರೋತ್ಸಾಹಿಸಲು ವಿಶೇಷ ‘ಇನ್‌ಕ್ಯುಬೇಟರ್’ ಆರಂಭಿಸಲಾಗು-ತ್ತದೆ. ಇದಕ್ಕಾಗಿ ₹ 10 ಕೋಟಿ ಒದಗಿ-ಸಲಾಗುವುದು. ಎರಡು ವರ್ಷಗಳ ಅವಧಿಯ ಈ ಯೋಜನೆಯಡಿ ಮಹಿಳಾ ಉದ್ಯಮಿಗಳ ನೋಂದಾಯಿತ ಉದ್ದಿಮೆ, ಗುಂಪು ಉದ್ದಿಮೆ ಮತ್ತು ವೈಯಕ್ತಿಕ ಉದ್ದಿಮೆಗಳಿಗೆ ನರವು ನೀಡಲಾಗುವುದು’ ಎಂದರು.

‘ಸುಭಿಕ್ಷಾ ಸಹಕಾರ ಸಂಸ್ಥೆ ಸಹಯೋಗದಲ್ಲಿ ಸಾವಯವ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿ-ಸಲಾಗುವುದು. ಸಾವಯವ ಕೃಷಿ ಮೂಲಕ ಜಮೀನನ್ನು ಫಲವತ್ತವಾಗಿ ಇರಿಸಿಕೊಳ್ಳುವ ರೈತರಿಗೆ ವಿಶೇಷ ಪ್ರೋತ್ಸಾಹಧನ ನೀಡಲಾಗುವುದು. ಗ್ರಾಮೀಣ ಸ್ವಸಹಾಯ ಗುಂಪುಗಳ ವಹಿವಾಟನ್ನು ಸಂಪೂರ್ಣವಾಗಿ ಡಿಜಿಟಲೀಕರಣ ಮಾಡಲಾಗುವುದು’ ಎಂದು ತಿಳಿಸಿದರು.

ರಾಜ್ಯ ಸಾವಯವ ಕೃಷಿ ಮಿಷನ್ ಅಧ್ಯಕ್ಷ ಆ.ಶ್ರೀ. ಆನಂದ ಮಾತನಾಡಿ, ‘ಉಪಗ್ರಹಗಳ ನೆರವಿನಲ್ಲಿ ಜಮೀನಿನ ಫಲವತ್ತತೆ ಮತ್ತು ರಾಸಾಯನಿಕಗಳ ಪ್ರಮಾಣವನ್ನು ಅಳೆಯಲಾಗುವುದು. ಉತ್ತಮವಾಗಿ ಜಮೀನು ನಿರ್ವಹಣೆ ಮಾಡುವ ರೈತರಿಗೆ ಪ್ರೋತ್ಸಾಹಧನ ನೀಡಲಾಗುವುದು’ ಎಂದರು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ನಿರ್ದೇಶಕಿ ಮಂಜುಶ್ರೀ, ಐಐಎಂ–ಬಿ ನಿರ್ದೇಶಕ ಪ್ರೊ. ವೆಂಕಟೇಶ್, ಉದ್ಯೋಗ ಮತ್ತು ತರಬೇತಿ ಇಲಾಖೆ ನಿರ್ದೇಶಕಿ ಜ್ಯೋತಿ, ಕೌಶಲ್ಯಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಗೌಡ, ಸರ್ಕಾರಿ ತಾಂತ್ರಿಕ ತರಬೇತಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ರಾಘವೇಂದ್ರ ಉಪಸ್ಥಿತರಿದ್ದರು.

ಹೊಸ ವೆಬ್‌ಸೈಟ್‌ಗೆ ಚಾಲನೆ

ಕೌಶಲಾಭಿವೃದ್ಧಿ ಇಲಾಖೆಯ ನೂತನ ವೆಬ್‌ಸೈಟ್ www.kaushalyakar.karnataka.gov.inಗೆ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಬುಧವಾರ ಚಾಲನೆ ನೀಡಿದರು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವ್ಯವಸ್ಥೆಯನ್ನು ಹೊಸ ವೆಬ್‌ಸೈಟ್‌ನಲ್ಲಿ ಕಲ್ಪಿಸಲಾಗಿದೆ.

ಡಿಜಿಟಲ್ ಮಾರ್ಕೆಟ್: ಮಹಿಳಾ ಉದ್ಯಮಿಗಳಿಗೆ ತರಬೇತಿ

ಬೆಂಗಳೂರು: ಮಾಲ್ಡೀವ್ಸ್‌ನಲ್ಲಿ ನಡೆದ ಡಿಜಿಟಲ್ ಮಾರುಕಟ್ಟೆ ಮಹಿಳಾ ಉದ್ಯಮಿಗಳ ತರಬೇತಿ ಕಾರ್ಯ-ಕ್ರಮದಲ್ಲಿ ಕರ್ನಾಟಕದ ಮಹಿಳಾ ಉದ್ಯಮಿಗಳಾದ ಗಾಯತ್ರಿ ಸುರೇಶ್ ಹಾಗೂ ಅನಿತಾ ಸುರೇಶ್ ಭಾಗವಹಿಸಿ ತರಬೇತಿ ಪಡೆದುಕೊಂಡರು.

ಯುನೆಸ್‌ಕ್ಯಾಪ್ ಮತ್ತು ಏಷ್ಯಾ ಪೆಸಿಫಿಕ್ ಸೌತ್–ವೆಸ್ಟ್ ಏಷ್ಯಾ ಆಫೀಸ್ (UNESCAP-SSWA) ಜೂನ್ 6ರಿಂದ 9ರ ವರೆಗೆ ಜಂಟಿಯಾಗಿ ಮಾಲ್ಡೀವ್ಸ್‌ನಲ್ಲಿ ಆಯೋಜಿಸಿದ್ದ ಡಿಜಿಟಲ್ ಮಾರುಕಟ್ಟೆಯ ತರಬೇತಿ ಕಾರ್ಯಕ್ರಮದಲ್ಲಿ ಉಬಂಟು ಸಂಸ್ಥಾಪಕ ಅಧ್ಯಕ್ಷೆ ಕೆ.ರತ್ನಪ್ರಭಾ ಭಾಗವಹಿಸಿ ಮಾತನಾಡಿದರು.

ಉಬಂಟು ಕನ್ಸೋರ್ಟಿಯಂ ಅನ್ನು ಮಹಿಳಾ ಉದ್ಯಮಿಗಳ ಬೆಳವಣಿಗೆ, ಸಾಮರ್ಥ್ಯ ವೃದ್ಧಿಯ ಉದ್ದೇಶದಿಂದ ಸ್ಥಾಪಿಸಲಾಗಿದೆ. ಮಹಿಳಾ ಉದ್ಯಮಿಗಳ ತರಬೇತಿ ಕಾರ್ಯಕ್ರಮಗಳಿಗೆ ಕರ್ನಾಟಕ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ದೇಶದ 9 ರಾಜ್ಯಗಳಲ್ಲಿ 33 ಸಂಘಗಳನ್ನು ಸ್ಥಾಪಿಸಲಾಗಿದೆ. 22 ಸಾವಿರಕ್ಕೂ ಹೆಚ್ಚು ಮಹಿಳೆಯರು ಸಂಘದ ಪರೋಕ್ಷ ಸದಸ್ಯತ್ವ ಪಡೆದುಕೊಂಡಿದ್ದಾರೆ ಎಂದು ಹೇಳಿದರು.

ಕೋವಿಡ್ ಸಮಯದಲ್ಲಿ ಉಬಂಟು ಒಕ್ಕೂಟದ ಪರಿಶ್ರಮಕ್ಕೆ ದೊರೆತ ಮನ್ನಣೆಯಾಗಿದೆ. ತರಬೇತುದಾರರಾಗಿ ಒಕ್ಕೂಟದ ಮತ್ತೊಬ್ಬ ಸದಸ್ಯೆ ದೀಪಾಲಿ ಗೋಟಡಿಕೆ ಸಹ ಆಯ್ಕೆಯಾಗಿದ್ದರು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿಕೆ

‘ದೇವೇಗೌಡರಿಗೆ ಸಿ.ಎಂ ಉತ್ತರ ಕೊಡ್ತಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆ ಗೊಂದಲಕ್ಕೆ ಸಂಬಂಧಿಸಿದಂತೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಬರೆದ ಪತ್ರಕ್ಕೆ ಮುಖ್ಯಮಂತ್ರಿ-ಯವರೇ ಉತ್ತರ ನೀಡಲಿದ್ದಾರೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜತೆ ಬುಧವಾರ ರಾತ್ರಿ ನಡೆದ ಸಭೆಯ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

‘ದೇವೇಗೌಡರ ಪತ್ರಕ್ಕೆ ವಿವರಣೆ ಕೇಳಲು ಬೊಮ್ಮಾಯಿ ಈ ಸಭೆಯನ್ನು ಕರೆದಿದ್ದರು. ಸಭೆಯಲ್ಲಿ ಗೌಡರ ಪತ್ರ-ದಲ್ಲಿದ್ದ ಎಲ್ಲ ಸಂದೇಹಗಳಿಗೂ ಉತ್ತರ ನೀಡಿದ್ದೇವೆ. ಇನ್ನೂ ಒಂದೆರಡು ವಿಷಯಗಳ ಬಗ್ಗೆ ಸಿಎಂ ಸ್ಪಷ್ಟನೆ ಕೇಳಿದ್ದು, ಗುರುವಾರ ಬೆಳಿಗ್ಗೆ ಆ ಮಾಹಿತಿಯನ್ನೂ ನೀಡುತ್ತೇವೆ. ಆ ಬಳಿಕ ಅವರು ಸುದೀರ್ಘ ಉತ್ತರ ನೀಡಲಿದ್ದಾರೆ’ ಎಂದು ಹೇಳಿದರು.

‘ಇವತ್ತಿನ ಸಭೆ ನಡೆದಿದ್ದು ದೇವೇಗೌಡರ ಪತ್ರದ ವಿಚಾರವಾಗಿ ಮಾತ್ರ. ಈ ಹಿಂದೆ ಯಾರೆಲ್ಲ ಪತ್ರ ಬರೆದಿದ್ದರೋ ಅವರಿಗೆಲ್ಲ ಜೂ.8 ರಂದೇ ಉತ್ತರ ನೀಡಲಾಗಿದೆ. ಮತ್ತೊಮ್ಮೆ ಉತ್ತರ ನೀಡುವ ಅಗತ್ಯವಿಲ್ಲ. ಕೆಲವು ತಪ್ಪುಗಳನ್ನು ಸರಿ-ಪಡಿಸುವುದಾಗಿ ಹೇಳಿದ್ದೆವು. ಅದನ್ನು ಮಾಡಿದ್ದೇವೆ. ‘ಸಂವಿಧಾನ ಶಿಲ್ಪಿ’ ಪದ ಬಿಟ್ಟು ಹೋಗಿದ್ದನ್ನು ಸೇರಿಸಿದ್ದೇವೆ. ಅಂಬೇಡ್ಕರ್ ಚಿಂತನೆಯ ವಿಚಾರಗಳನ್ನು ಸೇರಿಸಿದ್ದೇವೆ. ಬದಲಾವಣೆಗೆ ಮುಕ್ತ ಮನಸ್ಸು ಹೊಂದಿರುವುದಾಗಿ ಮುಖ್ಯಮಂತ್ರಿ ಹೇಳಿದ್ದು, ಅದಕ್ಕೆ ತಕ್ಕಂತೆ ನಡೆದುಕೊಂಡಿದ್ದೇವೆ’ ಎಂದೂ ಹೇಳಿದರು.

‘ಪತ್ರಿಕೆಗಳಲ್ಲಿ ಬಂದ ವಿಚಾರ, ಸಾಹಿತಿಗಳು ಎತ್ತಿರುವ ಆಕ್ಷೇಪಗಳಿಗೆ ಉತ್ತರ ನೀಡಿದ್ದೇವೆ. ಪದೇ ಪದೇ ಉತ್ತರ ನೀಡುವ ಅಗತ್ಯವೂ ಇಲ್ಲ. ಆಕ್ಷೇಪ ಎತ್ತಿದ 15 ಸಾಹಿತಿಗಳ ಪೈಕಿ 9 ಸಾಹಿತಿಗಳ ಪಾಠವೇ ಇರಲಿಲ್ಲ’ ಎಂದೂ ನಾಗೇಶ್ ಅವರು ತಿಳಿಸಿದರು.

ಪಠ್ಯ ವಿವಾದ: ಸಿಎಂ ಭೇಟಿಗೆ ಅವಕಾಶ ಕೋರಿದ ಸಾಹಿತಿಗಳು

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆಯಲ್ಲಿನ ಲೋಪಗಳ ಕುರಿತು ಚರ್ಚಿಸಲು ಸಮಯಾವಕಾಶ ನೀಡುವಂತೆ ಕೋರಿ ಸಾಹಿತಿಗಳು, ಚಿಂತಕರು ಮತ್ತು ಪ್ರಗತಿಪರ ಹೋರಾಟಗಾರರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬುಧವಾರ ಪತ್ರ ಬರೆದಿದ್ದಾರೆ.

‘ಕರ್ನಾಟಕದ ಜಾಗೃತ ನಾಗರಿಕರು’ ಎಂಬ ಶೀರ್ಷಿಕೆಯಡಿ ಪತ್ರ ಬರೆದಿರುವ ಸಾಹಿತಿಗಳಾದ ಕೆ. ಮರು-ಳಸಿದ್ದಪ್ಪ, ಎಸ್.ಜಿ. ಸಿದ್ದರಾಮಯ್ಯ, ವಿಜಯಾ, ರಾಜೇಂದ್ರ ಚೆನ್ನಿ, ಬಂಜಗೆರೆ ಜಯಪ್ರಕಾಶ್, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ವಿಮಲಾ, ವಕೀಲರಾದ ಶಿಕ್ಷಣ ತಜ್ಞ ಬಿ. ಶ್ರೀಪಾದ ಭಟ್, ವೈದ್ಯೆ ಹಾಗೂ ಸಾಹಿತಿ ವಸುಂಧರಾ ಭೂಪತಿ, ಮುಖ್ಯಮಂತ್ರಿಯವರ ಜತೆಗೆ ಚರ್ಚೆಗೆ ಸಮಯ ಕೋರಿದ್ದಾರೆ.

‘ಪಠ್ಯಪುಸ್ತಕಗಳ ಪರಿಷ್ಕರಣೆಯು ಏಕಪಕ್ಷೀಯವಾಗಿ ನಡೆದಿದೆ. ನಾಡಿನ ಅನೇಕ ದಾರ್ಶನಿಕರು, ಗಣ್ಯರಿಗೆ ಅವಮಾನ ಮಾಡಲಾಗಿದೆ. ತಪ್ಪುಗಳನ್ನು ಸರಿಪಡಿಸುವು-ದಾಗಿ ಭರವಸೆ ನೀಡಿದ್ದೀರಿ. ಆದರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅದಕ್ಕೆ ವಿರುದ್ಧವಾಗಿ ಹೇಳಿಕೆ ನೀಡುತ್ತಿದ್ದಾರೆ. ಪರಿಷ್ಕೃತ ಪಠ್ಯಪುಸ್ತಕಗಳನ್ನು ಹಿಂಪಡೆದು ಹಳೆಯ ಪಠ್ಯಪುಸ್ತಕಗಳ-ನ್ನೇ ಮುಂದುವರಿಸಬೇಕು’ ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಪ್ರಸಾರಂಗದ ‘ಪ್ರಚಾರೋಪನ್ಯಾಸ ಮಾಲೆ’ ಆರಂಭ

ಕೆಎಸ್‌ಒಯು: ಹೊಸ ಪ್ರಕಟಣೆಗಳ ಪರ್ವ!

• ಮೋಹನ್ ಕುಮಾರ ಸಿ.

ಪ್ರಜಾವಾಣಿ ವಿಶೇಷ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಸಾರಂಗವು ಇದೇ ಮೊದಲ ಬಾರಿಗೆ ‘ಪ್ರಚಾರೋ-ಪನ್ಯಾಸ ಮಾಲೆ’ ಆರಂಭಿಸಿದ್ದು, ಹೊಸ ಪ್ರಕಟಣೆಗಳ ಪರ್ವ ಆರಂಭವಾಗಲಿದೆ.

ವಿಶ್ವವಿದ್ಯಾಲಯವು 26ನೇ ವರ್ಷದ ಸಂಭ್ರಮದಲ್ಲಿದೆ. ಪ್ರಸಾರಂಗವು ದೂರ ಶಿಕ್ಷಣಕ್ಕೆ ಪೂರಕವಾಗಿ ದಶಕದಿಂದ ಇನ್ನೂರಕ್ಕೂ ಹೆಚ್ಚು ಪುಸ್ತಕಗ-ಳನ್ನು ಪ್ರಕಟಿಸಿದೆ. ವಿಶ್ವವಿದ್ಯಾ-ಲಯದ ಪ್ರಾಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಕೃತಿಗಳ ಪ್ರಕಟಣೆಯಲ್ಲಿ ತೊಡ-ಗಿಸಿಕೊಂಡಿದ್ದಾರೆ. ಆದರೆ, ನಿರ್ದಿಷ್ಟ ವಿಷಯ ಕುರಿತು ಉಪನ್ಯಾಸ ನಡೆಸಿ, ಪುಸ್ತಕ ತರುತ್ತಿರುವ ಮೊದಲ ಯೋಜನೆ ಇದು.

60ರ ದಶಕದಲ್ಲಿ ಕುವೆಂಪು ಮೈಸೂರು ವಿಶ್ವವಿದ್ಯಾಲಯದ ಕುಲ-ಪತಿಗಳಾಗಿದ್ದಾಗ ಪ್ರಸಾರಂಗ ಸ್ಥಾಪಿಸಿ-ದ್ದಲ್ಲದೆ, ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸ ನಡೆಸಿ ಜನಶಿಕ್ಷಣ ಕಾರ್ಯಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದರು. ರಾಜ್ಯದ ಬಹುತೇಕ ಎಲ್ಲ ವಿಶ್ವವಿದ್ಯಾ-ಲಯಗಳು ಇದೇ ಮಾದರಿ ಅನುಸ-ರಿಸಿದ್ದವಲ್ಲದೆ ಸಾವಿರಾರು ಅಮೂಲ್ಯ ಕೃತಿಗಳನ್ನು ಹೊರ ತಂದಿದ್ದವು.

‘ಇತರ ವಿಶ್ವವಿದಾಲಯಗಳಲ್ಲಿ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕ-ರೊಂದಿಗೆ ನೇರ ಸಂವಹನ ಇರುತ್ತದೆ. ಆದರೆ, ದೂರ ಶಿಕ್ಷಣ ನೀಡುವ ವಿಶ್ವ-ವಿದ್ಯಾಲಯದಲ್ಲಿ ಅದು ಸಾಧ್ಯವಿಲ್ಲ. ಹೀಗಾಗಿ ಪ್ರಸಾರಂಗದ ಜವಾಬ್ದಾರಿ ಹಿರಿದಾಗಿದ್ದು, ಹೊಸ ಯೋಜನೆ ಮೂಲಕ ಎಲ್ಲರನ್ನು ತಲುಪುವ ಉದ್ದೇಶವನ್ನು ಹೊಂದಿದೆ’ ಎಂದು ಪ್ರಸಾರಾಂಗದ ಸಂಯೋಜನಾಧಿಕಾರಿ ಡಾ.ಆರ್.ಸಂತೋಷ್ ನಾಯಕ್ ಅವರು ‘ಪ್ರಜಾವಾಣಿ’ಗೆ ಬುಧವಾರ ತಿಳಿಸಿದರು.

‘ವಿಶ್ವವಿದ್ಯಾಲಯದ ಪ್ರಸಾರಂಗವು ಪಠ್ಯಪುಸ್ತಕ ಹಾಗೂ ಪೂರಕ ಕೃತಿಗಳ ಪ್ರಕಟಣೆಗೆ ಸೀಮಿತವಾಗಿತ್ತು. ಇದೀಗ ಪ್ರಚಾರೋಪನ್ಯಾಸ ಮಾಲೆ ಆರಂಭಿಸಿದೆ. ಸಂಪನ್ಮೂಲ ವ್ಯಕ್ತಿಗಳ ಉಪನ್ಯಾಸವ-ನ್ನು ಕೃತಿಯಾಗಿ ಪ್ರಕಟಿಸುವುದಲ್ಲದೆ, ಅವರ ವಿಡಿಯೊ ವಿಶ್ವವಿದ್ಯಾಲಯದ ಯೂಟ್ಯೂಬ್ ಚಾನೆಲ್‌ನಲ್ಲಿ ಸಿಗಲಿದೆ’ ಎಂದರು.

‘ಪ್ರಸಾರಾಂಗದ ವೆಬ್‌ಸೈಟ್ ರೂಪಿ-ಸಲಾಗುತ್ತಿದ್ದು, ಪುಸ್ತಕ ಪ್ರಕಟಣೆಗಳನ್ನು ಆನ್‌ಲೈನ್ ಮೂಲಕ ಖರೀದಿಸುವ ವ್ಯವಸ್ಥೆ ಇರಲಿದೆ. ಇ–ಪುಸ್ತಕ ಹಾಗೂ ವಿಶ್ವವಿದ್ಯಾಲಯದ ಇ–ಪತ್ರಿಕೆಯನ್ನು ತರುವ ಉದ್ದೇಶವಿದೆ. ಕೃತಿಗಳನ್ನು ಐಎಸ್‌ಬಿನ್ ಸಂಖ್ಯೆಯ ಜೊತೆಗೆ ಪ್ರ-ಕಟಿಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಶೇ 50 ರಿಯಾಯಿತಿ: ಪ್ರಚಾರೋ-ಪನ್ಯಾಸ ಮಾಲೆ ಆರಂಭದ ಹಿನ್ನೆಲೆಯಲ್ಲಿ ಜೂನ್ 24ರಿಂದ ಪ್ರಸಾರಂಗದ ಪುಸ್ತಕಗಳಿಗೆ ಶೇ 50 ರಿಯಾಯಿತಿ ಇರಲಿದೆ.

ಮುಖ್ಯಾಂಶಗಳು

- ಮೊದಲ ಬಾರಿಗೆ ಕಾರ್ಯಕ್ರಮ ಆಯೋಜನೆ
- ಉಪನ್ಯಾಸ ಯೂಟ್ಯೂಬ್‌ನಲ್ಲಿ ಲಭ್ಯ
- ಇ–ಪುಸ್ತಕ, ಇ–ಪತ್ರಿಕೆ ಆರಂಭಕ್ಕೂ ಯೋಜನೆ

ಪ್ರಚಾರೋಪನ್ಯಾಸ ಮಾಲೆಯು ತಿಂಗಳಿಗೊಂದರಂತೆ ವರ್ಷವಿಡೀ ಆಯೋಜಿಸಲಾಗಿದ್ದು, ವಿವಿಧ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಲಿದ್ದಾರೆ

ಡಾ.ಆರ್.ಸಂತೋಷ್ ನಾಯಕ್, ಸಂಯೋಜನಾಧಿಕಾರಿ, ಪ್ರಸಾರಂಗ, ಕೆಎಸ್‌ಒಯು

ನಾಳೆ ಪ್ರಚಾರೋಪನ್ಯಾಸಕ್ಕೆ ಚಾಲನೆ

ಕೆಎಸ್‌ಒಯು ಪ್ರಸಾರಂಗದ ‘ಪ್ರಚಾರೋಪನ್ಯಾಸ ಮಾಲೆ’ ಉದ್ಘಾಟನೆಯು ಜೂನ್ 24ರ ಶುಕ್ರವಾರ ಮಧ್ಯಾಹ್ನ 3ಕ್ಕೆ ಮುಕ್ತ ಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ನಡೆಯಲಿದೆ. ಮೊದಲ ಉಪನ್ಯಾಸವನ್ನು ‘ಕುವೆಂಪು ಚಿಂತನೆಗಳಲ್ಲಿ ನಾಗರಿಕ ಸಮಾಜದ ಪರಿಕಲ್ಪನೆ’ ಕುರಿತು ವಿಮರ್ಶಕ ಡಾ.ರಹಮತ್ ತರೀಕೆರೆ ನೀಡಲಿದ್ದಾರೆ. ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ಕುಲಸಚಿವ ಪ್ರೊ.ಆರ್.ರಾಜಣ್ಣ ಭಾಗವಹಿಸಲಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

RENTAL PROPERTIES

Accommodation Available

House

MAHALAKSHMI LAYOUT Near Metro 2BHK Good location 9663533748

REAL ESTATE SELLING

Sites

Jayanagar

JAYANAGAR 9TH BLOCK BDA 30X50 Site for Sale East Facing EAST END B MAIN ROAD, 9TH BLOCK Contact-9902726006

AUTOMOTIVE

Four Wheelers Selling

Toyota

REQUIRED SALVAGE quote for Toyota Etios VXO Model 2015, KA03MW 6187 without RC. Call 9591146112, 9844036218

PUBLIC NOTICE

PUBLIC NOTICE

My client intends to enter into a Joint Development Agreement with respect to the residentially converted land more fully mentioned and described in the Schedule hereunder with its '**Owner**', **M/s. Chitravelli Investments LLP,** a Limited Liability Partnership Firm, having its Office at No. 17/12, Mittal Chambers, Ali Askar Road, Off Cunningham Road, Bengaluru-560052. The Owner has represented that they are the absolute owners of the Schedule Property and have a good title to the same. The Owner has further represented that, they have not entered into any Agreements/MoU with any third party for sale, lease or development of the Schedule Property and that the Owner has not mortgaged, created any right, interest, lien or encumbered the Schedule Property or any part thereof in any manner to any person/s.

Any person/s having any objection/s or claims or claiming or asserting to have any rights, titles, benefits, demands or estate interests in respect of the Schedule Property or to any part thereof of any nature whatsoever and/or any claim whatsoever by way of, under or in the nature of any sale, exchange, gift, allotment, lease, tenancy, license, assignment, mortgage, lien, charge, or encumbrance of any nature, trust, family arrangement/ settlement, inheritance, bequest, easement, possession, maintenance, development rights, order/ decree/judgment of any court or any other agreement, understanding or otherwise, howsoever or whatsoever over the Schedule Property or any part thereof and/or having any objection(s) of any manner whatsoever, shall with documentary evidence lodge their objection/s or claims **within Fifteen (15) days** from the date of this Notice with the Undersigned, failing which, it will be presumed that no one has any right, title, claim or interest in the Schedule Property and the claim or objection, if any, has been knowingly waived and thereafter no claims or objections of any sort from any person/s will be entertained and/or taken into consideration and my client shall proceed with the above-mentioned transaction

SCHEDULE

All that piece and parcel of the converted Property bearing **No.135/94/93/1**, E-Katha **No.150200102001620007**, (earlier bearing Survey Nos. 93/1 and 94), situated at **Lakshmipura Village, Jigani Hobli, Anekal Taluk,** measuring in total **54,834.82 square meters** or **5,90,239.85 square feet** and is bounded on the:

East by : Road
West by : Remaining portion of Property bearing Survey No. 94
North by : Property bearing Survey No. 93/2
South by : Gollahalli Village Border

Jayanth M Pattanshetti
Advocate,
Jayanth Pattanshetti Associates LLP
Advocates
102, Ground Floor, "Rams Infantry Manor", No.70, Infantry Road, Bengaluru-560001.
Ph.: 25593195/41238516 / 41238367
Place : Bengaluru
Date : 22-06-2022

"FORM NO. URC-2"
Advertisement giving notice about registration under Part I of Chapter XXI of the Act
[Pursuant to section 374(b) of the Companies Act, 2013 and rule 4(1) of the Companies (Authorised to Register) Rules, 2014]

1. Notice is hereby given that in pursuance of sub-section (2) of section 366 of the Companies Act, 2013, an application is proposed to be made after fifteen days hereof but before the expiry of thirty days hereinafter to the Registrar at RoC, Bangalore, Karnataka that M/s SHRELOCK'S HATCH a FIRM may be registered under Part 1 of Chapter XXI of the Companies Act 2013, as a company limited by shares.

2. The principal objects of the company are as follows:-

To develop, promote, establish, own, acquire, operate, manage and maintain directly or indirectly, restaurants (including quick service restaurants), eating houses, kiosks, fast food outlets, cafeterias, food courts, tea and coffee houses, soda fountains, taverns, canteens, catering services or other store formats and provide therein all types of amenities, facilities, conveniences, refreshments.

To license to other franchisees as a master franchisee, the right to develop, establish, operate and maintain, restaurants, eating houses, kiosks, fast food outlets, cafeteria, food courts, tea and coffee houses, soda fountains, taverns, canteens, catering services or other store formats.

To carry on all the business of hotels, restaurants, cafes, beer houses, refreshment rooms, night clubs, Pubs, Bars, wine, beer and spirit merchants, brewers, distillers, bakers and confectioners.

To purchase the lands and premises and take on lease or otherwise acquire lands, buildings or elsewhere for the business of hotels, restaurants, snack bars, café, ice cream parlours, dairy products, and allied food products and to sell and let the lands of the company or to use the same or any part thereof, or to acquire and use other lands for the construction of hotels, restaurants and entertainment centres etc.

3. A copy of the draft memorandum and articles of association of the proposed company may be inspected at the office No 745, Sarakki, 15th cross Road, J. P. Nagar 6th phase, Bangalore – 560078 On Business Hours From 10.00 AM To 5.00 PM.

4. Notice is hereby given that any person objecting to this application may communicate their objection in writing to the Registrar at Central Registration Centre (CRC), Indian Institute of Corporate Affairs (IICA), Plot No. 6, 7, 8, Sector 5, IMT Manesar, District Gurgaon (Haryana), Pin Code 122050, within twenty-one days from the date of publication of this notice, with a copy to the company at its registered office.

For and Behalf of
M/s SHRELOCK'S HATCH
Sd/-
Karthik Ampalli Raghuramraju
DIN: 06945046
Sd/-
Raghuram Raju Ample Lakshmi
DIN: 09618052
Dated this on 09th day of June 2022.

EDUCATIONAL

Correspondence Courses

DIRECT FINAL PUC B.Com BA BBA BCA MBA B.Ed Diploma BE D.Pharm PhD: 9739077186/ 8618506480

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

JOB OPPORTUNITIES

Engg/ Production Technical

FRESHERS/ EXPERIENCE. BE Civil/ Diploma for Property Valuation in Bangalore. Contact: 9845009445 saisri.associates16@gmail.com

Teachers/ Professors

SVN ENGLISH High School, Thanisandra Main Road (Opp Elements Mall) Nagawara Bangalore-77, Requires Experienced & Trained TEACHERS Nursery (NTT) Social Science, Computer, Drawing & PT for High School level. Call: 9686200200/ 9392303764/ 9448462093

General

WANTED IMMEDIATELY From Bannerghatta Road nearby places- RECEPTIONISTS, SALES OFFICERS, TELE-CALLERS. Good Salary. V&V 99000-54462

ಕ್ಲಾಸಿಫೈಡ್ಸ್

ADMISSION CORNER

COMMUNITY CENTRE ®

ಬೆಂಗಳೂರು ನಗರ ವಿಶ್ವವಿದ್ಯಾಲಯ BENGALURU CITY UNIVERSITY



COMMUNITY INSTITUTE OF COMMERCE AND MANAGEMENT STUDIES

Affiliated to Bengaluru City University, Recognized by Govt. of Karnataka
#2/1, 9th Cross, 9th Main, II Block, (Near Ashoka Pillar), Jayanagar, Bangalore-560011.

ADMISSIONS OPEN FOR 2022-23

COURSES OFFERED

B.Com
BBA | BCA

UNIQUE FEATURES

- Covid-19 protocols and measures stringently adopted
- Add on Course
- Soft skills Enhancement
- ICT enabled classrooms
- Campus placement

CONTACT: **9845560233**, OFFICE: **080-26565151**
Website: cicms.in E-Mail: info.ccims@gmail.com

ಕ್ಲಾಸಿಫೈಡ್ಸ್

CONNECT

Grand Flea Market in Collaboration with Chittara Presents

ದ ಸೂಕ್ (ಮಾರ್ಕೆಟ್)

THE SOUQ (MARKET)

17th to 26th June 2022
11 AM to 7 PM

10 Days Exhibition Entry Free

Art, Craft, Handlooms & Lifestyle Exhibition

Karnataka Chitrakala Parishath
Kumara Krupa Road, Bengaluru

Open on Sunday also | with Covid19 Safety Standards

For Details Contact : 9611835597 / 6364685716 | Direct from The Artisans

Visit and experience a rare contemporary form of Arts & Crafts, Clothing, Home Decor, Furniture, Handicrafts, Traditional Apparels, Women's Wear, Jewellery, Sarees, Men's Wear, Kids Wear, Toys, Organic Product, Fashion Accessories & plenty more products direct from the makers from all across India.



The Shadow Puppet Show
Date: 25th June 2022
Timing: 6 PM - 7 PM



The Djembe Live
Date: 26th June 2022
Timing: 5 PM - 7 PM

90+ Shopping Stalls | Directly from the Artisans from across India

Wanted

WANTED VEG and Non Veg Cooking Manager Delivery Boy Cashier 50 Nos Contact: 8892501007/ 9606701007

Hospital & Medical Jobs

URGENTLY REQUIRED FOR MEDICAL COLLEGE & HOSPITAL IN BIJAPUR, KARNATAKA

1) Office Case Worker (4 Nos) – with knowledge of University and National Medical Commission correspondence Works, Admission Process of Students UG's & PG's (Min. 5 Years Experience)
2) Office Superintendent (1 No)– with knowledge of Complete Office Administration (Min.10 Years Experience)
3) Medical Record Technicians / Officer (1 No) – 10 Years Experience
4) Public Relation Officer (2 Nos) – 7 Years Experience
5) Human Resource Manager (1 No) – 7 Years Experience
6) Warehouse Manager (1 No) – 7 Years Experience
7) Accounts Assistant (4 Nos) – 3 Years Experience
8) Clerks (6 Nos) – 3 Experience

Minimum Qualification for all Posts : Graduate with complete knowledge in Computers is must.

Please send us your C.V.'s to ibc2@ibc.co.in OR s.miranda1969@gmail.com
Phone: 080–42044182 / 8892678089

Architects

ARCHITECT OFFICE requires JUNIOR ARCHITECTS, CIVIL ENGINEERS with 3-5 years Experience. info@ngassociates.in

Call Centre

REQUIRED, TEAMLEADER, Telecaller, Field Executive For Bank loan collection (salary 20,000). Direct Recruitment. 9620206756, 9620200756.

Part-Time Jobs

REPUTED MNC COMPANY will Provide WORK FROM HOME, Earn 35000 to 40000 Malleshwaram: 7019215243/ 9886641282

RETIRED M/F or graduates earn Min.Rs. 50,000/- Contact:- 9036555160

Multiple Vacancy

GREENLINE ENERGY Equipments Pvt. Ltd, Ahmedabad. (Industrial Burners from CIB UNIGAS Italy) (Openings at Ahmedabad, Bangluru, Pune, Delhi) Requires (1)Senior Sales Manager - BE/ Science Grad./ MBA with 5-10yrs exp. of ind. product sales (2)Sales Engineers - BE/ Science Grad./ MBA with 2- 3 yrs exp. of ind. product sales (3)Service Engineer (BE/Diploma –Elec/ EC/ PE/ Inst) (exp 1-2yrs, freshers can apply) Pls send your resume on info@geeplglobal.com or only whatsapp on 9099016831.

PERSONAL

Change of Name

I S.PREETHI W/O Arun Mahadevappa R/O of No.19, 17th Cross, MCR Extension,Vijayanagar, Bangalore shall henceforth be known as Preethi Arun affidavit No.1072/14.06.2022 sworn before notary V.K.Raghu,Chikmagalur.

I, GIRISH KAPALESHWAR aged about 40 years S/o. GANAPATI residing at Flat No.201, Vaastu Serenity Apartment, RV Niketan Near Vijayashree Layout, Mylasandra, Bangalore South, Bangalore-560059 have changed my name to GIRISH G KAPALESHWAR vide affidavit dated 22.06.2022 sworn to before Advocate and Notary B. Rajashekhara Bangalore. Henceforth I shall be known as GIRISH G KAPALESHWAR

GUNJA PARDESHI 14831297L SEP/MT PARDESHI MV R/a WANWARI PUNE (HAVELI) MAHARASHTRA my name GUNJA PARDESHI TO GUNJA MANISH PARDESHI NOTARY KV MANI

RENUKA PUJARI W/O 6918717L EX/HAV SIDRAMAPPA YALAMELI R/a LACHYAN INDI VIJAYAPUR KARNATAKA my name RENUKA PUJARI TO RENUKA YALAMELI NOTARY KV MANI

I, VANDANA KUMARI JAIN OMPRAKASH residing at No.31, Prem Kunj, Abbigere Main Road, Kammagondanahlli, Bangalore-560015 have changed my name to VANDANA KUMARI JAIN vide affidavit dated 20/06/2022 sworn before notary Chandrakala, Bangalore.

I, MERCY VIOLA Residing at No. 1, 6th Main, 3rd Cross, Viveknagar, Further Extension, Bangalore-560047, have changed my name to MERCY BEULA, vide affidavit dated 22.06.2022 before notary L. Gopalakrishna Bangalore. Henceforth I shall be called MERCY BEULA only.

WE, SHARANAGOUD BHIMANAGOUD DEVARADDI and SHASHIKALA SHARANAGOUD DEVARADDI., R/at No. 52, Sasanur, Sasanur Post, Basavana Bagewadi Vijayapura- 586214 have changed our minor son name from VIYAAN to VIYAAN S DEVARADDI vide affidavit dated: 20/6/2022 Before Notary M.K. Devaki Bangalore.

I NANJESH alias VENKATESH. K, R/a. #101, Ambedkar Colony, Ittangooru Village, Sarjapur Post, Anekal Taluk, Bangalore- 562125 declare that both names pertain to me only, henceforth i shall be known as NANJESH affidavit 17.06.2022, notary T.R. Raghavendra Rao, Bangalore.

I, SURESH BADDI (Passport No K5899943) R/a #5G 201, 2nd Floor, Provident Sunworth Apartment, Kengeri Hobli, Kengeri Bengaluru- 560060 have changed my name to SURESH S BADDI (DOB 20-07-1959) vide affidavit dated 21.06.2022 before notary Devaraja.E Bengaluru

Lost

LOST
I, R. Ganesh have lost my Property document **No. 1344/2005** vide Registration No. 330080, Survey No. 182/3, 182/4, (1/3 Share) Vettuvanam Village, Tamil Nadu-635809 while travelling. **Finders please Contact :9880571935**

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427 ಇಮೇಲ್: **eemidcbpura@gmail.com**

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬ/ತಾಂಸ/ಸ.ಇಂ–2/ ಟೆಂಡರ್ ಪ್ರಕಟಣೆ ಸಂಖ್ಯೆ: 08/2022–23, ದಿನಾಂಕ : 20/06/2022

4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಬಾಗೇಪಲ್ಲಿ ಮತ್ತು ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲ್ಯೂ 1 ಮತ್ತು 2 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1, 2, 3 ಮತ್ತು 4 ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 02/07/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 06/07/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–270427 ಮತ್ತು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಬೆವಿಕಂ BESCOM

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಸಾರ್ವಜನಿಕ ಪ್ರಕಟಣೆ

ವಿಷಯ: 1ನೇ ಜುಲೈ 2022 ರಿಂದ 31ನೇ ಡಿಸೆಂಬರ್ 2022ರ ಬಿಲ್ಲಿಂಗ್ ಅವಧಿಗೆ ನಿಗದಿಪಡಿಸಿದ ಇಂಧನ ವ್ಯತ್ಯಾಸ ದರ.

ಉಲ್ಲೇಖ: ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶ ಸಂ.: ಕೆಇಆರ್‌ಸಿ/ಡಿಡಿ(ಟಾರಿಫ್)/ಬಿ/15/12, ದಿನಾಂಕ: 20.06.2022.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಜಾರಿ ಮಾಡಿದ ಕೆಇಆರ್‌ಸಿ (ಫ್ಯೂಯಲ್ ಕಾಸ್ಟ್ ಅಡ್ಜೆಸ್ಟ್‌ಮೆಂಟ್ ಚಾರ್ಜಸ್) ರೆಗ್ಯುಲೇಷನ್ಸ್, 2013ರಲ್ಲಿನ ನಿಯಮಾನುಸಾರ, ಆಯೋಗವು ಆರ್ಥಿಕ ವರ್ಷ–2022ರ 3ನೇ ತ್ರೈಮಾಸಿಕ (ಅಕ್ಟೋಬರ್–2021ರಿಂದ ಡಿಸೆಂಬರ್–2021) ದ ಅವಧಿಯ ಮತ್ತು ಆರ್ಥಿಕ ವರ್ಷ–2022ರ 4ನೇ ತ್ರೈಮಾಸಿಕ (ಜನವರಿ–2022ರಿಂದ ಮಾರ್ಚ್–2022)ದ ಅವಧಿಯ ವಿದ್ಯುತ್ ಖರೀದಿ ವೆಚ್ಚ ಮತ್ತು ಇಂಧನ ವೆಚ್ಚ ಹೊಂದಾಣಿಕೆ ಶುಲ್ಕಗಳಲ್ಲಿನ ಏರಿಕೆ ಪರಿಗಣಿಸಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ 1ನೇ ಜುಲೈ 2022 ರಿಂದ 31ನೇ ಡಿಸೆಂಬರ್ 2022ರ ಬಿಲ್ಲಿಂಗ್ ಅವಧಿಯಲ್ಲಿ **ಪ್ರತಿ ಯುನಿಟ್‌ಗೆ 31 ಪೈಸೆ (ಮೂವತ್ತೊಂದು ಪೈಸೆ ಮಾತ್ರ)** ಇಂಧನ ವ್ಯತ್ಯಾಸ ದರವನ್ನು ಪಡೆಯಲು ಅನುಮೋದಿಸಿದೆ.

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು (ನಿ.ವ್ಯ), ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಕೊಠಡಿ ಸಂಖ್ಯೆ: 106, 1ನೇ ಮಹಡಿ, ಬಹು ಮಹಡಿಗಳ ಕಟ್ಟಡ, ಸಚಿವಾಲಯ–3, ಬೆಂಗಳೂರು – 560001. ದೂರವಾಣಿ ಸಂಖ್ಯೆ: 080–22864189,
ಇ–ಮೇಲ್: secybalbhavan.bng@gmail.com

ಸಂಖ್ಯೆ: ಬಾಭಸೊ/ವಾಹನ/ಟೆಂಡರ್/2022–23 ದಿನಾಂಕ: 21–06–2022

ಟೆಂಡರ್ ಪ್ರಕಟಣೆ

ಬಾಲ ಭವನ ಸೊಸೈಟಿಯ ಕಾರ್ಯದರ್ಶಿಗಳ ಕಛೇರಿಯ ಅಧಿಕೃತ ಕೆಲಸಗಳ ಓಡಾಟಕ್ಕಾಗಿ ಒಂದು ವಾಹನದ ಅವಶ್ಯಕತೆ ಇರುವುದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಂತೆ ಒಂದು ವರ್ಷದ ಅವಧಿಗೆ ಒಂದು ಎ.ಸಿ. ಕಾರನ್ನು ಚಾಲಕರು ಹಾಗೂ ಇಂಧನ ಮತ್ತು ನಿರ್ವಹಣೆಗಳನ್ನೊಳಗೊಂಡಂತೆ ಗುತ್ತಿಗೆ ಆಧಾರದ ಮೇರೆಗೆ ಪಡೆಯಲು ಅರ್ಹ ಬಿಡ್ಡುದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ ಮೊತ್ತ **ರೂ. 10,000/–** (ಹತ್ತು ಸಾವಿರ ರೂಪಾಯಿ ಮಾತ್ರ). ಟೆಂಡರ್ ಫಾರಂಗಳನ್ನು **ರೂ. 500/–** ಗಳ ಡಿ.ಡಿ. ಮೂಲಕ ಪಾವತಿಸಿ ದಿನಾಂಕ: **22–06–2022ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ** ಕಛೇರಿ ಕರ್ತವ್ಯದ ದಿನಗಳಲ್ಲಿ ದಿನಾಂಕ: **06–07–2022ರಂದು ಮಧ್ಯಾಹ್ನ 1.00 ಘಂಟೆಯೊಳಗೆ ನೀಡಲಾಗುವುದು.** ಟೆಂಡರ್ ಡಾಕ್ಯೂಮೆಂಟ್‌ನ್ನು **ರೂ. 500/–** (ಐದು ನೂರು ರೂಪಾಯಿ ಮಾತ್ರ) ಗಳ ಡಿಮ್ಯಾಂಡ್ ಡ್ರಾಫ್ಟ್ / ಪೇ ಆರ್ಡರ್ ಮೂಲಕ ಮಾತ್ರ ಪಾವತಿ ಮಾಡಿ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **06–07–2022ರಂದು ಸಂಜೆ 4.00 ಗಂಟೆ** ಆಗಿರುತ್ತದೆ. ತಾಂತ್ರಿಕ ಲಕೋಟೆಯನ್ನು ದಿನಾಂಕ: **08–07–2022ರಂದು ಸಂಜೆ 4.00 ಗಂಟೆಗೆ ಹಾಗೂ ಹಣಕಾಸಿನ ಲಕೋಟೆಯನ್ನು** ದಿನಾಂಕ: **12–07–2022ರಂದು ಸಂಜೆ 4.00 ಗಂಟೆಗೆ ತೆರೆಯಲಾಗುವುದು.** ಹೆಚ್ಚಿನ ಮಾಹಿತಿಯನ್ನು ಮತ್ತು ಟೆಂಡರ್ ಡಾಕ್ಯೂಮೆಂಟ್‌ನ್ನು **ಕಾರ್ಯದರ್ಶಿಗಳ ಕಛೇರಿ, ಬಾಲ ಭವನ ಸೊಸೈಟಿ, ಕಬ್ಬನ್‌ಪಾರ್ಕ್, ಬೆಂಗಳೂರು** ಇಲ್ಲಿ ಕಛೇರಿ ಕಾರ್ಯ ನಿರ್ವಹಿಸುವ ದಿನಗಳಂದು **ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ** ಮಾಹಿತಿ ಪಡೆಯಬಹುದು.

ವಾಸಾಸಂಇ/ವಾ.ಪ್ರ/1022/ಅಡ್ವರ್ಟೋ/2022–23

ಸಹಿ/– ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿ ಮತ್ತು ಸರ್ಕಾರದ ಅಪರ ಕಾರ್ಯದರ್ಶಿಗಳು, ಬೆಂಗಳೂರು.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗಿನ್ನೆಸ್ ದಾಖಲೆಗೆ ರೇಖಾಚಿತ್ರ

ಬೆಂಗಳೂರು: ದಿ ಆಕ್ಸ್‌ಫರ್ಡ್ ವಿಜ್ಞಾನ ಕಾಲೇಜಿನ ಫ್ಯಾಷನ್ ಮತ್ತು ಉಡುಪು ವಿನ್ಯಾಸ ವಿಭಾಗದ ಹರ್ಷ ನೇತೃತ್ವದ 9 ಮಂದಿಯ 'ಹ್ಯಾಪಿ ಆರ್ಟ್' ತಂಡವು ಭಾರತ ಸಾಂಸ್ಕೃತಿಕ ಪರಂಪರೆ ಹಾಗೂ ಸ್ಮಾರಕ ಪ್ರತಿಬಿಂಬಿಸುವ ದೊಡ್ಡ ರೇಖಾಚಿತ್ರ ಅನಾವರಣಗೊಳಿಸಿದೆ.

ಗಿನ್ನೆಸ್ ದಾಖಲೆಗಾಗಿ 690 ಚದರ ಮೀಟರ್ ರೇಖಾಚಿತ್ರ ವಿನ್ಯಾಸಗೊಳಿಸಲಾಗಿದೆ. ಈ ಹಿಂದೆ ಹರಿಯಾಣದ ರಣದೀಪ್ ಸಿಂಗ್ ನೇತೃತ್ವದ 8 ಸದಸ್ಯರ ತಂಡವು ರೂಪಿಸಿದ್ದ 673.45 ಚದರ ಮೀಟರ್ ರೇಖಾಚಿತ್ರವು ಗಿನ್ನಿಸ್ ದಾಖಲೆಗೆ ಸೇರಿತ್ತು.

ಈ ರೇಖಾಚಿತ್ರದಲ್ಲಿ 30 ಸ್ಮಾರಕ, 2 ಗಾರ್ಡ್‌ಗಳು, ವಿವಿಧ ರಾಜ್ಯಗಳಿಗೆ ಸೇರಿದ 6 ಚಿಹ್ನೆಗಳನ್ನು ಒಳಗೊಂಡಂತಹ ದೇಶದ ಸಾಂಸ್ಕೃತಿಕ ವೈವಿಧ್ಯ ಬಿಂಬಿಸಲಾಗಿದೆ. ಕಲಾಕೃತಿ ರಚಿಸಲು ಮಾರ್ಚ್ 22ರಿಂದ ಜೂನ್ 14ರ ವರೆಗೆ ಒಟ್ಟು 85 ದಿನಗಳನ್ನು ತೆಗೆದುಕೊಳ್ಳಲಾಗಿತ್ತು ಎಂದು ತಂಡದ ಸದಸ್ಯರು ತಿಳಿಸಿದ್ದಾರೆ.

ವಿದ್ಯಾಸಂಸ್ಥೆಯ ನಿರ್ದೇಶಕ ಡಾ.ಕೆ. ಎಂ.ರವಿಕುಮಾರ್ ಮಾತನಾಡಿ, 'ವಿದ್ಯಾರ್ಥಿಗಳಲ್ಲಿ ಅಗಾಧ ಪ್ರತಿಭೆಯನ್ನು ಹೊರತರಲಿಕ್ಕೆ ಇಂತಹ ವೇದಿಕೆಗಳು ಸಾಕ್ಷಿ. ಗಿನ್ನೆಸ್ ದಾಖಲೆಯತ್ತ ಮುಖ ಮಾಡಿರುವ ತಂಡದ ಪ್ರಯತ್ನ, ಶ್ರಮ, ಉತ್ಸಾಹವು ಶ್ಲಾಘನೀಯ' ಎಂದರು.

PUBLIC NOTICE

It is hereby notified that, my clients intend to purchase the Schedule property from its owners: **(1) Smt.B.S.Lalitha, (2) Smt.N.Susheela, (3) Smt.S.Nagarathna** and **(4) Smt.N.Vijayalakshmi**, all are daughters of late N.Venkataramaiah, residing in the Schedule property.

If any person/s have any manner of right, title, interest or claim or charge or lien over the Schedule property or otherwise have any lawful objection/s for sale of the Schedule property by the aforesaid owners, they are hereby called upon to file their objections in writing, along with the photocopies of documents on which they rely, with the undersigned, within 45 days from the date of publication of this notice. Objection/s received thereafter will not be binding on my clients.

SCHEDULE

All that piece and parcel of the residential property bearing **Municipal No.15**, PID No.49-57-15, East to West 36 ft and North to South 79ft, in all measuring 2844Sq.ft, with an old building thereon, situated at Surveyor Street, Basavanagudi, Bangalore and bounded on:

East by : Private property
West by : Private property
North by : Property bearing No.15/1
South by : Surveyor Street

Sd/- Goutam Chand S.F
Advocate
Goutam Associates
No.60, 2nd Floor, Kanakapura Road, Basavanagudi, Bangalore-560 004.

KUDREMUKH

के आई ओ सी एल लिमिटेड
ಕೆಐಓಸಿಎಲ್ ಲಿಮಿಟೆಡ್
(ಭಾರತ ಸರ್ಕಾರದ ಒಂದು ಉದ್ಯಮ)
ಸಿಐಎನ್ : L13100KA1976GOI002974
ಎರಡನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560 034
ಟೆಲಿಫ್ಯಾಕ್ಸ್ - 080-25531525, ವೆಬ್ - www.kioclltd.in, ಇಮೇಲ್ - cs@kioclltd.in

ಪೋಸ್ಟಲ್ ಬ್ಯಾಲೆಟ್ ಮತ್ತು ರಿಮೋಟ್ ಇ-ಮತದಾನಕ್ಕೆ ನೋಟೀಸು

ಈ ಮುಂದೆ ಹೇಳುವ ಪ್ರಕಾರ ನೋಟೀಸನ್ನು ನೀಡಲಾಗಿದೆ : ಕಂಪನಿಗಳ ಕಾಯ್ದೆ, 2013 ("ದಿ ಆ್ಯಕ್ಟ್") ರ ವಿಭಾಗ 110ರೊಂದಿಗೆ ಅನುಗುಣವಾದ ವಿಭಾಗ 108 ಮತ್ತು ಅನ್ವಯವಾಗುವ ಇತರ ನಿಬಂಧನೆಗಳು ಏನಾದರೂ ಇದ್ದರೆ, 2014ರ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ ನಿಯಮಗಳ) 20 ಮತ್ತು 22 ನಿಯಮಗಳು (ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ತಾತ್ಕಾಲಿಕವಾಗಿ ಸದ್ಯಕ್ಕೆ ಜಾರಿಯಲ್ಲಿರುವ ಮರು-ಅನುಷ್ಠಾನಗಳು), 2015 ರ ಖಉಆಐ ನಿಯಮಾವಳಿಗಳ 44ನೇ ನಿಯಮ (ಪಟ್ಟಿ ಮಾಡುವ ಜವಾಬ್ದಾರಿಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು), ಸಾಮಾನ್ಯ ಸಭೆಗಳ ಕುರಿತು ಕಾರ್ಯದರ್ಶಿಯ ಮಾನದಂಡಗಳಿಗೆ (SS-2) ಅನ್ವಯವಾಗುವ ಮಟ್ಟಕ್ಕೆ ಹಾಗೂ ಸಾಮಾನ್ಯ ಸುತ್ತೋಲೆ ಸಂ.14 / 2020 ದಿನಾಂಕ ಏಪ್ರಿಲ್ 8, 2020, ಸಾಮಾನ್ಯ ಸುತ್ತೋಲೆ ಸಂ.17 / 2020 ದಿನಾಂಕ ಏಪ್ರಿಲ್ 13, 2020 ಮತ್ತು ಸಾಮಾನ್ಯ ಸುತ್ತೋಲೆ ಸಂ. 3/2022 ದಿನಾಂಕ ಮೇ 05, 2022ರ ಪ್ರಕಾರ ಹಾಗೂ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ ("MCA ಸುತ್ತೋಲೆಗಳುಃ) ದಿಂದ ನೀಡಲಾದ (ಯಾವುದೇ ಶಾಸನಬದ್ಧ ಮಾರ್ಪಾಡು ಅಥವಾ ಸದ್ಯಕ್ಕೆ ತಾತ್ಕಾಲಿಕವಾಗಿ ಜಾರಿಯಲ್ಲಿರುವ ಮರು-ಅನುಷ್ಠಾನ ಹಾಗೂ ಕಾಲ-ಕಾಲಕ್ಕೆ ತಿದ್ದುಪಡಿ ಮಾಡಿದ ಪ್ರಕಾರ), ಕಂಪನಿಯು ಜೂನ್ 22, 2022 ರ ಅಂಚೆ ಮತಪತ್ರದಲ್ಲಿ ಸೂಚಿಸಲಾದ ಸಾಮಾನ್ಯ / ವಿಶೇಷ ನಿರ್ಣಯ(ಗಳನ್ನು) ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ (ರಿಮೋಟ್ ಇ-ವೋಟಿಂಗ್) ಮತ ಚಲಾಯಿಸುವ ಮೂಲಕ ತನ್ನ ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ.

ಪೋಸ್ಟಲ್ ಬ್ಯಾಲೆಟ್‌ನ ವಿವರಗಳು ಕೆಳಕಂಡಂತಿವೆ :

ಕ್ರ.ಸಂ.	ವಿವರಗಳು	ವೇಳಾಪಟ್ಟಿ
1.	ಅಂಚೆ ಮತಪತ್ರಕ್ಕಾಗಿ ಇ-ಮತದಾನದ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು ಕೊನೆಯ ದಿನಾಂಕ	ಶುಕ್ರವಾರ, 17-06-2022
2.	ಇ-ಮತದಾನ ಪ್ರಾರಂಭವಾಗುವ ದಿನಾಂಕ ಮತ್ತು ಸಮಯ	ಶುಕ್ರವಾರ, 24-06-2022 (ಬೆ.09:00 ಗಂಟೆಗೆ)
3.	ಇ-ಮತದಾನ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ	ಶನಿವಾರ, 23-07-2022 (ಸಂ.05:00 ಗಂಟೆಗೆ)
4.	ರಿಮೋಟ್ ಇ-ಮತದಾನದ ಸೌಲಭ್ಯವನ್ನು ನೀಡುವ ಏಜೆನ್ಸಿ	ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ("CDSL")
5.	ಅಂಚೆ ಬ್ಯಾಲೆಟ್ ನೋಟೀಸು ಲಭ್ಯವಿರುವ ವೆಬ್‌ಸೈಟ್(ಗಳು)	1.www.kioclltd.in 2.www.evotingindia.com 3.www.bseindia.com 4.www.nseindia.com 5.www.msei.in
6.	ಇ-ಮತದಾನವನ್ನು ನಡೆಸಲು ಮತ್ತು ವರದಿಯನ್ನು ಸಲ್ಲಿಸಲು ಸ್ಕ್ರೂಟಿನೈಸರ್	ಶ್ರೀ.ಎಸ್.ಎನ್.ಮಿಶ್ರ (FCS: 6143) M/s ಎಸ್‌ಎನ್‌ಎಮ್ & ಅಸೋಸಿಯೇಟ್ಸ್, ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರೀಸ್
7.	ಇ-ಮತದಾನಕ್ಕೆ ಸಂಬಂಧಿಸಿದಂತೆ ಕುಂದುಕೊರತೆಗಳನ್ನು ಬಗೆಹರಿಸುವ ಜವಾಬ್ದಾರಿಯನ್ನು ಹೊಂದಿರುವ ವ್ಯಕ್ತಿಯ ಸಂಪರ್ಕ ವಿವರಗಳು	ಹೆಸರು – ಶ್ರೀ.ರಾಕೇಶ್ ದಲವಿ ಹುದ್ದೆ– ಸೀನಿಯರ್ ಮ್ಯಾನೇಜರ್, CDSL ವಿಳಾಸ : ಎ ವಿಂಗ್, 25ನೇ ಮಹಡಿ, ಮರಥಾನ್ ಫ್ಯೂಚರೆಕ್ಸ್, ಮಫತ್‌ಲಾಲ್ ಮಿಲ್ ಕಾಂಪೌಂಡ್ಸ್, ಎನ್.ಎಂ. ಜೋಷಿ ಮಾರ್ಗ್, ಲೋವರ್ ಪರೇಲ್ (ಪೂರ್ವ) ಮುಂಬೈ – 400013 ಇಮೇಲ್ : helpdesk.evoting@cdslindia.com ಫ್ಯಾಕ್ಸ್ : 022-23058542/43

ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ :

1. ಮೇಲೆ ತಿಳಿಸಲಾದ MCA ಸುತ್ತೋಲೆಗಳ ಅನುಸರಣೆಯ ಪ್ರಕಾರ ಕಂಪನಿಯು ಅಂಚೆ ಬ್ಯಾಲೆಟ್ ನೋಟೀಸನ್ನು 22-06-2022 ರಂದು ನಡೆಯಲಿರುವ ರಿಮೋಟ್ ಇ-ಮತದಾನಕ್ಕಾಗಿ ವಿವರಣಾತ್ಮಕ ಹೇಳಿಕೆ ಮತ್ತು ಸೂಚನೆಗಳೊಂದಿಗೆ ಕಂಪನಿ/ ಆರ್‌ಟಿಎ / ಡೆಪಾಸಿಟರೀಸ್ /ಡೆಪಾಸಿಟರಿ ಭಾಗಿಗಳೊಂದಿಗೆ ನೋಂದಾಯಿತವಾಗಿರುವ ಸದಸ್ಯರ ಹಾಗೂ ಸದಸ್ಯರ ಹಾಜರಿಯಲ್ಲಿ ಕಂಡುಬರುವ ಹೆಸರುಗಳು / ಫಲಾನುಭವಿ ಮಾಲೀಕರ ಇಮೇಲ್ ವಿಳಾಸಗಳಿಗೆ ಮಾತ್ರ ಕೊನೆಯ ದಿನಾಂಕದಂದು ರವಾನೆಯನ್ನು ಪೂರ್ಣಗೊಳಿಸಿದೆ. ಕೊನೆಯ ದಿನಾಂಕದಂದು ಯಾವುದೇ ವ್ಯಕ್ತಿಯು ಕಂಪನಿಯ ಸದಸ್ಯನಲ್ಲದಿದ್ದಲ್ಲಿ ಅವರು ಈ ನೋಟೀಸನ್ನು ಕೇವಲ ಮಾಹಿತಿ ಉದ್ದೇಶಕ್ಕೆ ಮಾತ್ರ ಎಂದು ಪರಿಗಣಿಸಬೇಕು.
2. ರಿಮೋಟ್ ಇ-ಮತದಾನವು 24-06-2022 ರಿಂದು ಬೆಳಿಗ್ಗೆ 09.00 ಗಂಟೆಗೆ ಪ್ರಾರಂಭಿಸಿ 23-07-2022 ರಂದು ಸಂಜೆ 05.00 ಗಂಟೆಗೆ ಕೊನೆಗೊಳ್ಳುತ್ತದೆ, ಎರಡೂ ದಿನಗಳು ಒಳಗೊಂಡಿರುತ್ತದೆ. ಇದಾದ ನಂತರ ಇ-ಮತದಾನದ ಮಾಡ್ಯೂಲನ್ನು CDSL ಅವರು ನಿಷ್ಕ್ರಿಯಗೊಳಿಸುತ್ತಾರೆ ಹಾಗೂ ನಂತರ ಇ-ಮತದಾನವನ್ನು ಹೇಳಲಾದ ದಿನಾಂಕ ಮತ್ತು ಸಮಯದ ನಂತರ ಅನುಮತಿಸಲಾಗುವುದಿಲ್ಲ.
3. ನೋಂದಾವಣೆಯ ವಿಧಾನ / ಇಮೇಲ್ ನವೀಕರಣ / ಮೊಬೈಲ್ ಸಂ.:

ಭೌತಿಕ ಷೇರುದಾರರಿಗೆ :	ಅಗತ್ಯವಿರುವ ವಿವರಗಳಾದ ಫೋಲಿಯೋ ಸಂಖ್ಯೆ. ಷೇರ್‌ಹೋಲ್ಡರ್ ಹೆಸರು, ಷೇರ್ ಪ್ರಮಾಣಪತ್ರದ ಸ್ಕ್ಯಾನ್ ಮಾಡಲಾದ ಪ್ರತಿ (ಹಿಂಭಾಗ ಮತ್ತು ಮುಂಭಾಗ), ಪ್ಯಾನ್ (ಸೆಲ್ಫ್ ಅಟೆಸ್ಟ್ ಮಾಡಲಾದ ಸ್ಕ್ಯಾನ್ಡ್ ಪ್ರತಿ), ಆಧಾರ್ (ಸೆಲ್ಫ್ ಅಟೆಸ್ಟ್ ಮಾಡಲಾದ ಸ್ಕ್ಯಾನ್ಡ್ ಪ್ರತಿ)ಇವುಗಳನ್ನು ಇಮೇಲ್ ಮೂಲಕ ಕಂಪನಿಗೆ cs@kioclltd.in ಅಥವಾ ಆರ್‌ಟಿಎ irg@integratedindia.in.ಗೆ ಒದಗಿಸಬೇಕು.
ಡಿಮ್ಯಾಟ್ ಷೇರ್‌ಹೋಲ್ಡರ್‌ಗಳಿಗೆ:	ಅವರ ಸಂಬಂಧಪಟ್ಟ ಡೆಪಾಸಿಟರಿ ಭಾಗಿಯೊಂದಿಗೆ (ಡಿಪಿ) ಅವರ ಇಮೇಲ್ ಐಡಿ/ಮೊಬೈಲ್ ಸಂಖ್ಯೆಯನ್ನು ನವೀಕರಿಸಿ

4. ಸ್ಕ್ರೂಟಿನೈಸರ್ ವರದಿಯೊಂದಿಗೆ ಅಂಚೆ ಮತದಾನದ ಫಲಿತಾಂಶಗಳನ್ನು ರಿಮೋಟ್-ಇ-ಮತದಾನ ಪ್ರಕ್ರಿಯೆಯ ಮುಕ್ತಾಯದ 'ಎರಡು ಕೆಲಸದ ದಿನಗಳ' ಒಳಗೆ ಘೋಷಿಸಲಾಗುತ್ತದೆ, ಅಂದರೆ, 26-07-2022 ರಂದು ಅಥವಾ ಮೊದಲು ಮತ್ತು BSE, NSE, MSEI ಮತ್ತು ಏಕಕಾಲದಲ್ಲಿ ತಿಳಿಸಲಾಗುತ್ತದೆ. ಕಂಪನಿಯ ವೆಬ್‌ಸೈಟ್ www.evotingindia.com ನಲ್ಲಿ ಮತ್ತು CDSL ನ www.evotingindia.com ನಲ್ಲಿ ಅಪ್‌ಲೋಡ್ ಮಾಡಲಾಗುವುದು.

ಕೆಐಓಸಿಎಲ್ ಲಿಮಿಟೆಡ್ ಪರವಾಗಿ
ಸಹಿ
(ಪಿ.ಕೆ.ಮಿಶ್ರ)
ಕಂಪನಿ ಸೆಕ್ರೆಟರಿ

ಸ್ಥಳ – ಬೆಂಗಳೂರು
ದಿನಾಂಕ – 23.06.2022

ಸಾಲದ ವಿಚಾರಕ್ಕೆ ಟೈಲರ್ ದಂಪತಿ ಮಧ್ಯೆ ಗಲಾಟೆ

ಪತ್ನಿ ಕೊಂದು ಪುತ್ರಿಯ ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ತೀರಿಸುವಂತೆ ಪದೇ ಪದೇ ಒತ್ತಾಯಿಸುತ್ತಿದ್ದ ಪತ್ನಿಯನ್ನು ಟೈಲರ್ ಒಬ್ಬ ಇರಿದು ಕೊಲೆ ಮಾಡಿ, ಬಳಿಕ 14 ವರ್ಷದ ಮಗಳನ್ನೂ ಕೊಲೆ ಮಾಡಲು ಯತ್ನಿಸಿದ ಘಟನೆ ಯಶವಂತಪುರ ಬಳಿಯ ಮತ್ತಿಕೆರೆಯಲ್ಲಿ ಬುಧವಾರ ಬೆಳಿಗ್ಗೆ ನಡೆದಿದೆ.

ಅನಸೂಯಾ (42) ಕೊಲೆಯಾದ ಮಹಿಳೆ. ಆಕೆಯ ಮಗಳು, 9ನೇ ತರಗತಿ ವಿದ್ಯಾರ್ಥಿನಿ ಸಹನಾ(14) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಕೃತ್ಯ ಎಸಗಿದ ಬಳಿಕ ಆರೋಪಿ ದಾನೇಂದ್ರ (49) ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಪೊಲೀಸರಿಗೆ ಶರಣಾಗಿದ್ದಾನೆ.

ದಾನೇಂದ್ರ ಮತ್ತು ಅನಸೂಯಾ ಟೈಲರಿಂಗ್ ಕೆಲಸ ಮಾಡುತ್ತಿದ್ದು, ಪುತ್ರಿ ಜತೆ ಮತ್ತಿಕೆರೆಯಲ್ಲಿ ನೆಲೆಸಿದ್ದರು. ಕುಟುಂಬ ನಿರ್ವಹಣೆಗಾಗಿ ದಾನೇಂದ್ರ ₹ 2.50 ಲಕ್ಷ ಸಾಲ ಮಾಡಿದ್ದ. ಈ ವಿಚಾರಕ್ಕೆ ದಂಪತಿ ಮಧ್ಯೆ ಆಗಾಗ ಗಲಾಟೆ ನಡೆಯುತ್ತಿತ್ತು. ಮಂಗಳವಾರ ರಾತ್ರಿ ಕೂಡ ಸಾಲ ತೀರಿಸುವ ವಿಚಾರಕ್ಕೆ ದಂಪತಿ ನಡುವೆ ಜಗಳ ನಡೆದಿದ್ದು, ಪುತ್ರಿ ಜಗಳ ಬಿಡಿಸಿದ್ದರು. ನಂತರ ಮೂವರೂ ಮಲಗಿದ್ದರು.

ನಸುಕಿನ ಮೂರು ಗಂಟೆ ಸುಮಾರಿಗೆ ಎಚ್ಚರಗೊಂಡ ಆರೋಪಿ, ಪತ್ನಿ ಮತ್ತು ಪುತ್ರಿಯನ್ನು ಕೊಂದು ಬಳಿಕ ತಾನೂ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದಾನೆ. ಅದರಂತೆ, ಮಲಗಿದ್ದ ಪತ್ನಿಯ ಕುತ್ತಿಗೆಯನ್ನು ಚಾಕುವಿನಿಂದ 2–3 ಬಾರಿ ಇರಿದು ಕೊಲೆ ಮಾಡಿದ್ದಾನೆ. ತಾಯಿಯ ಚೀರಾಟ ಕೇಳಿ ಪುತ್ರಿ ಎಚ್ಚರಗೊಳ್ಳುತ್ತಿದ್ದಂತೆ, ಆಕೆಯ ಕುತ್ತಿಗೆಯ ಭಾಗಕ್ಕೂ ಚಾಕುವಿನಿಂದ ಚುಚ್ಚಿದ್ದಾನೆ. ಆದರೆ, ಆಕೆ ಪ್ರಜ್ಞೆತಪ್ಪಿ ಕೆಳಗೆ ಬಿದ್ದಿದ್ದಾಳೆ. ಇಬ್ಬರೂ ಮೃತಪಟ್ಟಿದ್ದಾರೆ ಎಂದುಕೊಂಡ ಆರೋಪಿ, ಕೆಲಹೊತ್ತು ಸ್ಥಳದಲ್ಲೇ ಸಮಯ ಕಳೆದಿದ್ದಾನೆ.

ಇದೇ ವೇಳೆ ಪುತ್ರಿ ಎಚ್ಚರಗೊಂಡಿದ್ದು, ಮತ್ತೆ ಆಕೆಗೆ ಇರಿಯಲು ಮುಂದಾಗಿದ್ದಾನೆ. ಆದರೆ, ಆಕೆ ತಪ್ಪಿಸಿಕೊಂಡಿದ್ದಾಳೆ. ತಪ್ಪಿನ ಅರಿವಾಗುತ್ತಿದ್ದಂತೆ ಪುತ್ರಿಯ ಸ್ಥಿತಿ ಕಂಡು ಮರುಗಿದ ಆತ, ತಾನೂ ಆತ್ಮಹತ್ಯೆ ಮಾಡಿಕೊಂಡರೆ ಮಗಳನ್ನು ಯಾರು ನೋಡಿಕೊಳ್ಳುತ್ತಾರೆಂದು ಕೂಡಲೇ ಪೊಲೀಸ್ ಸಹಾಯವಾಣಿ 112ಗೆ ಕರೆ ಮಾಡಿ ಮಾಹಿತಿ ನೀಡಿದ್ದಾನೆ. ಸ್ಥಳಕ್ಕೆ ಬಂದ ಯಶವಂತಪುರ ಠಾಣೆಯ ಪೊಲೀಸರು ಪತ್ನಿಯ ಶವದ ಎದುರು ಕುಳಿತಿದ್ದ ಆರೋಪಿಯನ್ನು ಬಂಧಿಸಿದ್ದು, ಗಾಯಾಳು ಸಹನಾಳನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

'ಸಾಲ ತೀರಿಸುವ ವಿಚಾರಕ್ಕೆ ಪತ್ನಿ ಜತೆ ಜಗಳವಾಗಿತ್ತು. ಹೀಗಾಗಿ, ಪತ್ನಿ ಮತ್ತು ಪುತ್ರಿಯನ್ನು ಕೊಲೆ ಮಾಡಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದೆ. ಆದರೆ, ಆತ್ಮಹತ್ಯೆ ಮಾಡಿಕೊಳ್ಳಲು ಧೈರ್ಯ ಬರಲಿಲ್ಲ. ಜೊತೆಗೆ ಪುತ್ರಿಯ ಗೋಳಾಟ ಕಂಡು ನಿರ್ಧಾರ ಬದಲಿಸಿದೆ. ನನ್ನ ತಪ್ಪಿಗೆ ಸರಿಯಾದ ಶಿಕ್ಷೆ ಆಗಬೇಕು' ಎಂದು ವಿಚಾರಣೆಯ ವೇಳೆ ಗೋಳಾಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

50 ರೂಪಾಯಿಗೆ ಸ್ನೇಹಿತನ ಕೊಲೆ

ಬೆಂಗಳೂರು: ಕುರುಬರಹಳ್ಳಿ ವೃತ್ತದ ಬಳಿ ಕೇವಲ 50 ರೂಪಾಯಿಗಾಗಿ ಸ್ನೇಹಿತರ ನಡುವೆ ಮಂಗಳವಾರ ರಾತ್ರಿ ನಡೆದ ಜಗಳವು ಒಬ್ಬನ ಕೊಲೆಯಲ್ಲಿ ಅಂತ್ಯವಾಗಿದೆ.

ಲಗ್ಗೆರೆ ನಿವಾಸಿ ಶಿವಮಾಧು (24) ಕೊಲೆಯಾದ ಯುವಕ. ಶಿವಮಾಧುವನ್ನು ಸ್ನೇಹಿತ ಶಾಂತಕುಮಾರ್ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾನೆ.

ಶಿವಮಾಧು ಮತ್ತು ಶಾಂತಕುಮಾರ್ ಚಿಕ್ಕಂದಿನಿಂದ ಜೊತೆಯಾಗಿ ಬೆಳೆದವರು. ಕುರುಬರಹಳ್ಳಿ ವೃತ್ತದ ಬಳಿಯಿಂದ ಕೆಲವು ವರ್ಷಗಳ ಹಿಂದೆ ಲಗ್ಗೆರೆ ಬ್ರಿಡ್ಜ್ ಬಳಿಗೆ ಸ್ಥಳಾಂತರ ಆಗಿದ್ದರು. ಆದರೂ ಕುರುಬರಹಳ್ಳಿ ವೃತ್ತದ ಬಳಿಗೆ ಆಗಾಗ ಬರುತ್ತಿದ್ದರು. ಆರೋಪಿ ಜೊಮ್ಯಾಟೊ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರೆ, ಮೃತ ಶಿವಮಾಧು ಆಟೊ ಚಾಲಕನಾಗಿದ್ದ.

ಎಂದಿನಂತೆ ಮಂಗಳವಾರ ಸಂಜೆ ಕುರುಬರಹಳ್ಳಿ ವೃತ್ತದ ಕಡೆ ಬಂದಿದ್ದ ಶಿವಮಾಧು, ಶಾಂತಕುಮಾರ್ ಮತ್ತು ಸ್ನೇಹಿತರು ಸಮೀಪದ ಮೈದಾನವೊಂದರಲ್ಲಿ ಕ್ರಿಕೆಟ್ ಆಡಲು ಹೋಗಿದ್ದರು. ಕ್ರಿಕೆಟ್ ಆಡಿ ಬಂದವರೇ ಏನೋ ಕೆಲಸಕ್ಕೆಂದು ರಾತ್ರಿ 8.30ರ ಸುಮಾರಿಗೆ ವೃತ್ತದ ಬಳಿಯಿರುವ ಸೈಬರ್ ಸೆಂಟರ್‌ಗೆ ಹೋಗಿದ್ದರು. ಈ ವೇಳೆ ಶಾಂತಕುಮಾರ್ ಜೇಬಿನಿಂದ ಶಿವಮಾಧು 50 ರೂಪಾಯಿ ತೆಗೆದುಕೊಂಡ. ಈ ವೇಳೆ ಇಬ್ಬರ ಮಧ್ಯೆ ಜಗಳವಾಯಿತು. ಆಗ ತನ್ನ ಬಳಿ ಇದ್ದ ಚಾಕುವಿನಿಂದ ಶಿವಮಾಧು ಎದೆಗೆ ಶಾಂತಕುಮಾರ್ ಚುಚ್ಚಿ ಪರಾರಿಯಾಗಿದ್ದಾನೆ. ತೀವ್ರ ರಕ್ತಸ್ರಾವದಿಂದ ಬಿದ್ದಿದ್ದ ಶಿವಮಾಧುವನ್ನು ಸ್ನೇಹಿತರು ಸ್ಥಳೀಯ ಆಸ್ಪತ್ರೆಗೆ ಸೇರಿಸಿದರೂ ಆತ ಮೃತಪಟ್ಟಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಬಸವೇಶ್ವರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ದಾಸರಹಳ್ಳಿ ವ್ಯಾಪ್ತಿಯಲ್ಲಿ ವ್ಯಾಪಾರ ಮಳಿಗೆ ನಿರ್ಬಂಧಿಸಲು ಒತ್ತಾಯ

ಬೆಂಗಳೂರು: ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆ ದುರಸ್ತಿ ಆಗುವ ತನಕ ವಾಹನ ದಟ್ಟಣೆ ನಿಯಂತ್ರಿಸುವ ಅಗತ್ಯವಿದ್ದು, ಈ ಭಾಗದಲ್ಲಿ ದೊಡ್ಡ ವ್ಯಾಪಾರ ಮಳಿಗೆ ಮತ್ತು ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ತೆರೆಯಲು ಅವಕಾಶ ನೀಡಬಾರದು ಎಂದು ದಾಸರಹಳ್ಳಿ ಶಾಸಕ ಆರ್.ಮಂಜುನಾಥ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ತಾಂತ್ರಿಕ ದೋಷ ಕಂಡುಬಂದು 6 ತಿಂಗಳು ಕಳೆದರೂ ದುರಸ್ತಿ ಕಾರ್ಯ ಕೈಗೊಂಡಿಲ್ಲ. ಮೇಲ್ಸೇತುವೆ ನಿರ್ಮಾಣ ಮಾಡಿದ ಕಂಪನಿ ಗುಣಮಟ್ಟದ ಕಾಮಗಾರಿ ನಿರ್ವಹಿಸಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೂ ಸಮರ್ಪಕವಾಗಿ ಮೇಲ್ವಿಚಾರಣೆ ನಡೆಸದೆ ಈಗ ತೊಂದರೆ ಅನುಭವಿಸುವಂತಾಗಿದೆ ಎಂದು ಹೇಳಿದ್ದಾರೆ.

ಚರಂಡಿ ಕಾಮಗಾರಿ: ಮರ ಬಿದ್ದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಐಎಸ್‌ಸಿ ಕಾಂಪೌಂಡ್ ಪಕ್ಕದಲ್ಲಿದ್ದ ಮರ ಬಿದ್ದು ಚರಂಡಿ ನಿರ್ವಹಣೆ ಕಾಮಗಾರಿಯ ಉಪ ಗುತ್ತಿಗೆ ವಹಿಸಿದ್ದ ವ್ಯಕ್ತಿ ಮೃತಪಟ್ಟ ಘಟನೆ ಬುಧವಾರ ನಸುಕಿನಲ್ಲಿ ನಡೆದಿದೆ.

ಆನೇಕಲ್ ಬಳಿಯ ಕಾಚಮಾರನಹಳ್ಳಿ ಗ್ರಾಮದ ವಸಂತಕುಮಾರ್ (33) ಮೃತ ವ್ಯಕ್ತಿ. ಬೆಳಗಿನ 3.30ರ ಸುಮಾರಿಗೆ ಈ ಘಟನೆ ನಡೆದಿದೆ. ಬಿಬಿಎಂಪಿಯಿಂದ ಚರಂಡಿ ನಿರ್ವಹಣೆಯ ಗುತ್ತಿಗೆಯನ್ನು ಪಡೆದಿದ್ದ ಕಂಪನಿಯಿಂದ ವಸಂತಕುಮಾರ್ ಅವರು ಉಪ ಗುತ್ತಿಗೆ ಪಡೆದು ಕೆಲಸ ಮಾಡುತ್ತಿದ್ದ ವೇಳೆ ದುರಂತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಐಐಎಸ್‌ಸಿ ಆವರಣಕ್ಕೆ ಹೊಂದಿಕೊಂಡಿದ್ದ ಚರಂಡಿಯನ್ನು ಜೆಸಿಬಿ ಸಹಾಯದಿಂದ ವಸಂತಕುಮಾರ್ ಮತ್ತು ಅವರ ಸಹೋದರ ನಾಗೇಶ್ ಸ್ವಚ್ಛಗೊಳಿಸುತ್ತಿದ್ದ ವೇಳೆ ಬೃಹದಾಕಾರದ ಮರ ಬುಡ ಸಮೇತ ಉರುಳಿ ಬಿದ್ದಿದೆ. ಕಾಂಪೌಂಡ್ ಮೇಲೆ ಬಿದ್ದ ಮರದಡಿಯಲ್ಲಿ ಸಿಲುಕಿ ವಸಂತಕುಮಾರ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಈ ರಸ್ತೆಯಲ್ಲಿ ಹಗಲಿನ ವೇಳೆ ವಾಹನ ಸಂಚಾರ ದಟ್ಟಣೆ ಇರುವ ಕಾರಣಕ್ಕೆ ರಾತ್ರಿ ವೇಳೆ ಕಾಮಗಾರಿ ನಡೆಯುತ್ತಿತ್ತು. ಮಾಹಿತಿ ಸಿಕ್ಕಿದ ತಕ್ಷಣ ಯಶವಂತಪುರ ಠಾಣೆಯ ಪೊಲೀಸರು ಸ್ಥಳಕ್ಕೆ ಧಾವಿಸಿದ್ದಾರೆ. ಅಲ್ಲದೆ, ಯಶವಂತಪುರ ಮತ್ತು ರಾಜಾಜಿನಗರ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ತಂಡಗಳು ಸ್ಥಳಕ್ಕೆ ತಲುಪಿ ಕಾರ್ಯಾಚರಣೆ ನಡೆಸಿದ್ದವು.

ಪಾಲಿಕೆಯಿಂದ ಪರಿಹಾರ ನೀಡಲು ಅವಕಾಶ ಇಲ್ಲ: 'ಮರ ಬಿದ್ದಿರುವ ಘಟನೆ ಆಕಸ್ಮಿಕ ಆಗಿರುವುದರಿಂದ ಯಾರ ವಿರುದ್ಧವೂ ಕ್ರಮ ಕೈಗೊಳ್ಳಲು ಆಗುವುದಿಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ದುರಂತದ ಬಗ್ಗೆ ಪಾಲಿಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಐಐಎಸ್‌ಸಿ ಆವರಣದಲ್ಲಿ ಕಾಂಪೌಂಡ್ ಪಕ್ಕದಲ್ಲಿ ಇದ್ದ ಮರ ಬಿದ್ದಿದೆ. ಮರ ಬಿದ್ದ ರಭಸಕ್ಕೆ ಪಕ್ಕದಲ್ಲೇ ಕೆಲಸ ಮಾಡುತ್ತಿದ್ದ ಕಾರ್ಮಿಕರ ಮೇಲೆ ಕಾಂಪೌಂಡ್ ಬಿದ್ದಿದೆ. ಮೃತರ ಕುಟುಂಬಕ್ಕೆ ₹ 5 ಲಕ್ಷ ಪರಿಹಾರವನ್ನು ಪಾಲಿಕೆಯಿಂದ ನೀಡಲು ಅವಕಾಶ ಇಲ್ಲ. ಐಐಎಸ್‌ಸಿ ಆವರಣದಲ್ಲಿದ್ದ ಮರ ಬಿದ್ದಿರುವುದರಿಂದ ಪರಿಹಾರ ನೀಡಲು ಅವರಿಗೆ ತಿಳಿಸಲಾಗಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

10 ದಿನ ಅವಧಿಗೆ ಸಿಸಿಬಿ ವಶಕ್ಕೆ ಶರ್ಫುದ್ದೀನ್

ಬೆಂಗಳೂರು: ಪಾಕಿಸ್ತಾನದಿಂದ ಬರುತ್ತಿದ್ದ ಅಂತರರಾಷ್ಟ್ರೀಯ ಕರೆಗಳನ್ನು ಸ್ಥಳೀಯ ಕರೆಗಳನ್ನಾಗಿ ಪರಿವರ್ತಿಸುತ್ತಿದ್ದ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಕೇರಳ ಮೂಲದ ಶರ್ಫುದ್ದೀನ್‌ನನ್ನು ವಿಚಾರಣೆಗಾಗಿ ಸಿಸಿಬಿ ಪೊಲೀಸರು ಹತ್ತು ದಿನಗಳ ಅವಧಿಗೆ ವಶಕ್ಕೆ ಪಡೆದುಕೊಂಡಿದ್ದಾರೆ.

ಹೆಸರುಘಟ್ಟದಲ್ಲಿ ನೆಲೆಸಿದ್ದ ಆರೋಪಿ ಕೇರಳದ ವ್ಯಕ್ತಿಯೊಬ್ಬನ ಸೂಚನೆ ಮೇರೆಗೆ ಹೆಸರುಘಟ್ಟದ ಭುವನೇಶ್ವರಿನಗರ, ಸಿದ್ದೇಶ್ವರ ಲೇಔಟ್, ಚಿಕ್ಕಸಂದ್ರ ಸೇರಿ ನಾಲ್ಕು ಕಡೆಗಳಲ್ಲಿ ಕರೆಗಳ ಪರಿವರ್ತನೆಯ ಪರಿಕರಗಳನ್ನು ಇಟ್ಟುಕೊಂಡಿದ್ದ. ಆ ಮೂಲಕ, ದೂರ ಸಂಪರ್ಕ ಇಲಾಖೆಗೆ ವಂಚಿಸುತ್ತಿದ್ದ. ಭಾರತೀಯ ಸೇನೆಯ ಗುಪ್ತಚರ ಇಲಾಖೆ ಮತ್ತು ಸಿಸಿಬಿ ಜಂಟಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದರು.

ಪ್ರಾಥಮಿಕ ವಿಚಾರಣೆಯಲ್ಲಿ ಆರೋಪಿಗೆ ಎಲ್ಲಿಂದ ಕರೆಗಳು ಬರುತ್ತಿದ್ದವು? ಯಾರಿಗೆ ಹೋಗುತ್ತಿತ್ತು? ಎಂಬ ಮಾಹಿತಿ ಇಲ್ಲ. ಆದರೆ, ಯಾರ ನೆರವಿನಿಂದ ಈ ರೀತಿಯ ಉಪಕರಣಗಳನ್ನು ಅಳವಡಿಸಲಾಗಿದೆ? ಸಿಮ್ ಕಾರ್ಡ್‌ಗಳನ್ನು ಯಾರಿಂದ ಪಡೆಯಲಾಗಿದೆ? ಎಂಬ ಮಾಹಿತಿ ಸಂಗ್ರಹಿಸಬೇಕಿದೆ. ಹೀಗಾಗಿ ಹತ್ತು ದಿನಗಳ ಕಾಲ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

₹70 ಲಕ್ಷ ವಿದ್ಯಾರ್ಥಿ ವೇತನ ವಿತರಣೆ



ಬೆಂಗಳೂರು: ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಸುಮಾರು 250 ವಿದ್ಯಾರ್ಥಿಗಳಿಗೆ ಡ್ಯಾನಿಶ್ ಎಜುಕೇಶನಲ್ ಟ್ರಸ್ಟ್ ವತಿಯಿಂದ ₹70 ಲಕ್ಷ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಟ್ರಸ್ಟ್ ಸಂಸ್ಥಾಪಕಿ ಹುಸ್ನಾ ಝಿಯಾವುಲ್ಲಾ ಶರೀಫ್ ಅವರು ವಿದ್ಯಾರ್ಥಿಗಳಿಗೆ ಚೆಕ್ ಹಸ್ತಾಂತರಿಸಿದರು.

'ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ 61, ಎಂಜಿನಿಯರಿಂಗ್ 47, ಕಾನೂನು 5 ಮತ್ತು ಕೃಷಿ ವ್ಯಾಸಂಗ ಮಾಡುತ್ತಿರುವ 7 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 250 ವಿದ್ಯಾರ್ಥಿಗಳಿಗೆ ಈ ಬಾರಿ ವಿದ್ಯಾರ್ಥಿವೇತನ ನೀಡಲಾಗಿದೆ' ಎಂದು ಹುಸ್ನಾ ಝಿಯಾವುಲ್ಲಾ ಶರೀಫ್ ಅವರು ಮಾಹಿತಿ ನೀಡಿದರು.

'2006ರಿಂದಲೂ ಟ್ರಸ್ಟ್ ವಿದ್ಯಾರ್ಥಿವೇತನ ನೀಡುತ್ತಿದೆ. ಈ ಬಾರಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ ಪ್ರತಿ ವಿದ್ಯಾರ್ಥಿಗೆ ₹35 ಸಾವಿರ ನೀಡಲಾಗಿದೆ. ಅಲ್ಪಸಂಖ್ಯಾತ ಬಡ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಟ್ರಸ್ಟ್‌ನಿಂದ ವಿದ್ಯಾರ್ಥಿವೇತನವನ್ನು ವಿತರಿಸಲಾಗುತ್ತಿದೆ' ಎಂದರು.

ಉದ್ಯಮಿ, ಫಿರೋಝ್ ಎಸ್ಟೇಟ್ ಮಾಲೀಕ ಫಿರೋಝ್ ಅಬ್ದುಲ್ಲಾ, ಟ್ರಸ್ಟ್‌ನ ಹೀನಾ ಅಹ್ಮದ್, ಸಿಗ್ಮಾ ಫೌಂಡೇಶನ್ ಅಧ್ಯಕ್ಷ ಅಮೀನ್ ಮುದಸ್ಸರ್, ಸಾಮಾಜಿಕ ಹೋರಾಟಗಾರ ತನ್ವೀರ್ ಅಹ್ಮದ್ ಇದ್ದರು.

ನಾ.ಭಾ. ಚಂದ್ರಶೇಖರಾಚಾರ್ಯ ಅವರ ಕೃತಿ ಬಿಡುಗಡೆ

'ವಿಶ್ವಕರ್ಮ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕರ್ಮರು ವಿಶ್ವದಾದ್ಯಂತ ದೇವಾಲಯಗಳನ್ನು ನಿರ್ಮಿಸುವ ಮೂಲಕ ಭಾರತೀಯ ಸಂಸ್ಕೃತಿಯನ್ನು ಪ್ರಚುರ ಪಡಿಸಿದ್ದಾರೆ. ಭಾರತ ಇಂದು ವಿಶ್ವಮಾನ್ಯವಾಗಿದೆ ಎಂದು ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಹೇಳಿದರು.

ನಾ.ಭಾ. ಚಂದ್ರಶೇಖರಾಚಾರ್ಯ ಅವರ ಸಮಗ್ರ ಸಾಹಿತ್ಯ ಕುರಿತ 4ನೇ ಸಂಪುಟವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು. 'ವಿಶ್ವಕರ್ಮ ಎಂಬುದು ಒಂದು ಜಾತಿ ಅಲ್ಲ. ಅದು ಕುಶಲಿಗರ ವರ್ಗ. ವಿಶ್ವವನ್ನು ಸೃಜಿಸುವ ಕೆಲಸವನ್ನು ಅವರು ಮಾಡಿದ್ದಾರೆ' ಎಂದು ತಿಳಿಸಿದರು.

ಶಾಕ್ತ ಸಂಸ್ಕೃತಿಯ ಜನಕರೂ ಆದ ವಿಶ್ವಕರ್ಮರು ಕಾರಣಾಂತರಗಳಿಂದ ಸಂಸ್ಕೃತ ಅಧ್ಯಯನದಿಂದ ವಂಚಿತರಾದದ್ದಿದೆ. ಸಂಸ್ಕೃತ ಅಧ್ಯಯನ, ವೇದ-ಉಪನಿಷತ್‌ಗಳ ಅಧ್ಯಯನ ಇಂದು ಯಾವುದೇ ಒಂದು ವರ್ಗದ ಸ್ವತ್ತಾಗಿ ಉಳಿದಿಲ್ಲ. ಚಂದ್ರಶೇಖರಾಚಾರ್ಯರು 100 ವರ್ಷಗಳ ಹಿಂದಿನ ಕಾಲದ ಸಂಸ್ಕೃತ ವೇದ, ಉಪನಿಷತ್‌ಗಳ ಅಧ್ಯಯನ ಮಾಡಿ, ವಿಶ್ವಕರ್ಮರ ಸಾಧನೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ದಾಖಲಿಸಲು ಸಾಧ್ಯವಾಗಿದೆ ಎಂದರು.

ನಾ.ಭಾ. ಚಂದ್ರಶೇಖರಾಚಾರ್ಯರು ಸಂಸ್ಕೃತ ಅಧ್ಯಯನ ಮಾಡಿದ ಫಲವಾಗಿ ಸಂಸ್ಕೃತದಿಂದ ಕನ್ನಡಕ್ಕೆ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಹಾಗೂ ತೆಲುಗಿನಿಂದ ಕನ್ನಡಕ್ಕೆ ವೈದಿಕ ಸಾಹಿತ್ಯವನ್ನು ಅನುವಾದಿಸಲು ಸಾಧ್ಯವಾಗಿದೆ. ಒಬ್ಬ ಸಾಹಿತಿಯನ್ನು ಯಾವುದೇ ಜಾತಿ, ವರ್ಗ ದೇಶಕ್ಕೆ ಸೀಮಿತಗೊಳಿಸಬಾರದು. ನಾ.ಭಾ. ಅವರು ಜಗತ್ತೇ ಮಾನ್ಯ ಮಾಡುವಂತಹ ಲೇಖಕ ಎಂದು ಶ್ಲಾಘಿಸಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಅರೆಮಾದನಹಳ್ಳಿ ವಿಶ್ವ ಬ್ರಾಹ್ಮಣ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಮಾತನಾಡಿದರು.



ನಗರ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ನಾ.ಭಾ. ಚಂದ್ರಶೇಖರಾಚಾರ್ಯ ಅವರ ಸಮಗ್ರ ಸಾಹಿತ್ಯ ನಾ.ಭಾ ಕೃತಿ ಸಂಪುಟ ಭಾಗ 4 ಅನ್ನು ಬಿಡುಗಡೆ ಮಾಡಲಾಯಿತು

'ಅಪಘಾತ ಪರಿಹಾರ: ನಕಲಿ ಬಿಲ್‌ಗಳ ಕುರಿತು ಎಚ್ಚರವಿರಲಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಅಪಘಾತ ಪ್ರಕರಣಗಳಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿದಾಗ, ಅದರೊಂದಿಗೆ ಲಗತ್ತಿಸುವ ಪ್ರತಿಯೊಂದು ವೈದ್ಯಕೀಯ ಬಿಲ್‌ಗಳ ನೈಜತೆಯನ್ನು ನಿಕಶಕ್ಕೆ ಒಡ್ಡಿ ಪರಿಶೀಲಿಸುವುದು ಮೋಟಾರು ಅಪಘಾತ ಪರಿಹಾರ ನ್ಯಾಯಾಧಿಕರಣಗಳ (ಎಂಎಸಿಟಿ) ಕರ್ತವ್ಯ' ಎಂದು ಹೈಕೋರ್ಟ್ ಆದೇಶಿಸಿದೆ.

ಅಪಘಾತ ಪ್ರಕರಣವೊಂದರಲ್ಲಿ ಮಹಿಳೆಯೊಬ್ಬರಿಗೆ ₹ 5.98 ಲಕ್ಷ ಪರಿಹಾರ ಘೋಷಿಸಿದ್ದ ಎಂಎಸಿಟಿ ಆದೇಶವನ್ನು ಪ್ರಶ್ನಿಸಿ, 'ಓರಿಯೆಂಟಲ್ ವಿಮಾ ಕಂಪನಿ' ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಜೆ.ಎಂ. ಖಾಜಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಸಂತ್ರಸ್ತೆಯು ಅಪಘಾತದಿಂದ ಉಂಟಾದ ಗಾಯಕ್ಕೆ ಪಡೆದ ವೈದ್ಯಕೀಯ ಚಿಕಿತ್ಸೆ ಬಿಲ್‌ಗಳಲ್ಲಿ ಕೆಲವು ಕಲರ್ ಜೆರಾಕ್ಸ್ ಇವೆ. ಅಸಲಿ ಬಿಲ್ ನೀಡದಿರುವುದಕ್ಕೆ ಸಮಂಜಸ ಕಾರಣ ನೀಡಿಲ್ಲ. ಆದರೂ, ನ್ಯಾಯಾಧಿಕರಣ ಈ ಪ್ರಕರಣದಲ್ಲಿ ಜೆರಾಕ್ಸ್ ಬಿಲ್‌ಗಳನ್ನೇ ಪರಿಗಣಿಸಿ ವೈದ್ಯಕೀಯ ಚಿಕಿತ್ಸೆಗೆ ₹ 2.26 ಲಕ್ಷ ಪರಿಹಾರ ನಿಗದಿಪಡಿಸಿದೆ. ಪರಿಹಾರ ಪ್ರಮಾಣ ಹೆಚ್ಚಿಸುವ ದುರುದ್ದೇಶದಿಂದಲೇ ಕೆಲವೊಂದು ಬಿಲ್‌ಗಳನ್ನು ಒಂದಕ್ಕಿಂತ ಹೆಚ್ಚು ಬಾರಿ ನೀಡಲಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಬಿಲ್‌ಗಳ ನೈಜತೆಯನ್ನು ಸೂಕ್ಷ್ಮವಾಗಿ ಗಮನಿಸುವಲ್ಲಿ ನ್ಯಾಯಾಧಿಕರಣ ವಿಫಲವಾಗಿದೆ. ಹಾಗಾಗಿ, ಪ್ರತಿಯೊಂದು ವೈದ್ಯಕೀಯ ಬಿಲ್‌ನ ನೈಜತೆ ಪರಿಶೀಲಿಸುವುದು ನ್ಯಾಯಾಧಿಕರಣದ ಕರ್ತವ್ಯ' ಎಂದು ನ್ಯಾಯಪೀಠ, ಸಂತ್ರಸ್ತ ಮಹಿಳೆಗೆ ಘೋಷಿಸಿದ್ದ ₹ 5.98 ಲಕ್ಷ ಮೊತ್ತವನ್ನು ₹ 2,89,540ಕ್ಕೆ ಇಳಿಸಿ ಆದೇಶಿಸಿದೆ.

ಮಳಲಿ ಮಸೀದಿ: ಕಮಿಷನರ್ ನೇಮಕಕ್ಕೆ ಮನವಿ

ಬೆಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯ ಮಳಲಿ ಮಸೀದಿಯಲ್ಲಿ ದೇವಾಲಯ ಮಾದರಿಯ ರಚನೆ ಪತ್ತೆಯಾಗಿರುವ ಬಗ್ಗೆ ಪರಿಶೀಲನೆ ನಡೆಸಲು ಕಮಿಷನರ್ ನೇಮಕ ಮಾಡಬೇಕು' ಎಂದು ಹಿರಿಯ ವಕೀಲ ವಿವೇಕ್ ಸುಬ್ಬಾರೆಡ್ಡಿ ಹೈಕೋರ್ಟ್‌ಗೆ ಮನವಿ ಮಾಡಿದರು.

ಮಂಗಳೂರಿನ ತೆಂಕ ಎಡಪಾಡಿಯ ಧನಂಜಯ್ ಹಾಗೂ ಬಡಗು ಎಡಪಾಡಿಯ ಮನೋಜ್ ಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಿವೇಕ್ ಸುಬ್ಬಾರೆಡ್ಡಿ, 'ಮಸೀದಿಯ ಒಳಗೆ ದೇವಾಲಯವಿತ್ತೋ, ಇಲ್ಲವೋ ಎಂಬ ಬಗ್ಗೆ ಸ್ಥಳ ಸಮೀಕ್ಷೆ ನಡೆಸಿಯೇ ಸಾಕ್ಷ್ಯಾಧಾರ ಸಂಗ್ರಹಿಸಬೇಕಿದೆ. ಇದನ್ನು ಪಕ್ಷಗಾರರು ಅಥವಾ ಬೇರೆಯವರು ಮಾಡಲು ಸಾಧ್ಯವಿಲ್ಲ. ವೈಜ್ಞಾನಿಕವಾಗಿ ತಂತ್ರಜ್ಞಾನದ ಮೂಲಕ ಮಾತ್ರ ಮಾಡಲು ಸಾಧ್ಯ. ಆದ್ದರಿಂದ, ಮಸೀದಿಯ ಪರಿಶೀಲನೆಗೆ ಕಮಿಷನರ್ ನೇಮಿಸುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಪೂರ್ವನಿದರ್ಶನವಾಗಿ ಜ್ಞಾನವಾಪಿ ಮಸೀದಿ ಪ್ರಕರಣವನ್ನು ವಿವರಿಸಿದ ವಿವೇಕ್ ಸುಬ್ಬಾರೆಡ್ಡಿ, 'ಅಲ್ಲಿಯೂ ಕೂಡಾ ಅರ್ಜಿಯ ವಿಚಾರಣಾ ಮಾನ್ಯತೆಯ ಕುರಿತ ಪ್ರಶ್ನೆ ಉದ್ಭವವಾಗಿತ್ತು. ಆದರೆ, ನ್ಯಾಯಾಲಯ; ಮೊದಲು ಸ್ಥಳ ಪರಿಶೀಲನೆ ನಡೆಯಲಿ, ಅರ್ಜಿ ವಿಚಾರಣಾ ಮಾನ್ಯತೆ ಕುರಿತು ಮುಂದೆಯೂ ಪರಿಶೀಲಿಸಬಹುದು ಎಂಬ ಅಭಿಪ್ರಾಯದೊಂದಿಗೆ ಕಮಿಷನರ್ ನೇಮಕ ಮಾಡಿತ್ತು' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಪ್ರಾಚೀನ ಸ್ಮಾರಕಗಳ ಕಾಯ್ದೆ-1958ರ ಪ್ರಕಾರ 100 ವರ್ಷಕ್ಕಿಂತ ಹಳೆಯ ಕಟ್ಟಡಗಳು ಪುರಾತನ ಸ್ಮಾರಕ ಎನಿಸಿಕೊಳ್ಳಲಿದ್ದು, ಆ ಕಟ್ಟಡಗಳಿಗೆ ಸಾರ್ವ ಜನಿಕ ಪೂಜಾಸ್ಥಳ ಕಾಯ್ದೆ ಅನ್ವಯಿಸುವುದಿಲ್ಲ' ಎಂದರು. ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಲಾಗಿದೆ.

ಸಿಐಎಸ್‌ಎಫ್‌ನ 8 ಕಾನ್‌ಸ್ಟೆಬಲ್ ವಜಾ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಸಹೋದ್ಯೋಗಿಯ ಪತ್ನಿಯನ್ನು ಬ್ಲ್ಯಾಕ್‌ಮೇಲ್ ಮಾಡಿ, ಹಲವು ಬಾರಿ ಅತ್ಯಾಚಾರ ಎಸಗಿದ ಆರೋಪದಡಿ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಎಂಟು ಕಾನ್‌ಸ್ಟೆಬಲ್‌ಗಳನ್ನುವಜಾಗೊಳಿಸಿರುವ ಸಕ್ಷಮ ಪ್ರಾಧಿಕಾರದ ಶಿಸ್ತುಪಾಲನಾ ಸಮಿತಿಯ ಆದೇಶವನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಎತ್ತಿ ಹಿಡಿದಿದೆ.

ಈ ಸಂಬಂಧ ವಿಕಾಸ್ ವರ್ಮಾ ಸೇರಿದಂತೆ ಎಂಟು ಜನ ಆರೋಪಿಗಳು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ತಿರಸ್ಕರಿಸಿದ್ದು, 'ಆರೋಪಿಗಳ ಕೃತ್ಯವು ಸಿಐಎಸ್‌ಎಫ್ ಪಡೆಯ ಶಿಸ್ತು ಮತ್ತು ಸದಾಚಾರಕ್ಕೆ ವಿರುದ್ಧವಾಗಿದೆ. ಆದ್ದರಿಂದ, ಅವರನ್ನು ಸೇವೆಯಿಂದ ವಜಾಗೊಳಿಸಿರುವ ಆದೇಶ ಸಮಂಜಸವಾಗಿದೆ. ಅದರಲ್ಲಿ ಮಧ್ಯಪ್ರವೇಶ ಮಾಡುವ ಅಗತ್ಯ ಇಲ್ಲ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಸೇರಿದ ಮೈಸೂರಿನ ನೋಟು ಮುದ್ರಣ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆರೋಪಿಗಳು ಮತ್ತು ಸಂತ್ರಸ್ತೆಯ ಪತಿ ಸಹೋದ್ಯೋಗಿಗಳು. ಎಲ್ಲರೂ ಘಟಕದ ವಸತಿಗೃಹಗಳಲ್ಲಿ ವಾಸ ಮಾಡುತ್ತಿದ್ದು, 2015ರ ಮಾರ್ಚ್ ಮತ್ತು ಜೂನ್ ಮಧ್ಯ ಭಾಗದಲ್ಲಿ ಮುಖ್ಯ ಆರೋಪಿ ವಿಕಾಸ್ ವರ್ಮಾ ಸಂತ್ರಸ್ತೆಯನ್ನು ಪರಿಚಯಿಸಿಕೊಂಡಿದ್ದ.

ಸಂತ್ರಸ್ತೆಯ ಪತಿ ದೂರದ ಊರಿಗೆ ತೆರಳಿದಾಗ ವಿಕಾಸ್ ವರ್ಮಾ ಆಕೆಯೊಂದಿಗೆ ಮೊಬೈಲ್ ಫೋನ್ ಮೂಲಕ ಸಂಪರ್ಕ ಸಾಧಿಸಿ ಸಖ್ಯ ಬೆಳೆಸಿದ್ದ. ಸಖ್ಯ ನಿಕಟವಾದಂತೆ; 'ನನ್ನೊಂದಿಗೆ ಲೈಂಗಿಕ ಸಂಪರ್ಕ ಹೊಂದದೇ ಹೋದರೆ ಫೋನ್‌ನಲ್ಲಿ ಮಾತನಾಡಿರುವ ಆಪ್ತ ವಿಚಾರಗಳನ್ನೆಲ್ಲಾ ನಿನ್ನ ಪತಿಗೆ ತಿಳಿಸುತ್ತೇನೆ' ಎಂದು ಬೆದರಿಕೆ ಹಾಕಿ ಸಮಯ ಸಾಧಿಸಿ ಅತ್ಯಾಚಾರ ಎಸಗಿದ್ದ.

ಈ ವಿಷಯ ಗೊತ್ತುಪಡಿಸಿಕೊಂಡ ವರ್ಮಾನ ಸಹೋದ್ಯೋಗಿಗಳಾದ ಅಂಕುಶ್ ಪಿನಿಯಾ, ಪಿಂಕು ಕುಮಾರ್, ವಿ.ಕೆ ತಿವಾರಿ, ಚಂದನ್ ಕುಮಾರ್, ರಾಹುಲ್ ದಿವಾಕರ್, ಜಿತೇಂದ್ರ ಸಿಂಗ್ ಸಂತ್ರಸ್ತೆಗೆ ಕರೆ ಮಾಡಿ, 'ವಿಕಾಸ್ ವರ್ಮಾ ಜೊತೆಗಿನ ಅಕ್ರಮ ಸಂಬಂಧ ನಮಗೆಲ್ಲಾ ಗೊತ್ತು. ನೀನು ನಮ್ಮೊಂದಿಗೂ ಲೈಂಗಿಕ ಸಂಪರ್ಕ ಬೆಳೆಸದೇ ಹೋದರೆ ಎಲ್ಲಾ ವಿಚಾರವನ್ನೂ ನಿನ್ನ ಪತಿಗೆ ಹೇಳುತ್ತೇವೆ' ಎಂದು ಬೆದರಿಕೆ ಹಾಕಿದ್ದರು.

ಇದರಿಂದ ದಿಕ್ಕು ತೋಚದೆ ಸಂತ್ರಸ್ತೆ ಆರೋಪಿಗಳ ಬೆದರಿಕೆಗೆ ತಲೆಬಾಗಿದ್ದರು. ಈ ವಿಷಯ 2015ರ ಜೂನ್ 28ರಂದು ಸಂತ್ರಸ್ತೆಯ ಪತಿಗೆ ತಿಳಿದು, ಅದೇ ವರ್ಷದ ಜುಲೈ 2ರಂದು ದೂರು ನೀಡಲಾಗಿತ್ತು. ತನಿಖೆ ನಡೆಸಿದ್ದ ಶಿಸ್ತುಪಾಲನಾ ಸಮಿತಿ ಮತ್ತು ಮೇಲ್ಮನವಿ ಪ್ರಾಧಿಕಾರ ಎಂಟು ಕಾನ್‌ಸ್ಟೆಬಲ್‌ಗಳನ್ನು ಕರ್ತವ್ಯದಿಂದ ವಜಾಗೊಳಿಸಿತ್ತು. ಈ ವಜಾ ಆದೇಶವನ್ನು ಏಕಸದಸ್ಯ ನ್ಯಾಯಪೀಠ ಎತ್ತಿಹಿಡಿದಿತ್ತು. ಇದನ್ನು ಪ್ರಶ್ನಿಸಿ ಆರೋಪಿಗಳು ವಿಭಾಗೀಯ ನ್ಯಾಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಶಾಶ್ವತ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಆಗ್ರಹ

ಬೆಂಗಳೂರು: ಕೆ.ಸಿ ವ್ಯಾಲಿ ಮತ್ತು ಎಚ್.ಎನ್.ವ್ಯಾಲಿ ಯೋಜನೆ ಅಡಿಯಲ್ಲಿ ನಗರ ತ್ಯಾಜ್ಯ ನೀರನ್ನು ತೃತೀಯ ಹಂತದ ಸಂಸ್ಕರಣೆಗಾಗಿ ಕೇಂದ್ರೀಯ ಸಾರ್ವಜನಿಕ ಆರೋಗ್ಯ ಮತ್ತು ಪರಿಸರ ಎಂಜಿನಿಯರಿಂಗ್ ಸಂಸ್ಥೆ (ಸಿಪಿಎಚ್ ಇಇಒ) ಕೈಪಿಡಿ 2013ರ ಶಿಫಾರಸುಗಳು, ಮಾನದಂಡಗಳನ್ನು ಅಳವಡಿಸಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಪ್ರಧಾನಿ ನರೇಂದ್ರ ಮೋದಿಯವರಿಗೆ ಶಾಶ್ವತ ನೀರಾವರಿ ಹೋರಾಟ ಸಮಿತಿ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಸಮಿತಿ ಅಧ್ಯಕ್ಷ ಆಂಜನೇಯ ರೆಡ್ಡಿ, ಶಾಶ್ವತ ಬರಪೀಡಿತ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ಶಾಶ್ವತ ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗೆ ಅನುಷ್ಠಾನಗೊಳಿಸಲು ಆಗ್ರಹಿಸಿ, ರಾಜ್ಯಕ್ಕೆ ಆಗಮಿಸಿದ ಮೋದಿಯವರಿಗೆ ಪತ್ರ ಬರೆಯುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ವಿಪತ್ತು ನಿರ್ವಹಣೆಯಲ್ಲಿ ಕೈಗೊಂಡ ಕ್ರಮಗಳಿಗಾಗಿ ಕರ್ನಾಟಕಕ್ಕೆ ಪ್ರಶಸ್ತಿ

'ಡಬ್ಲ್ಯೂಸಿಡಿಎಂ–ಡಿಪಿಆರ್' ಶ್ರೇಷ್ಠತಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ಸಂದರ್ಭಗಳನ್ನು ಎದುರಿಸಲು ತಂತ್ರಜ್ಞಾನ ಅಳವಡಿಸಿಕೊಂಡಿರುವುದು ಸೇರಿದಂತೆ ವಿಪತ್ತು ನಿರ್ವಹಣೆಯಲ್ಲಿ ಕೈಗೊಂಡ ಅತ್ಯುತ್ತಮ ಕ್ರಮಗಳಿಗಾಗಿ ಕರ್ನಾಟಕಕ್ಕೆ 'ಡಬ್ಲ್ಯೂಸಿಡಿಎಂ–ಡಿಪಿಆರ್' ಶ್ರೇಷ್ಠತಾ ಪ್ರಶಸ್ತಿ ಲಭಿಸಿದೆ.

ತೀರ್ಪುಗಾರರ ಸಮಿತಿಯು ರಾಜ್ಯ ಸರ್ಕಾರದ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಆಯ್ಕೆ ಮಾಡಿದೆ. ಮುನ್ನೆಚ್ಚರಿಕೆ ನೀಡುವ ಕೇಂದ್ರೀಕೃತ ವ್ಯವಸ್ಥೆಯನ್ನು (ಡಿಇಡಬ್ಲ್ಯೂಎಸ್) ರಾಜ್ಯದ 104 ಗ್ರಾಮ ಪಂಚಾಯಿತಿಗಳಲ್ಲಿ ಅಳವಡಿಸಲಾಗಿದೆ. ಇದರಿಂದ, ತ್ವರಿತ ಗತಿಯಲ್ಲಿ ಮತ್ತು ಪರಿಣಾಮಕಾರಿಯಾಗಿ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡಬಹುದಾಗಿದೆ. ಇಂತಹ ತಂತ್ರಜ್ಞಾನ ಕ್ರಮಗಳನ್ನು ಗುರುತಿಸಿ ವಿಪತ್ತು ನಿರ್ವಹಣೆ ಕುರಿತಾದ ವಿಶ್ವ ಕಾಂಗ್ರೆಸ್ (ಡಬ್ಲ್ಯೂಸಿಡಿಎಂ) ಈ ಪ್ರಶಸ್ತಿ ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದೆಹಲಿಯಲ್ಲಿ ಬುಧವಾರ ನಡೆದ ವರ್ಣರಂಜಿತ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರದ (ಕೆಎಸ್‌ಡಿಎಂಎ) ಆಯುಕ್ತ ಡಾ. ಮನೋಜ್ ರಾಜನ್ ಅವರು ಕಂದಾಯ ಇಲಾಖೆ ಪರವಾಗಿ ಈ ಅಂತರರಾಷ್ಟ್ರೀಯ ಪ್ರತಿಷ್ಠಿತ ಪ್ರಶಸ್ತಿಯನ್ನು ಕೇಂದ್ರ ಪ್ರವಾಸೋದ್ಯಮ ಸಚಿವ ಜಿ. ಕಿಶನ್ ರೆಡ್ಡಿ ಅವರಿಂದ ಸ್ವೀಕರಿಸಿದರು.



ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವ ಜಿ. ಕಿಶನ್ ರೆಡ್ಡಿ ಅವರು, ಕೆಎಸ್‌ಡಿಎಂಎ ಆಯುಕ್ತ ಡಾ. ಮನೋಜ್ ರಾಜನ್ ಅವರಿಗೆ 'ಡಬ್ಲ್ಯೂಸಿಡಿಎಂ–ಡಿಪಿಆರ್' ಶ್ರೇಷ್ಠತಾ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಅವ್ಯವಹಾರದಲ್ಲಿ ಪಾತ್ರವಿಲ್ಲ: ಡಾ.ಕೆ.ಬಿ.ಪ್ರಕಾಶ್ ಸ್ಪಷ್ಟನೆ

‘ನಂಬಿಸಿ, ಬೆನ್ನಿಗೆ ಚೂರಿ ಹಾಕಿದ್ರು’

ಪ್ರಜಾವಾಣಿ ವಾರ್ತೆ

ಹಾವೇರಿ: ‘ಕಾಲೇಜಿನಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ಯಾರೂ ನನಗೆ ಸುಳಿವು ನೀಡಲಿಲ್ಲ. ನನ್ನ ಕಚೇರಿಯ ಸಿಬ್ಬಂದಿಯನ್ನು ನಾನು ಸಂಪೂರ್ಣ ನಂಬಿದ್ದೆ. ನನಗೆ ನಂಬಿಕೆದ್ರೋಹ ಮಾಡಿ, ಬೆನ್ನಿಗೆ ಚೂರಿ ಹಾಕಿದರು’ ಹಾವೇರಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಅವ್ಯವಹಾರ ಪ್ರಕರಣದ ಆರೋಪಿ, ನಿವೃತ್ತ ಪ್ರಾಂಶುಪಾಲ ಡಾ.ಕೆ.ಬಿ.ಪ್ರಕಾಶ್ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ‘2010 ರಿಂದ 2022ರವರೆಗೆ 12 ವರ್ಷ ಪ್ರಾಂಶುಪಾಲನಾಗಿ ಹಾವೇರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಸಿಬ್ಬಂದಿಯಲ್ಲಿ ಇಬ್ಬರು–ಮೂವರು ಕಾಲೇಜು ಹಣವನ್ನು ದೋಚಿ, ಕಟ್ಟಿ ಬೆಳೆಸಿದ್ದ ಸೌಧವೇ ಕುಸಿಯುವಂತೆ ಮಾಡಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಈ ಬಗ್ಗೆ ವರದಿಗಳು ಪ್ರಕಟವಾಗಿದ್ದು, ₹3 ಕೋಟಿ ಅಲ್ಲ, ಲೆಕ್ಕಪರಿಶೋಧನೆ ಮಾಡಿದರೆ ಇನ್ನೂ ಹೆಚ್ಚಿನ ಹಣ ಲೂಟಿಯಾಗಿರುವುದು ಗೊತ್ತಾಗುತ್ತದೆ’ ಎಂದು ಹೇಳಿದರು.

‘ಕಾಲೇಜಿನ ಚೆಕ್‌ಗಳು ಫೋರ್ಜರಿಯಾಗಿವೆ. ನಾನು ₹2 ಸಾವಿರಕ್ಕೆ ಚೆಕ್ ಬರೆದ ನಂತರ ಅದಕ್ಕೆ ಎರಡು ಸೊನ್ನೆ ಸೇರಿಸಿ ₹2 ಲಕ್ಷ ಮಾಡಿಕೊಂಡು ಹಣವನ್ನು ಲೂಟಿ ಮಾಡಿದ್ದಾರೆ.



ಕೆ.ಬಿ.ಪ್ರಕಾಶ್

ಕಳೆದೆರಡು ವರ್ಷಗಳಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ನಾನು ಕಾಲೇಜಿನ ಮುಖ್ಯಸ್ಥನಾದ ಕಾರಣ, ನನ್ನನ್ನು ಅವ್ಯವಹಾರ ಪ್ರಕರಣದಲ್ಲಿ ಸಹಜವಾಗಿ ಭಾಗೀದಾರನನ್ನಾಗಿ ಮಾಡಿದ್ದಾರೆ. ಒಂದೇ ಒಂದು ಪೈಸೆ ನಾನು ತಿಂದಿರುವುದು ಸಾಬೀತಾದರೆ, ಯಾವುದೇ ರೀತಿಯ ಶಿಕ್ಷೆಗೆ ಸಿದ್ಧ’ ಎಂದು ಗದ್ಗದಿತರಾದರು.

‘ಸ್ಕಾಲರ್‌ಶಿಪ್ ಮತ್ತು ಶೈಕ್ಷಣಿಕ ಸಾಲದಿಂದ ವಂಚಿತರಾದ ವಿದ್ಯಾರ್ಥಿಗಳು ನನ್ನ ಬಳಿ ದೂರು ನೀಡಿದ್ದರು. ಆಗ ಸಮಸ್ಯೆ ಬಗೆಹರಿಸಲು ಎಸ್‌ಡಿಎ ರವೀಂದ್ರಕುಮಾರ್‌ಗೆ ಹೇಳಿದ್ದೆ. ಕಾಲ ದೂಡುತ್ತಾ ಬಂದ ಅವರು ಫೆಬ್ರುವರಿಯಿಂದ ಕಾಲೇಜಿಗೆ ಅನಧಿಕೃತ ಗೈರು ಹಾಜರಾಗಿದ್ದಾರೆ. ನಾನೇ ಜೇಬಿನಿಂದ ₹1 ಲಕ್ಷ ಹಣವನ್ನು ವಿದ್ಯಾರ್ಥಿಗಳಿಗೆ ನೀಡಿದ್ದೇನೆ. ಕಾಲೇಜು ಅಭಿವೃದ್ಧಿ ಮೀಸಲಾಗಿರುವ ಸಿಸಿ–ಟೆಕ್ ಅಕೌಂಟ್‌ನಿಂದ ₹2.5 ಲಕ್ಷವನ್ನು ಕಾನೂನು ಬಾಹಿರವಾಗಿ ತೆಗೆದು, ಬಡ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್‌ಗೆ ನೀಡಿದ್ದೇನೆ’ ಎಂದು ಪ್ರಕಾಶ್ ತಿಳಿಸಿದರು.

‘33 ವರ್ಷಗಳ ಸರ್ವಿಸ್‌ನಲ್ಲಿ ನನ್ನ ಒಟ್ಟು ಗಳಿಕೆ ₹80 ಲಕ್ಷ. ನನ್ನ ಮನೆ, ಆಸ್ತಿ, ಬ್ಯಾಂಕ್ ಬ್ಯಾಲೆನ್ಸ್ ಎಲ್ಲವನ್ನು ಕೊಟ್ಟರೂ ಕಾಲೇಜಿನಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ಸರಿದೂಗಿಸಲು ಸಾಧ್ಯವಿಲ್ಲ. ಪ್ರಮಾಣ ಮಾಡಿ ಹೇಳುತ್ತೇನೆ ನಾನು ಭ್ರಷ್ಟಾಚಾರ ಮಾಡಿಲ್ಲ’ ಎಂದು ಅವರು ಸಮರ್ಥಿಸಿಕೊಂಡರು.

ಮುಖ್ಯಾಂಶಗಳು

- 12 ವರ್ಷ ಪ್ರಾಂಶುಪಾಲನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.
- ಇಬ್ಬರು–ಮೂವರು ಕಾಲೇಜು ಹಣವನ್ನು ದೋಚಿದರು
- ಲೆಕ್ಕ ಪರಿಶೋಧನೆ ಮಾಡಿದರೆ ಹೆಚ್ಚಿನ ಹಣ ಲೂಟಿ ಪತ್ತೆ

ಸಚಿವ ಖೂಬಾಗೆ ಕರೆ: ಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ‘ಕೇಂದ್ರ ಸಚಿವ ಭಗವಂತ ಖೂಬಾ ಅವರಿಗೆ ದೂರವಾಣಿ ಕರೆ ಮಾಡಿ ವಾಗ್ವಾದ ನಡೆಸಿದ ಆರೋಪದ ಮೇಲೆ ತಾಲ್ಲೂಕಿನ ಜೀರ್ಗಾ (ಕೆ) ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕ ಕುಶಾಲ ಪಾಟೀಲ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ’ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎಸ್.ನಗನೂರ ತಿಳಿಸಿದ್ದಾರೆ.

‘ಸಚಿವರ ಜೊತೆ ಅನುಚಿತವಾಗಿ ವರ್ತಿಸಿದ್ದು ಅಲ್ಲದೇ, ಅವರೊಂದಿಗಿನ ಸಂಭಾಷಣೆಯನ್ನು ರೆಕಾರ್ಡ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಕಾರಣ ಶಿಕ್ಷಕನನ್ನು ಸೇವೆಯಿಂದ ಅಮಾನತು ಮಾಡಲಾಗಿದೆ’ ಎಂದು ಅವರು ಹೇಳಿದ್ದಾರೆ.

ಹೆಡಗಾಪುರ ಗ್ರಾಮದ ಕುಶಾಲ ಪಾಟೀಲ, ಭಗವಂತ ಖೂಬಾ ಅವರಿಗೆ ಕರೆ ಮಾಡಿ, ‘ಊರಿನಲ್ಲಿ ಗೊಬ್ಬರ ಸಿಗುತ್ತಿಲ್ಲ. ರೈತರು ತೊಂದರೆಯಲ್ಲಿದ್ದಾರೆ. ಇದರಿಂದ ನಿಮ್ಮ ಹೆಸರು ಕೆಡುತ್ತಿದೆ. ಹೀಗಾದರೆ ಮುಂದಿನ ಚುನಾವಣೆಯಲ್ಲಿ ನಿಮಗೆ ಸಮಸ್ಯೆಯಾಗಲಿದೆ’ ಎಂದು ಹೇಳಿದ್ದರು. ಇದಕ್ಕೆ ಸಚಿವರು ಖಾರವಾಗಿ ಪ್ರತಿಕ್ರಿಯಿಸಿ, ‘ನಾನು ಕೇಂದ್ರ ಸಚಿವ, ಮನೆ ಮನೆಗೆ ಗೊಬ್ಬರ ಪೂರೈಸಲು ಆಗುವುದೇ’ ಎಂದು ಪ್ರಶ್ನಿಸಿದ್ದರು.

ನಂತರ ರೈತ ಸಂಘಟನೆಗಳ ಪದಾಧಿಕಾರಿಗಳು ಕೇಂದ್ರ ಸಚಿವ ಭಗವಂತ ಖೂಬಾ ವಿರುದ್ಧ ಪ್ರತಿಭಟನೆ ನಡೆಸಿದ್ದರು.

ಮೆಣಸಗಿ: ಪರಿಶಿಷ್ಟ ವ್ಯಕ್ತಿಗಳಿಗೆ ಸಗಣಿ ತಿನ್ನಿಸಲು ಪ್ರಯತ್ನ

ರೋಣ(ಗದಗ ಜಿಲ್ಲೆ): ತಾಲ್ಲೂಕಿನ ಮೆಣಸಗಿ ಗ್ರಾಮದಲ್ಲಿ ಮೂರು ಮಂದಿ ಪರಿಶಿಷ್ಟ ಜಾತಿ ವ್ಯಕ್ತಿಗಳ ವಿರುದ್ಧ ಏಳು ಮಂದಿ ಅಮಾನವೀಯವಾಗಿ ನಡೆದುಕೊಂಡ ಘಟನೆ ಕೆಲ ದಿನಗಳ ಹಿಂದೆ ನಡೆದಿದೆ.

ಗ್ರಾಮದ ಗುತ್ತಿಗೆದಾರ ಪುಂಡಲೀಕಪ್ಪ ಬಸಪ್ಪ ಮಾದರ ಅವರು ಸ್ನೇಹಿತರಾದ ಹನಮಂತ ಹಾಗೂ ಗಣೇಶ ದೇವರಮನಿ ಅವರ ಜತೆಗೆ ಬಸ್ ನಿಲ್ದಾಣದಲ್ಲಿ ನಿಂತಿದ್ದರು. ಆಗ ಏಕಾಏಕಿ ಬಂದ ಎಂಟು ಜನರ ಗುಂಪೊಂದು ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದೆ.

ಈ ವೇಳೆ ರಾಜು ಬಾದಾಮಿ ಎಂಬಾತ ಸಗಣಿ ಹಿಡಿದುಕೊಂಡು ಬಂದು ಪುಂಡಲೀಕಪ್ಪ ಅವರ ಬಾಯಿಗೆ ಇಡಲು ಪ್ರಯತ್ನಿಸಿದ್ದಾನೆ. ಅಲ್ಲದೇ, ಗುಂಪಿನಲ್ಲಿದ್ದ ಇತರರು ಮೂವರ ಅಂಗಿ ಬಿಚ್ಚಿಸಿ ಅವಮಾನ ಮಾಡಿದ್ದಾರೆ ಎನ್ನಲಾಗಿದೆ. ಜತೆಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ರೋಣ ಪೊಲೀಸ್ ಠಾಣೆಯಲ್ಲಿ ಎಂಟು ಮಂದಿ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾನಹಾನಿ ಭೀತಿ: ಕೋರ್ಟ್ ಮೊರೆಗೆ ಮುರುಘಾ ಶರಣರು

ಬೆಂಗಳೂರು: ಚಿತ್ರದುರ್ಗ ಮುರುಘಾ ಮಠಕ್ಕೆ ಸಂಬಂಧಿಸಿದ ವರದಿಗಳು ಅಥವಾ ಲೇಖನಗಳನ್ನು ಪ್ರಕಟಿಸದಂತೆ ಅಥವಾ ಪ್ರಸಾರ ಮಾಡದಂತೆ ರಾಜ್ಯದ ಪ್ರಮುಖ ಪತ್ರಿಕೆಗಳು ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ವಿರುದ್ಧ ಮುರುಘಾ ಶರಣರು ತಡೆ ಆದೇಶ ಕೋರಿ ಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಕುರಿತಂತೆ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ 64ರಲ್ಲಿ ಅಸಲು ದಾವೆ (ಒ.ಎಸ್. 2644/2022) ದಾಖಲಿಸಲಾಗಿದ್ದು ಒಟ್ಟು 43 ಮಾಧ್ಯಮ ಸಂಸ್ಥೆಗಳನ್ನು ಪ್ರತಿವಾದಿಗಳನ್ನು ಹೆಸರಿಸಲಾಗಿದೆ.

‘ಕೆಲವು ಪ್ರತಿಸ್ಪರ್ಧಿಗಳು ಮಠದ ಹೆಸರಿಗೆ ಮತ್ತು ನನಗೆ ಕಳಂಕ ತರಲು ಪ್ರಯತ್ನಿಸುತ್ತಿರುವ ಕಾರಣ ಮಠ ಮತ್ತು ನನಗೆ ಸಂಬಂಧಿಸಿದ ಯಾವುದೇ ವರದಿ ಅಥವಾ ಚರ್ಚೆಗಳನ್ನು ಪ್ರಕಟಿಸದಂತೆ ತಡೆ ನೀಡಬೇಕು’ ಎಂದು ಶರಣರು ದಾವೆಯಲ್ಲಿ ಕೋರಿದ್ದಾರೆ.

ಜುಲೈ 16ರಿಂದ ಪೌತಿ ಖಾತೆ ಅಭಿಯಾನ: ಅಶೋಕ

ಬೆಂಗಳೂರು: ಮೃತಪಟ್ಟಿರುವ ರೈತರ ಹೆಸರಿನಲ್ಲಿರುವ ಭೂ ದಾಖಲೆಗಳನ್ನು ಅವರ ವಾರಸುದಾರರಿಗೆ ತ್ವರಿತವಾಗಿ ವರ್ಗಾಯಿಸಲು ಜುಲೈ 16ರಿಂದ ರಾಜ್ಯದಾದ್ಯಂತ ಪೌತಿ ಖಾತೆ ಅಭಿಯಾನ ನಡೆಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ರಾಜ್ಯದಲ್ಲಿ ಪೌತಿ ಖಾತೆಗಳ ವರ್ಗಾವಣೆಗೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ದೊಡ್ಡದಾಗಿದೆ. ಲಕ್ಷಾಂತರ ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಅವುಗಳನ್ನು ಕಾಲಮಿತಿಯಲ್ಲಿ ವಿಲೇವಾರಿ ಮಾಡಲು ಅಭಿಯಾನ ಹಮ್ಮಿಕೊಳ್ಳಲಾಗುವುದು’ ಎಂದರು.

ಮೃತ ವ್ಯಕ್ತಿಗಳ ಹೆಸರಿನಲ್ಲಿರುವ ಜಮೀನಿನ ದಾಖಲೆಗಳು ಅವರ ವಾರಸುದಾರರಿಗೆ ವರ್ಗಾವಣೆ ಆಗದೇ ಇರುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಸೌಲಭ್ಯಗಳನ್ನು ಪಡೆಯಲು ಈ ಕುಟುಂಬಗಳಿಗೆ ಸಾಧ್ಯವಾಗುತ್ತಿಲ್ಲ. ಕೃಷಿ ಸಂಬಂಧಿ ಸಾಲಗಳನ್ನು ಪಡೆಯುವುದಕ್ಕೂ ಆಗುತ್ತಿಲ್ಲ. ಈ ಎಲ್ಲ ಸಮಸ್ಯೆಗಳಿಗೂ ಅಭಿಯಾನದ ಮೂಲಕ ಪರಿಹಾರ ಒದಗಿಸಲಾಗುವುದು ಎಂದು ಹೇಳಿದರು.

ಜುಲೈ 16ರಂದು ಚಿಕ್ಕಬಳ್ಳಾಪುರದ ಮಂಚೇನಹಳ್ಳಿಯಲ್ಲಿ ನಡೆಸುವ ಗ್ರಾಮ ವಾಸ್ತವ್ಯದಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ಪೌತಿ ಖಾತೆ ವರ್ಗಾವಣೆ ಆದೇಶ ಹೊರಡಿಸುವ ಅಧಿಕಾರವನ್ನು ಉಪ ವಿಭಾಗಾಧಿಕಾರಿಗಳಿಗೆ ನೀಡಲಾಗುವುದು. ಮೃತರ ಹೆಸರಿನಲ್ಲಿರುವ ಪೌತಿ ಖಾತೆಗಳನ್ನು ವರ್ಗಾಯಿಸುವಾಗ ಅವರ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳ ವಿವರವನ್ನು ಸ್ಥಳೀಯರಿಂದ ಖಚಿತಪಡಿಸಿಕೊಳ್ಳಲಾಗುವುದು ಎಂದು ವಿವರಿಸಿದರು.

ಎಂಜಿನಿಯರಿಂಗ್ ಶುಲ್ಕ ಶೇ 10ರಷ್ಟು ಹೆಚ್ಚಳ

ಒಂದನೇ ಪುಟದಿಂದ...

ಶೇ 30ರಷ್ಟು ಸೀಟುಗಳನ್ನು ಹೆಚ್ಚಿನ ದರದ ಶುಲ್ಕದಲ್ಲಿ ಮತ್ತು ಶೇ 25ರಷ್ಟು ಸೀಟುಗಳನ್ನು ಅನಿವಾಸಿ ಭಾರತೀಯ ಅಥವಾ ಆಡಳಿತ ಮಂಡಳಿ ಕೋಟಾದಡಿ ನೀಡಲು ಅವಕಾಶವಿದೆ. ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಶೇ 40ರಷ್ಟು ಸೀಟುಗಳನ್ನು ಕಡಿಮೆ ದರದ ಶುಲ್ಕದಲ್ಲಿ ಹಾಗೂ ತಲಾ ಶೇ 30ರಷ್ಟು ಸೀಟುಗಳನ್ನು ಹೆಚ್ಚಿನದರ ದರದ ಶುಲ್ಕದಲ್ಲಿ ಮತ್ತು ಅನಿವಾಸಿ ಭಾರತೀಯ ಹಾಗೂ ಆಡಳಿತ ಮಂಡಳಿ ಕೋಟಾದಡಿ ನೀಡಬಹುದು ಎಂದು ಹೇಳಿದರು.

ಪರಿಷ್ಕೃತ ದರದ ಶುಲ್ಕ ಪಡೆದು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಕುರಿತು ಎಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳು ಒಂದು ವಾರದೊಳಗೆ ಒಪ್ಪಂದ ಮಾಡಿಕೊಳ್ಳಬೇಕು. ಕಳೆದ ಶೈಕ್ಷಣಿಕ ವರ್ಷದಲ್ಲಿ 30,000ಕ್ಕೂ ಹೆಚ್ಚು ಎಂಜಿನಿಯರಿಂಗ್ ಸೀಟುಗಳು ಭರ್ತಿಯಾಗದೇ ಉಳಿದಿದ್ದವು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್, ಕುಪೆಕ ಅಧ್ಯಕ್ಷ ಮಂಜುನಾಥ ಭಂಡಾರಿ ಮತ್ತು ಪದಾಧಿಕಾರಿಗಳು ಸಭೆಯಲ್ಲಿದ್ದರು.



ಆರ್‌ಆರ್‌ಬಿ ಮುಖ್ಯ ಪರೀಕ್ಷೆ ಮಾರ್ಗದರ್ಶಿ

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ (ಆರ್‌ಆರ್‌ಬಿ) ನೇಮಕಾತಿಗಾಗಿ ನಡೆಯುವ ಮುಖ್ಯಪರೀಕ್ಷೆಯ ವಿಷಯಗಳು, ಅಂಕಗಳು ಮತ್ತು ಪಠ್ಯಕ್ರಮ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.


ಕೆ.ಎಚ್.ಮಂಜುನಾಥ್

ಗ್ರಾಮೀಣ ಬ್ಯಾಂಕ್‌ನ ಆಫೀಸರ್ ಸ್ಕೇಲ್1 ಹುದ್ದೆಗಾಗಿ ನಡೆಸುವ ಮುಖ್ಯ ಪರೀಕ್ಷೆಯಲ್ಲಿ 200 ಅಂಕಗಳಿಗಾಗಿ 200 ಪ್ರಶ್ನೆಗಳು ಇರುತ್ತವೆ. ರೀಸನಿಂಗ್ ವಿಷಯದಲ್ಲಿ 50 ಅಂಕಗಳಿಗಾಗಿ 40 ಪ್ರಶ್ನೆಗಳು, ನ್ಯೂಮರಿಕಲ್ ಎಬಿಲಿಟಿ – 40 ಅಂಕಗಳಿಗೆ 40 ಪ್ರಶ್ನೆಗಳು, ಜನರಲ್ ಅವೇರ್‌ನೆಸ್‌ನ 40 ಅಂಕಗಳ 40 ಪ್ರಶ್ನೆಗಳು, ಇಂಗ್ಲಿಷ್/ಹಿಂದಿ ಭಾಷೆ ವಿಷಯದಲ್ಲಿ 40 ಅಂಕಗಳ 40 ಪ್ರಶ್ನೆಗಳಿರುತ್ತವೆ. ಜೊತೆಗೆ, ಕಂಪ್ಯೂಟರ್ ಜ್ಞಾನ ಪತ್ರಿಕೆಯ 20 ಅಂಕಗಳ 40 ಪ್ರಶ್ನೆಗಳಿರುತ್ತವೆ.

ಆಫಿಸರ್ ಸ್ಕೇಲ್ 2 ಮತ್ತು ಸ್ಕೇಲ್ 3 ಹುದ್ದೆಗಳಿಗಾಗಿ ನಡೆಯುವ ಮುಖ್ಯ ಪರೀಕ್ಷೆಯಲ್ಲಿ 200 ಅಂಕಗಳಿಗಾಗಿ 200 ಪ್ರಶ್ನೆಗಳು ಇರುತ್ತವೆ. ಸ್ಕೇಲ್ 1ರ ಪಠ್ಯಕ್ರಮದಲ್ಲಿರುವ ರೀಸನಿಂಗ್, ಭಾಷಾ ಪತ್ರಿಕೆ ಹಾಗೂ ಕಂಪ್ಯೂಟರ್ ಜ್ಞಾನದ ಪತ್ರಿಕೆಗಳ ಜೊತೆಗೆ, ಗುಣಾತ್ಮಕ ಪರಿಮಾಣ ಮತ್ತು ಮಾಹಿತಿ ವ್ಯಾಖ್ಯಾನ(Quantitative Aptitude and Data Interpretation) ವಿಷಯದ 50 ಅಂಕಗಳ 40 ಪ್ರಶ್ನೆಗಳು, ಹಣಕಾಸು ಅರಿವಿಗೆ ಸಂಬಂಧಿಸಿದಂತೆ 40 ಅಂಕಗಳ 40 ಪ್ರಶ್ನೆಗಳಿರುತ್ತವೆ. ಹಾಗೆಯೇ ನ್ಯೂಮರಿಕಲ್ ಎಬಿಲಿಟಿಯಲ್ಲಿ ಡೇಟಾ ಇಂಟರ್‌ಪ್ರಿಟೇಷನ್‌ಗೆ ಹೆಚ್ಚು ಒತ್ತು ನೀಡಲಾಗುತ್ತದೆ.

ಆಫಿಸರ್ ಸ್ಕೇಲ್ 2 ಸ್ಪೆಷಲಿಸ್ಟ್ ಕೇಡರ್ ಮುಖ್ಯ ಪರೀಕ್ಷೆಯಲ್ಲಿ 240 ಅಂಕಗಳಿಗಾಗಿ 200 ಪ್ರಶ್ನೆಗಳು ಇರುತ್ತವೆ. ಸ್ಕೇಲ್2 ಮತ್ತು 3ನಲ್ಲಿರುವ ವಿಷಯಗಳೇ ಇರುತ್ತವೆ. ಅದರ ಜೊತೆಗೆ ವೃತ್ತಿಪರ ಜ್ಞಾನ(ಪ್ರೊಫೆಷನಲ್ ನಾಲ್ಡೆಡ್ಜ್) ಎಂಬ ವಿಷಯದ 40 ಅಂಕಗಳ 40 ಪ್ರಶ್ನೆಗಳನ್ನು ಸೇರಿಸಿರುತ್ತಾರೆ.

ಪಠ್ಯ ಕ್ರಮ



ರೀಸನಿಂಗ್ ಮತ್ತು ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ (ನ್ಯೂಮರಿಕಲ್ ಎಬಿಲಿಟಿ) ಪಠ್ಯಕ್ರಮದಲ್ಲಿ ಪೂರ್ವಭಾವಿ ಪರೀಕ್ಷೆಯ ಪಠ್ಯಕ್ರಮವೇ ಇರುತ್ತದೆ. ಕಳೆದ ವಾರದ ಸಂಚಿಕೆಯಲ್ಲಿ ಈ ಕುರಿತು ಮಾಹಿತಿ ನೀಡಲಾಗಿದೆ. ಉಳಿದಂತೆ ಭಾಷೆ, ಕಂಪ್ಯೂಟರ್ ಜ್ಞಾನ, ಜನರಲ್ ಅವೇರ್‌ನೆಸ್, ಫೈನಾನ್ಸ್ ಅವೇರ್‌ನೆಸ್ ವಿಷಯಗಳ ಪ್ರಶ್ನೆಗಳಿರುತ್ತವೆ.

ಇಂಗ್ಲಿಷ್ ಭಾಷೆ

ಕಾಂಪ್ರೆಹೆನ್ಷನ್ ಇಂಗ್ಲಿಷ್, ವಾಖ್ಯಗಳನ್ನು ಸರಿಯಾಗಿ ಜೋಡಿಸುವುದು (Rearrangement of Sentences), ತಪ್ಪುಗಳ ಪತ್ತೆ(Error Detection), ಪದಪುಂಜ (Idioms), ವಿರುದ್ಧಾರ್ಥಕ ಪದಗಳು (Antonyms), ಬಿಟ್ಟ ಸ್ಥಳ ತುಂಬಿ (Fill in the blanks), ಅದಲು ಬದಲು ಪದಗಳು (Jumbled Words), ನುಡಿಗಟ್ಟು (Phrase Substitution), ಸಮಾನಾರ್ಥಕ ಪದಗಳು (Synonyms)

ಕಂಪ್ಯೂಟರ್ ಜ್ಞಾನ

ಕಂಪ್ಯೂಟರ್ ಬೇಸಿಕ್, ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಮೂಲ ಅಂಶಗಳು, ಕಂಪ್ಯೂಟರ್ ಸಂಕ್ಷೇಪಣೆಗಳು(Computer Abbrevations), ನೆಟ್‌ವರ್ಕ್, ಎಂಎಸ್ ಆಫೀಸ್, ಡೇಟಾ ಬೇಸ್, ಕಂಪ್ಯೂಟರ್ ಇತಿಹಾಸ, ಕಂಪ್ಯೂಟರ್ ಲ್ಯಾಂಗ್ವೇಜ್, ಇನ್‌ಪುಟ್ ಮತ್ತು ಔಟ್‌ಪುಟ್ ಡಿವೈಸ್

ಜನರಲ್ ಅವೇರ್‌ನೆಸ್

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳು(India and International Current Affairs) ಬ್ಯಾಂಕಿಂಗ್ ಕುರಿತು ಅರಿವು (Banking Awareness), ದೇಶಗಳು ಮತ್ತು ಕರೆನ್ಸಿಗಳು(Countries and Currencies), ದೇಶಗಳು ಮತ್ತು ನಾಣ್ಯಗಳು(Countries and Coins), ರಾಷ್ಟ್ರೀಯ ಉದ್ಯಾನಗಳು ಮತ್ತು ವನ್ಯಜೀವಿಧಾಮ (National Parks and Wildlife Sanctuaries), ಬ್ಯಾಂಕಿಂಗ್ ನೀತಿ ನಿಯಮಗಳು ಮತ್ತು ಸಂಕ್ಷೇಪಣೆಗಳು(Banking Terms and Abbreviations), ಬ್ಯಾಂಕಿಂಗ್ ಇತಿಹಾಸ, ಭಾರತೀಯ ರಿಸರ್ವ್ ಬ್ಯಾಂಕ್, ಕ್ರೀಡೆ, ಹಣಕಾಸು, ಪುಸ್ತಕ ಮತ್ತು ಲೇಖಕರು, ಕೃಷಿ, ಆರ್ಥಿಕ ನೀತಿಗಳು, ಆಯವ್ಯಯ, ಸರ್ಕಾರದ ಯೋಜನೆಗಳು, ಸರ್ಕಾದ ನೀತಿಗಳು, ಸರ್ಕಾರಿ ನೀತಿಗಳು (ಉದಾ:- ಶಿಕ್ಷಣ ನೀತಿ, ಕೃಷಿ ನೀತಿ, ಯುವ ನೀತಿ ಇತ್ಯಾದಿ)

ಫೈನಾನ್ಸ್ ಅವೇರ್‌ನೆಸ್

ವಿಶ್ವ ಹಣಕಾಸು ನೀತಿಯ ಕುರಿತು ಇತ್ತೀಚೆಗೆ ಸುದ್ದಿಯಲ್ಲಿ ಪ್ರಚಲಿತ ಘಟನೆಗಳು ಹಾಗೂ ಹಣಕಾಸು ನೀತಿಗಳು, ಆಯ-ವ್ಯಯ ಮತ್ತು ಆರ್ಥಿಕ ಸಮೀಕ್ಷೆ(Budget and Economic Survey), ಬ್ಯಾಂಕಿಂಗ್ ಮತ್ತು ಭಾರತದಲ್ಲಿ ಬ್ಯಾಂಕಿಂಗ್ ಸುಧಾರಣೆ ಕುರಿತ ಅವಲೋಕನ (Overview of Banking and Banking Reforms in India), ಬ್ಯಾಂಕ್ ಅಕೌಂಟ್ ಮತ್ತು ವಿಶೇಷ ವ್ಯಕ್ತಿಗಳು(Bank Accounts and Special Individuals), ಸಾಂಸ್ಥಿಕ ಠೇವಣಿ ಮತ್ತು ಸಾಲ (Organizations Deposits Credit), ಅನುತ್ಪಾದಕ ಆಸ್ತಿ(Non Performing Assets), ರಿಸ್ಕ್ ಮ್ಯಾನೇಜ್‌ಮೆಂಟ್.

(ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾಕೇಂದ್ರ, ಬೆಂಗಳೂರು)

ಡೇಟಾ ಇಂಟರ್‌ಪ್ರಿಟೇಶನ್

ಆರ್.ಬಿ. ಗುರುಬಸವರಾಜ

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ(ಆರ್‌ಆರ್‌ಬಿ) ವಿವಿಧ ಹುದ್ದೆಗಳಿಗಾಗಿ ನಡೆಯುವ ಪರೀಕ್ಷೆಗಳಲ್ಲಿರುವ ಪಠ್ಯಕ್ರಮಗಳಲ್ಲಿ ಡೇಟಾ ಇಂಟರ್ ಪ್ರಿಟೇಷನ್ (Data Interpretation) ಅಥವಾ ಮಾಹಿತಿ ವ್ಯಾಖ್ಯಾನ ಪ್ರಮುಖ ವಿಷಯವಾಗಿದೆ. ಆರ್‌ಆರ್‌ಬಿಯ ಸ್ಕೇಲ್ 2 ಮತ್ತು 3 ಹುದ್ದೆಗಳಿಗಾಗಿ ನಡೆಸುವ ಎರಡೂ ಪರೀಕ್ಷೆಗಳಲ್ಲೂ ಈ ವಿಷಯವಿದೆ.

ಇದೇ ರೀತಿ ಗುಣಾತ್ಮಕ ಪರಿಮಾಣ (Quantitative Aptitude) ವಿಭಾಗದಲ್ಲೂ ಮಾಹಿತಿ ವ್ಯಾಖ್ಯಾನ ಕುರಿತ ಹಲವು ಪ್ರಶ್ನೆಗಳಿರುತ್ತವೆ. ಎರಡೂ ಪರೀಕ್ಷೆಗಳಲ್ಲಿ ಈ ವಿಷಯದ ಕುರಿತು ಕೇಳುವ ಪ್ರಶ್ನೆಗಳಿಗೆ ನಿಖರವಾಗಿ ವಿಶ್ಲೇಷಿಸು ವುದು ಬಹಳ ಮುಖ್ಯ.

ಅಭ್ಯರ್ಥಿಗಳಿಗೆ ಮಾಹಿತಿಯು ವಿವಿಧ ಅಂಶಗಳೊಂದಿಗೆ ಹೇಗೆ ತಳಕು ಹಾಕಿಕೊಂಡಿರುತ್ತದೆ ಎಂಬುದನ್ನು ವಿವಿಧ ಉಪಕ್ರಮಗಳೊಂದಿಗೆ ವಿಶ್ಲೇಷಿಸುವ ಕೌಶಲ ತಿಳಿದಿರಬೇಕು. ನಿರ್ದಿಷ್ಟ ಅಭ್ಯಾಸ ಕ್ರಮ ಹಾಗೂ ಸರಿಯಾದ ತಂತ್ರಗಳನ್ನು ತಿಳಿದರೆ ಉತ್ತಮ ಅಂಕಗಳನ್ನು ಗಳಿಸಬಹುದು.

ಆರ್‌ಆರ್‌ಬಿ ನೇಮಕಾತಿ

> ಡೇಟಾ ಇಂಟರ್‌ಪ್ರಿಟೇಷನ್ ಅಥವಾ ಮಾಹಿತಿ ವ್ಯಾಖ್ಯಾನ ಎನ್ನುವುದು ಆರ್‌ಆರ್‌ಬಿ ಪರೀಕ್ಷೆಯಲ್ಲಿ ಪ್ರಮುಖ ವಿಷಯ. ಈ ವಿಷಯದ ಮೇಲೆ ಕೇಳುವ ಪ್ರಶ್ನೆಗಳ ಸ್ವರೂಪ, ಪರೀಕ್ಷಾ ಸಿದ್ಧತೆ ಕುರಿತು ಇಲ್ಲಿ ವಿವರಿಸಲಾಗಿದೆ.

ಏನಿದು ಡೇಟಾ ಇಂಟರ್‌ಪ್ರಿಟೇಶನ್?

ವಿವಿಧ ಮೂಲಗಳಿಂದ ಪಡೆದ ಮಾಹಿತಿಯನ್ನು ನಿಖರವಾಗಿ ವಿಶ್ಲೇಷಿಸುವದೇ ಮಾಹಿತಿ ವ್ಯಾಖ್ಯಾನ ಅಥವಾ ಡೇಟಾ ಇಂಟರ್‌ಪ್ರಿಟೇಶನ್(ಡಿಐ). ಪಠ್ಯ, ಚಿತ್ರ, ಚಾರ್ಟ್ ಅಥವಾ ಆಲೇಖಗಳಲ್ಲಿನ ಮಾಹಿತಿಯನ್ನು ಪೂರಕ ಅಂಶಗಳೊಂದಿಗೆ ನಿಖರವಾಗಿ ಅರ್ಥೈಸಿಕೊಂಡು, ಅದನ್ನು ವಿವಿಧ ಆಯಾಮಗಳಲ್ಲಿ ವಿಶ್ಲೇಷಿಸುವುದು ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ಮುಖ್ಯವಾಗಿರುತ್ತದೆ.

‘ಡಿಐ’ ಪ್ರಶ್ನೆಗಳ ಗುರಿ ಅಭ್ಯರ್ಥಿಗಳ ವಿಶ್ಲೇಷಣಾ ತ್ಮಕ ಮತ್ತು ಸಂಖ್ಯೆಗಳ ಕುರಿತ ಸಾಮರ್ಥ್ಯ ಪರೀಕ್ಷಿ ಸುವುದಾಗಿರುತ್ತದೆ. ಇದು ಬ್ಯಾಂಕ್ ಉದ್ಯೋಗಿಗೆ ಅಗತ್ಯವಾದ ಗುಣಮಟ್ಟವೆಂದು ಪರಿಗಣಿಸಲಾಗಿದೆ. ಈ ವಿಭಾಗದಲ್ಲಿ ಶೇಕಡಾ ವಾರು, ಲಾಭ ಮತ್ತು ನಷ್ಟ, ಸಮಯ ಮತ್ತು ದೂರ, ಸರಳ ಬಡ್ಡಿ, ಚಕ್ರಬಡ್ಡಿ, ಮಾಪನ, ಸಂಭವನೀಯತೆಯಂತಹ ಯಾವುದೇ ವಿಷಯದಿಂದ ಪ್ರಶ್ನೆಗಳನ್ನು ಕೇಳಬಹುದು. ಅಭ್ಯರ್ಥಿಗಳು ಈ ವಿಷಯಗಳ ಮೇಲೆ ಹಿಡಿತವಿದ್ದರೆ, ಪ್ಯಾರಾಗ್ರಾಫ್, ಬಾರ್ ರೇಖಾಚಿತ್ರ, ಚಾರ್ಟ್ ಅಥವಾ ಗ್ರಾಫ್‌ನಲ್ಲಿ ನೀಡಲಾದ ಮಾಹಿತಿ ಯನ್ನು ಹೊರತೆಗೆ ಯುವುದು ಮತ್ತು ವಿಶ್ಲೇಷಣೆ ಮಾಡುವುದು ಸುಲಭವಾಗುತ್ತದೆ.

‘ಡಿಐ’ ವಿಧಗಳು

ವಿವಿಧ ರೂಪಗಳಲ್ಲಿ ಡೇಟಾ ಇಂಟರ್‌ಪ್ರಿಟೇಷನ್ ಮಾಹಿತಿ ನೀಡಲಾಗುತ್ತದೆ. ಅವುಗಳು ಹೀಗಿವೆ.

ಪ್ಯಾರಾಗ್ರಾಫ್: ಈ ವಿಭಾಗದಲ್ಲಿ ಪಠ್ಯ ರೂಪದಲ್ಲಿ ಮಾಹಿತಿಯನ್ನು ನೀಡಲಾಗಿರುತ್ತದೆ.

ಪೈ ನಕ್ಷೆ : ಪೈ ನಕ್ಷೆಯು ಮಾಹಿತಿಯ ವೃತ್ತಾಕಾರದ ಪ್ರಾತಿನಿಧ್ಯವಾಗಿದೆ. ಒಂದೇ ಪ್ರಶ್ನೆಗೆ ಒಂದು ಅಥವಾ ಹೆಚ್ಚಿನ ಪೈ ಚಾರ್ಟ್‌ಗಳನ್ನು ನೀಡಬಹುದು.

ಕೋಷ್ಟಕ: ಇಲ್ಲಿ ಮಾಹಿತಿಯನ್ನು ಕೋಷ್ಟಕ ರೂಪದಲ್ಲಿ ಪ್ರತಿನಿಧಿಸಲಾಗುತ್ತದೆ. ಇದರಲ್ಲಿ ಎರಡು ವಿಧಗಳಿರುತ್ತವೆ. ಕೆಲವು ಕೋಷ್ಟಕಗಳಲ್ಲಿ ಎಲ್ಲಾ ಮಾಹಿತಿ ನೀಡಲಾಗಿರುತ್ತದೆ. ಇನ್ನು ಕೆಲವು ಕೋಷ್ಟಕಗಳಲ್ಲಿ ಮಾಹಿತಿ ಇರುವುದಿಲ್ಲ. ಇಲ್ಲಿ ಪ್ರಶ್ನೆಗಳಿಗೆ ಪರಿಹಾರ ಕಂಡುಹಿಡಿವ ಮೊದಲು ಕೋಷ್ಟಕದಲ್ಲಿಲ್ಲದ ಮೌಲ್ಯವನ್ನು ಕಂಡುಹಿಡಿದು ನಂತರ ಉತ್ತರಿಸಬೇಕಾಗುತ್ತದೆ.

ಸ್ತಂಭ ನಕ್ಷೆ: ಸ್ತಂಭನಕ್ಷೆಗಳಲ್ಲಿ ಮಾಹಿತಿಯನ್ನು ವಿವಿಧ ಛಾಯೆ ಅಥವಾ ಬಣ್ಣಗಳಿಂದ ಸ್ತಂಭ ರೇಖಾಚಿತ್ರದ ರೂಪದಲ್ಲಿ ಒದಗಿಸಲಾಗುತ್ತದೆ.

ರೇಖಾ ನಕ್ಷೆ: ರೇಖಾನಕ್ಷೆಗಳು ಬೆಳವಣಿಗೆ ಅಥವಾ ಕುಸಿತವನ್ನು ಸೂಚಿಸುತ್ತವೆ. ಪ್ರಶ್ನೆಗಳಿಗೆ ಉತ್ತರಿಸುವಾಗ ಮಾಹಿತಿಯನ್ನು ಅರ್ಥೈಸಲು ರೇಖೆಗಳನ್ನು ಮತ್ತು ಭೇಧಕಗಳನ್ನು ಅರ್ಥೈಸಿಕೊಳ್ಳುವುದು ಮುಖ್ಯ.

ಪ್ರಶ್ನೋತ್ತರ- ತಂತ್ರಗಳು

ಗಣಿತದ ಸೂತ್ರಗಳ ಹಿಡಿತ: ಮಾಹಿತಿ ವಿಶ್ಲೇಷಣಾ ಪ್ರಶ್ನೆಗಳು ಗಣಿತದ ಲೆಕ್ಕಾಚಾರಗಳ ರೂಪಗಳಾಗಿವೆ. ಇಲ್ಲಿನ ಪ್ರಶ್ನೆಗಳಿಗೆ ನಿಖರವಾಗಿ ಉತ್ತರಿಸುವಾಗ ಗಣಿತದ ವಿವಿಧ ಸೂತ್ರಗಳನ್ನು ಬಳಸಬೇಕಾಗುತ್ತದೆ. ಅದಕ್ಕಾಗಿ ಗಣಿತದ ಎಲ್ಲಾ ಸೂತ್ರಗಳ ಮೇಲೆ ಹಿಡಿತವಿರಬೇಕು.

ವೇಗ ಮತ್ತು ನಿಖರತೆ: ಗಣಿತದಲ್ಲಿ ಲೆಕ್ಕಾಚಾರ, ವೇಗ ಮತ್ತು ನಿಖರತೆಗಳು ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇದಕ್ಕಾಗಿ ಅಭ್ಯರ್ಥಿಗಳು ಸಂಖ್ಯೆಗಳ ವರ್ಗಸಂಖ್ಯೆ, ವರ್ಗಮೂಲ, ಘನಸಂಖ್ಯೆ ಮತ್ತು ಘನಮೂಲಗಳನ್ನು ತಿಳಿದಿರಬೇಕು. ನಾಲ್ಕಂಕಿಯಿಂದ ನಾಲ್ಕಂಕಿ, ಐದಂಕಿಯಿಂದ ಐದಂಕಿ ಸಂಖ್ಯೆಗಳನ್ನು ವೇಗವಾಗಿ ಗುಣಿಸುವ ಮತ್ತು ಭಾಗಿಸುವುದನ್ನು ತಿಳಿದಿರಬೇಕು. ಇಲ್ಲಿ ಮಾನಸಿಕ ಲೆಕ್ಕಾಚಾರವೂ ಅನಿವಾರ್ಯ. ಇವುಗಳ ಸತತ ಅಭ್ಯಾಸವು ವೇಗ ಮತ್ತು ನಿಖರತೆಯನ್ನು ಸುಧಾರಿಸುತ್ತದೆ.

ಅಂದಾಜು ಗಣನೆ: ಮಾಹಿತಿ ವಿಶ್ಲೇಷಣೆಯಲ್ಲಿ ಬಹಳಷ್ಟು ಲೆಕ್ಕಾಚಾರಗಳು ಸರಾಸರಿ, ಭಿನ್ನರಾಶಿಗಳು, ಶೇಕಡಾಕ್ರಮ, ಅನುಪಾತಗಳು ಇತ್ಯಾದಿಗಳ ರೂಪದಲ್ಲಿರುತ್ತವೆ. ಅಂದಾಜು ಮಾಡುವಿಕೆಯು ಕಡಿಮೆ ಸಮಯದಲ್ಲಿ ಪ್ರಶ್ನೆಗೆ ಅಂದಾಜು ಉತ್ತರ ಪಡೆಯಲು ಸಹಾಯ ಮಾಡುತ್ತದೆ. ಪರಸ್ಪರ ಪರಿವರ್ತನೆಯ ತಂತ್ರಗಳು ಇಲ್ಲಿ ಬಹಳ ಮುಖ್ಯ. ಅಂದರೆ ಶೇಕಡಾವಾರು, ಭಿನ್ನರಾಶಿ ಮತ್ತು ಅನುಪಾತಗಳ ಪರಸ್ಪರ ಪರಿವರ್ತನೆಗಳ ಪರಿಣಾಮಕಾರಿ ಬಳಕೆಯು ವೇಗವಾಗಿ ಲೆಕ್ಕಾಚಾರ ಮಾಡಲು ನಮಗೆ ಸಹಾಯ ಮಾಡುತ್ತದೆ.

ಪರಿಣಾಮಕಾರಿ ವಿಶ್ಲೇಷಣೆ: ಕೆಲವು ಪ್ರಶ್ನೆಗಳು ಧೀರ್ಘವಾದ ಲೆಕ್ಕಾಚಾರಗಳನ್ನು ಒಳಗೊಂಡಿರುವುದಿಲ್ಲ. ಆದರೆ ಪರಿಣಾಮಕಾರಿಯಾದ ಮಾಹಿತಿ ವಿಶ್ಲೇಷಣೆಯನ್ನು ಬಯಸುತ್ತವೆ. ಅದಕ್ಕಾಗಿ ಪ್ರಶ್ನೆಯನ್ನು ಎಚ್ಚರಿಕೆಯಿಂದ ಮತ್ತು ಸಮಗ್ರವಾಗಿ ಓದಿ. ಪ್ರಶ್ನೆಗೆ ತಕ್ಕಂತೆ ಅಚ್ಚುಕಟ್ಟಾಗಿ ಮಾಹಿತಿಯನ್ನು ವಿಶ್ಲೇಷಣೆ ಮಾಡಿ.

ನಿಖರತೆ ಮುಖ್ಯ: ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ನಿಖರತೆಗೆ ಹೆಚ್ಚು ಮಹತ್ವವಿದೆ. ನಿಮ್ಮ ಉತ್ತರವು ನಿಖರವಾಗಿದ್ದಷ್ಟು ಉತ್ತಮ ಅಂಕಗಳು ಲಭಿಸುತ್ತವೆ. ಉತ್ತರಗಳಲ್ಲಿ ಮೀಟರ್, ಕೆಜಿ, ಸೆಕೆಂಡು, ಕಿಮೀ/ಗಂಟೆ ಇಂತಹ ನಿಖರವಾದ ಏಕಮಾನಗಳಿರಲಿ. ಅಭ್ಯರ್ಥಿಗಳು ವೇಗದ ಜೊತೆಗೆ, ಬುದ್ಧಿವಂತಿಕೆಯಿಂದ ಉತ್ತರಿಸಬೇಕು.

ಸ್ಪಷ್ಟತೆ ಇರಲಿ: ಡೇಟಾ ಇಂಟರ್‌ಪ್ರಿಟೇಶನ್‌ನಲ್ಲಿ, ನೀಡಿದ ದತ್ತಾಂಶದಿಂದ ಸ್ಪಷ್ಟವಾದ ಮಾಹಿತಿ ವಿಶ್ಲೇಷಣೆಗೆ ಹೆಚ್ಚು ಆದ್ಯತೆ ಇರುತ್ತದೆ. ಚಾರ್ಟ್, ಕೋಷ್ಟಕ, ನಕ್ಷೆ ಅಥವಾ ಗ್ರಾಫ್‌ನಿಂದ ಮಾಹಿತಿ ಸಂಗ್ರಹಿಸುವಾಗ ಸ್ಪಷ್ಟತೆ ಇರಲಿ. ಸಂಖ್ಯೆಗಳನ್ನು ನಕಲು ಮಾಡುವಾಗ ಈ ತಪ್ಪುಗಳೂ ನುಸುಳದಂತೆ ಎಚ್ಚರವಹಿಸಿ. ಒಂದು ಸಣ್ಣ ತಪ್ಪು ಇಡೀ ಲೆಕ್ಕಾಚಾರವನ್ನೇ ಬುಡಮೇಲು ಮಾಡುತ್ತದೆ.

ಸಮಯದೊಂದಿಗೆ ಅಭ್ಯಾಸ : 45 ನಿಮಿಷಗಳಲ್ಲಿ 40 ಪ್ರಶ್ನೆಗಳಿಗೆ ಉತ್ತರಿಸಬೇಕಾದ್ದರಿಂದ ಸಮಯದೊಂದಿಗೆ ಉತ್ತರಿಸುವ ಕೌಶಲ ಬೆಳೆಸಿಕೊಳ್ಳುವುದು ಮುಖ್ಯ. ಇದಕ್ಕಾಗಿ ವಿವಿಧ ಪುಸ್ತಕಗಳು ಮತ್ತು ಆನ್‌ಲೈನ್ ಮೂಲಗಳಿಂದ ವಿವಿಧ ರೀತಿಯ ಪ್ರಶ್ನೆಗಳನ್ನು ಅಭ್ಯಾಸ ಮಾಡಿ.

(ಪ್ರೌಢಶಾಲಾ ಶಿಕ್ಷಕ, ಸ್ಪರ್ಧಾತ್ಮಕ ಪರೀಕ್ಷೆ ತರಬೇತುದಾರ)

ಮುಂದಿನವಾರ: ಪಠ್ಯಕ್ರಮಗಳ ವಿವರಣೆ, ಮಾದರಿ ಪ್ರಶ್ನೋತ್ತರ

‘ಛಲಬಿಡದೇ ಪ್ರಯತ್ನ ಮುಂದುವರಿಸಿ’

ಸಂದರ್ಶನ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕೌಠಾದ ವಿನಯಕುಮಾರ ಸಂಗಶೆಟ್ಟಿ ಗಾದಗೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ 151ನೇ ರ‍್ಯಾಂಕ್ ಪಡೆದಿದ್ದಾರೆ. ವೈದ್ಯಕೀಯ ಪದವಿಗೆ ತೃಪ್ತರಾಗದೇ, 2020ರಲ್ಲಿ ಕೆಎಎಸ್‌ನಲ್ಲಿ ಉತ್ತೀರ್ಣರಾಗಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಈಗ ಯುಪಿಎಸ್‌ಸಿ ಪರೀಕ್ಷೆಗೆ ನಡೆಸಿದ ಪ್ರಯತ್ನದಲ್ಲೂ ಯಶ ಸಾಧಿಸಿದ್ದಾರೆ. ಈ ಸಾಧನೆಯ ಹಿಂದಿನ ಸಿದ್ಧತೆ ಕುರಿತು ‘ಸ್ಪರ್ಧಾವಾಣಿ’ಯೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಚಂದ್ರಕಾಂತ ಮಸಾನಿ



ವಿನಯಕುಮಾರ ಗಾದಗೆ

- **ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ್ದೀರಿ, ನಿಮ್ಮ ಮುಂದಿನ ಹೆಜ್ಜೆ ಏನು?**

ನಾನು ವೈದ್ಯನಾಗಿ ರೋಗಿಗಳಿಗೆ ಚಿಕಿತ್ಸೆ ನೀಡುವ ಮೂಲಕ ಸಮಾಜಕ್ಕೆ ಸೇವೆ ಸಲ್ಲಿಸ ಬಹುದಿತ್ತು. ಆದರೆ, ಅದು ಒಂದು ನಗರ ಅಥವಾ ಒಂದು ಆಸ್ಪತ್ರೆಗೆ ಸೀಮಿತವಾಗುತ್ತಿತ್ತು. ಭಾರತೀಯ ಆಡಳಿತ ಸೇವೆಯಲ್ಲಿ ಎಲ್ಲ ವಿಧದಿಂದ ಸಾರ್ವಜನಿಕರಿಗೆ ಸೇವೆ ಸಲ್ಲಿಸಲು ಅವಕಾಶ ದೊರೆಯುತ್ತದೆ. ಅದನ್ನು ಸಮರ್ಥವಾಗಿ ಬಳಸಿಕೊಂಡು ಜನಸ್ನೇಹಿ ಆಡಳಿತ ಕೊಡಲು ಬಯಸುವೆ.

- **ಯುಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಎಷ್ಟನೇ ಪ್ರಯತ್ನದಲ್ಲಿ ಯಶ ಸಾಧಿಸಿದ್ದೀರಿ?**

ಮೊದಲು ನಾನು ಪ್ರಿಲಿಮ್ಸ್‌ನಲ್ಲೇ ಪಾಸ್ ಆಗಲಿಲ್ಲ. ಒಟ್ಟು ನಾಲ್ಕು ಬಾರಿ ಪ್ರಿಲಿಮ್ಸ್‌ನಲ್ಲಿ ಉತ್ತೀರ್ಣವಾದರೂ ಮುಖ್ಯ ಪರೀಕ್ಷೆ ಪಾಸಾಗಿರಲಿಲ್ಲ. ಆದರೆ, ಪ್ರಯತ್ನ ಬಿಡಲಿಲ್ಲ. 5ನೇ ಬಾರಿಗೆ ಮುಖ್ಯ ಪರೀಕ್ಷೆಯಲ್ಲಿ ಪಾಸಾದೆ.

- **ಹಿಂದಿನ ನಾಲ್ಕು ಪ್ರಯತ್ನಗಳು ಫಲಿಸದಿರಲು ಕಾರಣವೇನು? ಆ ನ್ಯೂನತೆಗಳನ್ನು 5ನೇ ಪ್ರಯತ್ನದಲ್ಲಿ ಹೇಗೆ ಸರಿಪಡಿಸಿಕೊಂಡಿದ್ದೀರಿ?**

ಪ್ರತಿ ಬಾರಿಯೂ ಪರೀಕ್ಷೆಯಲ್ಲಿ ಹೊಸ ಪ್ರಶ್ನೆಗಳು ಬರುತ್ತಿದ್ದವು. ಇನ್ನಷ್ಟು ಸಮಗ್ರ ಮಾಹಿತಿ ಬೇಕೆನಿಸುತ್ತಿತ್ತು. ಹಿಂದಿನ ಪರೀಕ್ಷೆಗಳಲ್ಲಿನ ಕೊರತೆಗಳನ್ನು ನೀಗಿಸಿಕೊಂಡೆ. ಹಿಂದಿನ ಐದು ವರ್ಷಗಳ ಯುಪಿಎಸ್‌ಸಿ ಪ್ರಶ್ನೆ ಪತ್ರಿಕೆ ಹಾಗೂ ಟಾಪರ್‌ಗಳ ಉತ್ತರ ಪತ್ರಿಕೆ ನೋಡುತ್ತಿದ್ದೆ. ಆ ಮೂಲಕ ಬಹಳಷ್ಟು ತಿಳಿದುಕೊಂಡೆ. ಹೀಗಾಗಿ ಈ ಬಾರಿ ಹೆಚ್ಚು ಪರಿಶ್ರಮ ಪಡುವ ಅಗತ್ಯತೆ ಎದುರಾಗಲಿಲ್ಲ.

- **ಪರೀಕ್ಷೆಯಲ್ಲಿ ಪಾಸಾಗಲು ನೀವು ಅಳವಡಿಸಿಕೊಂಡಿದ್ದ ಅಧ್ಯಯನ ತಂತ್ರಗಳೇನು?**

ನಾನು ಯಾವತ್ತೂ ನಿದ್ದೆಗೆಟ್ಟು ಓದಿಲ್ಲ. ಸರಾಸರಿ 5 ರಿಂದ 7 ತಾಸು ಓದುತ್ತಿದ್ದೆ. ವಾರದಲ್ಲಿ ಒಂದು ದಿನ ವಿಶ್ರಾಂತಿ ಪಡೆಯುತ್ತಿದ್ದೆ. ನಾನು ಸರಳ ಎನ್ನುವಂತಹ ವಿಷಯವನ್ನೇ ಪರೀಕ್ಷೆಯಲ್ಲಿ ಆಯ್ಕೆ ಮಾಡಿಕೊಂಡಿದ್ದೆ. ಮುಖ್ಯ ಪರೀಕ್ಷೆಯಲ್ಲಿ 9 ಪತ್ರಿಕೆಗಳಿಗೆ ಉತ್ತರ ಬರೆಯಬೇಕು. ಯಾವ ವಿಷಯದಲ್ಲಿ ಹಿಂದೆ ಉಳಿದಿದ್ದೇನೆ ಎನ್ನುವ ಕುರಿತು ಪಟ್ಟಿ ಮಾಡಿಕೊಂಡು ಸರಿ ಪಡಿಸಿಕೊಳ್ಳುತ್ತಿದ್ದೆ. ಪ್ರಮುಖ ವಿಷಯಗಳ ಪುನರಾವರ್ತನೆ ಮಾಡುತ್ತಿದ್ದ ಕಾರಣ ಸ್ಮರಣೆಯಲ್ಲಿ ಉಳಿಯುತ್ತಿತ್ತು. ಇದು ಪರೀಕ್ಷೆಗೆ ನೆರವಾಯಿತು.

- **ನೀವು ಬಳಸುತ್ತಿದ್ದ ಅಧ್ಯಯನ ಪರಿಕರಗಳ ಬಗ್ಗೆ ತಿಳಿಸಿ?**

ನಾನು ನಿರ್ದಿಷ್ಟವಾಗಿ ಇಂತಹದ್ದೇ ಪತ್ರಿಕೆ ಓದುತ್ತಿರಲಿಲ್ಲ. ಆದರೆ, ಪ್ರಚಲಿತ ವಿಷಯಗಳ ಬಗ್ಗೆ ಅರಿತುಕೊಳ್ಳುತ್ತಿದ್ದೆ. ಪ್ರಸ್ತುತ ಕೋಚಿಂಗ್ ಸಂಸ್ಥೆಗಳೇ ಪ್ರಚಲಿತ ವಿಷಯಗಳ ಪಟ್ಟಿ ಮಾಡಿ ಪತ್ರಿಕೆಗಳ ತುಣುಕುಗಳನ್ನೇ ಒದಗಿಸುತ್ತವೆ. ಅವುಗಳನ್ನು ಓದುತ್ತಿದ್ದೆ. ನಾನು ಆಯ್ಕೆ ಮಾಡಿಕೊಂಡ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನೇ ಹೆಚ್ಚು ಓದುತ್ತಿದ್ದೆ.

- **ಯುಪಿಎಸ್‌ಸಿ ಪರೀಕ್ಷೆಗೆ ಹೆಚ್ಚುವರಿ ಕೋಚಿಂಗ್ ಅಗತ್ಯವಿದೆಯೇ? ಯಾವ ರೀತಿ ತರಬೇತಿ ನೆರವಾಗುತ್ತದೆ?**

ಯಾವುದಕ್ಕೂ ಮಾರ್ಗದರ್ಶನ ನೀಡುವವರು ಬೇಕೇ ಬೇಕು. ಮಾರ್ಗದರ್ಶಕರು ಇಲ್ಲದಾಗ ಕೋಚಿಂಗ್ ಅನಿವಾರ್ಯವಾಗಬಹುದು. ಕೋಚಿಂಗ್ ಸಂಸ್ಥೆಗಳು ಮಾರ್ಗ ಮಾತ್ರ ತೋರಿಸುತ್ತವೆ. ಸ್ಪರ್ಧೆಯಲ್ಲಿ ಅನೇಕ ಜನ ಇರುತ್ತಾರೆ. ಪರಸ್ಪರ ಚರ್ಚೆಯಿಂದ ಹೆಚ್ಚು ವಿಷಯಗಳನ್ನು ತಿಳಿದು ಕೊಳ್ಳಲು ಹಾಗೂ ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ನಾನೂ ಸಹ ದೆಹಲಿಯಲ್ಲಿ ಒಂದು ವರ್ಷ ಕೋಚಿಂಗ್ ಸಂಸ್ಥೆಯಲ್ಲಿ ಇದ್ದೆ. ನಂತರ ಬೆಂಗಳೂರಿನಲ್ಲಿ ಎರಡು ವರ್ಷ ತಯಾರಿ ನಡೆಸಿದೆ.

- **ಎಷ್ಟು ಸಮಯದಿಂದ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಿದ್ದೀರಿ? ಸಿದ್ಧತೆಗೆ ಸಮಯ ಹೊಂದಾಣಿಕೆ ಹೇಗೆ ಮಾಡಿಕೊಂಡಿದ್ದೀರಿ?**

5 ವರ್ಷಗಳಿಂದ ತಯಾರಿ ನಡೆಸಿದ್ದೆ. 2020ರಲ್ಲಿ ಕೆಎಎಸ್‌ನಲ್ಲಿ ಪಾಸಾಗಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನ ಇಲಾಖೆಯಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸಕ್ಕೆ ಸೇರಿಕೊಂಡಿದ್ದೆ. ಮಾನವ ಶರೀರ ಶಾಸ್ತ್ರ ಆಯ್ದುಕೊಂಡು ನಿತ್ಯ ಏಳು ತಾಸು ಅಧ್ಯಯನ ಮಾಡುತ್ತಿದೆ. ಸಮಯ ಸಾಲದ ಕಾರಣ ವೇತನ ರಹಿತ ರಜೆ ಪಡೆದು ಪೂರ್ಣ ಸಮಯ ಓದಿಗೆ ಮೀಸಲಿಟ್ಟಿದ್ದೆ.

- **ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ನಿಮ್ಮ ಸಲಹೆ ಏನು?**

ಯುಪಿಎಸ್‌ಸಿ ಪರೀಕ್ಷೆಯ ಬಗ್ಗೆ ಮೊದಲು ಚೆನ್ನಾಗಿ ಅರಿತುಕೊಳ್ಳಬೇಕು. ಮೈನಸ್ ಅಂಕಗಳು, ಯಾವುದನ್ನು ಎಷ್ಟು ಓದಬೇಕು ಎನ್ನುವ ಬಗ್ಗೆಯೂ ಸರಿಯಾಗಿ ತಿಳಿದುಕೊಳ್ಳಬೇಕು. ದೃಢ ಸಂಕಲ್ಪ ಮಾಡಿ ಆಸಕ್ತಿಯಿಂದ ಓದಿದರೆ ಗುರಿ ಸಾಧಿಸುವುದು ಕಷ್ಟವೇನಲ್ಲ. ನಾಲ್ಕು ವರ್ಷ ಓದಿದರೂ ಮುಖ್ಯ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಿದ್ದವು. ಆದರೆ, ನನ್ನ ಪ್ರಯತ್ನ ನಿಲ್ಲಿಸಲಿಲ್ಲ. ಸತತ ಪರಿಶ್ರಮವೇ ನಾನು ಇಟ್ಟುಕೊಂಡಿದ್ದ ಗುರಿ ತಲುಪಿಸಿತು.

ನಮ್ಮಲ್ಲಿ ಆರನೇ ಪ್ರಯತ್ನದಲ್ಲಿ ಪಾಸಾದವರೂ ಇದ್ದಾರೆ. ಅಂತಹವರ ಪ್ರಯತ್ನ ಹೊಸದಾಗಿ ಪರೀಕ್ಷೆಗೆ ಹಾಜರಾಗುವ ಎಲ್ಲ ಅಭ್ಯರ್ಥಿಗಳಿಗೆ ಪ್ರೇರಣೆ. ಎಂತಹ ಪರಿಸ್ಥಿತಿಯಲ್ಲೂ ಛಲಬಿಡದೆ ಓದಬೇಕು. ಮುಂದಿನ ದಾರಿ ಸಹಜವಾಗಿ ಸುಗಮವಾಗುತ್ತದೆ.

‘ಸಂಗಮ್ ಯುಗ’ ಬಹು ಆಯ್ಕೆ ಪ್ರಶ್ನೆಗಳು

ಸಂಗಮ್ ಎಂಬುದು ಮಧುರೈನಲ್ಲಿ ನೆಲೆಗೊಂಡ ಸಾಹಿತಿಗಳ ಮತ್ತು ದಾರ್ಶನಿಕರ ಸಂಸ್ಥೆ. ಇದು ಕಿ.ಪೂ 3 ರಿಂದ ಕ್ರಿ.ಶ 3ರ ವರೆಗೆ ಚಾಲ್ತಿಯಲ್ಲಿತ್ತು. ಸಾಮಾನ್ಯವಾಗಿ ತಮಿಳು ಭಾಷೆಯ ಆರಂಭದ ಕಾಲವನ್ನು ಸಂಗಮ್ ಯುಗ ಎಂದು ಕರೆಯುತ್ತಾರೆ. ಈ ಸಂಸ್ಥೆಗೆ ಪಾಂಡ್ಯ ಚೇರ ಮತ್ತು ಚೋಳರು ರಾಜಾಶ್ರಯ ನೀಡಿದ್ದು ಈ ಸಾಹಿತ್ಯದ ಕಲಿಕೆ ಆ ರಾಜಮನೆತನಗಳ ಇತಿಹಾಸದ ಕಲಿಕೆಯೂ ಆಗಿರುತ್ತದೆ. ಈ ಸಂಗಮ್ ಯುಗದ ಬಗೆಗಿನ ವಿಶೇಷ ಬಹು ಆಯ್ಕೆ ಮಾದರಿ ಪ್ರಶ್ನೆಗಳು ಇಲ್ಲಿವೆ;

ಯು.ಟಿ. ಆಯಿಶ ಫರ್ಝಾನ

1. ಸಂಗಮ್ ಯುಗದ ಆರ್ಥಿಕ ವಹಿವಾಟುಗಳ ಕುರಿತು ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಸಂಗಮ್ ಸಮಯದಲ್ಲಿ ತಮಿಳುನಾಡು ಪ್ರದೇಶವು ಅರೇಬಿಯಾ, ಈಜಿಪ್ಟ್ ಮತ್ತು ರೋಮ್ ದೇಶಗಳ ಜೊತೆ ವ್ಯಾಪಾರ ಸಂಬಂಧವನ್ನು ಹೊಂದಿತ್ತು.

ಬಿ. ಇದನ್ನು ಪೆರಿಪ್ಲಸ್ ಗ್ರಂಥದಲ್ಲಿ ಮತ್ತು ವಿದೇಶಿ ಬರಹಗಾರರ ಇತರ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1.ಹೇಳಿಕೆ ಎ ಸರಿಯಾಗಿದೆ. 2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ. 4.ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ 4

2. ಈ ಕೆಳಗಿನ ಯಾವ ಕೃತಿಯು ಚೋಳ ಸಾಮ್ರಾಜ್ಯದ ಪುಹಾರ್ ಪಟ್ಟಣದ ವರ್ತಕ ಕೋವಲಂ ಎಂಬುವವನು ಮಾಧವಿ ಎಂಬ ನರ್ತಕಿಯನ್ನು ಪ್ರೇಮಿಸಿ ತನ್ನ ಸ್ವಂತ ಹೆಂಡತಿಯಾದ ಕನ್ನಗಿಯನ್ನು ಕಡೆಗಣಿಸುವ ದುರಂತ ಪ್ರೇಮಕಥಾನಕವನ್ನು ಚಿತ್ರಿಸುತ್ತದೆ?

ಎ. ಶಿಲಪ್ಪದಿಗಾರಂ ಬಿ. ಪತ್ತಿನಪ್ಪಲ್ಲೈ ಸಿ. ಮಧುರೈಕಂಜಿ ಡಿ. ತಿರುಕ್ಕುರಲ್

ಉತ್ತರ: ಎ

3. ಈ ಕೆಳಗಿನ ಯಾವ ಕೃತಿಯು ಕೋವಲಂ ಮತ್ತು ನರ್ತಕಿ ಮಾಧವಿಯ ಸುಂದರ ಮಗಳ ಕಥೆಯನ್ನು ಹೇಳುತ್ತದೆ?

ಎ. ಎಟ್ಟುತ್ತೊಗೈ ಬಿ. ಮಣಿಮೇಖಲೈ
ಸಿ. ತಿರುಕ್ಕುರಲ್ ಡಿ. ಸಿಲಪ್ಪತಿಗಾರಂ

ಉತ್ತರ. ಬಿ

4. ಮಣಿಮೇಖಲೈ ಕೃತಿಯ ಬಗ್ಗಗಿನ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಈ ಕೃತಿಯು ಮಣಿಮೇಖಲೈ ಹೇಗೆ ರಾಜಕುಮಾರ ಉದಯಕುಮಾರ್‌ನಿಂದ ರಕ್ಷಿಸಿಕೊಂಡಳು ಎಂಬ ಕತೆಯನ್ನು ಹೇಳುತ್ತದೆ.

ಬಿ. ಕತೆಯ ಅಂತ್ಯದಲ್ಲಿ ಮಣಿಮೇಖಲೈ ಬೌದ್ಧ ಸನ್ಯಾಸಿಯಾಗಿ ಬೌದ್ಧ ಧರ್ಮದ ಪ್ರಚಾರ ಕಾರ್ಯವನ್ನು ಕೈಗೊಳ್ಳುತ್ತಾಳೆ ಎಂಬ ವಿವರವನ್ನು ನೀಡುತ್ತದೆ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1.ಹೇಳಿಕೆ ಎ ಸರಿಯಾಗಿದೆ. 2.ಹೇಳಿಕೆ ಬಿ ಸರಿಯಾಗಿದೆ.
3.ಎರಡೂ ಹೇಳಿಕೆಗಳು ತಪ್ಪಾಗಿವೆ. 4.ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ.4

5. ತಮಿಳುನಾಡಿನಲ್ಲಿ ಸಂಗಮ್ ಅವಧಿಯಲ್ಲಿ ಹುಟ್ಟಿಕೊಂಡ ‘ಪತ್ತಿನಿ ಪಂಥ’ದ ಬಗ್ಗೆಗಿನ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ

ಎ. ಪತ್ತಿನಿ ಪಂಥವನ್ನು ಕನ್ನಗಿ ಪಂಥ ಎಂದೂ ಹೇಳುತ್ತಾರೆ.

ಬಿ. ಕನ್ನಗಿ ಎಂದರೆ ‘ಶೀಲವಂತೆ ಪತ್ನಿ’ ಎಂದು ಅರ್ಥ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1.ಹೇಳಿಕೆ ಎ ಸರಿಯಾಗಿದೆ. 2.ಹೇಳಿಕೆ ಬಿ ಸರಿಯಾಗಿದೆ.
3.ಎರಡೂ ಹೇಳಿಕೆಗಳು ತಪ್ಪಾಗಿವೆ. 4.ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ. 4

6. ತಮಿಳುನಾಡಿನಲ್ಲಿ ಕನ್ನಗಿಯನ್ನು ಆದರ್ಶ ಪತ್ನಿಯಾಗಿ ಪೂಜಿಸುವ ಪರಿಪಾಠವನ್ನು ಪರಿಚಯಿಸಿದವರು ಯಾರು ?

ಎ. ಚೇರನ್ ಸೆಂಗುಟ್ಟವನ್ ಬಿ. ಮಾಂಗುಡಿ ಮರುದನ್
ಸಿ. ಉದಿಯೆಂಜರಲ್ ಡಿ. ಕರಿಕಾಲಚೋಳ

ಉತ್ತರ. ಎ

7. ಯಾವ ಸಾಹಿತ್ಯ ಕೃತಿಯು ಕರಿಕಾಲ ಚೋಳನ ಆರಂಭಿಕ ಜೀವನ ಮತ್ತು ಸೆರೆಮನೆಯಿಂದ ತಪ್ಪಿಸಿ ಬಂದು ಅವನು ಮರಳಿ ಸಿಂಹಾಸನವನ್ನು ಪಡೆದ ವೀರಕಥಾನಕವನ್ನು ಚಿತ್ರಿಸುತ್ತದೆ ?

ಎ. ಪತ್ತಿನಪ್ಪಲ್ಲೈ ಬಿ. ಪಾದಿರ್ರುಪ್ಪಟ್ಟು
ಸಿ. ಸಿಲಪ್ಪತಿಗಾರಂ ಡಿ. ಮಣಿಮೇಖಲೈ

ಉತ್ತರ. ಎ

8. ಮಾಂಗುಡಿ ಮರುದನ್ ಬರೆದ ಈ ಕೆಳಗಿನ ಯಾವ ಗ್ರಂಥವು ಪಾಂಡ್ಯ ಮತ್ತು ಮಧುರೈ ದೇಶದ ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ವಿವರಿಸುತ್ತದೆ ?

ಎ. ಮಧುರೈಕ್ಕಂಜಿ ಬಿ. ಪುರನಾನೂರು
ಸಿ. ನರ್ರಿನೈ ಡಿ. ಕಲಿತ್ತೊಗೈ

ಉತ್ತರ. ಎ

9. ಚೇರನ್ ಸೆಂಗುಟ್ಟುವನ್ ಕುರಿತು ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

1. ಚೇರನ್ ಸೆಂಗುಟ್ಟುವನ್ ಚೇರ ಸಂತತಿಯ ಜನಪ್ರಿಯ ದೊರೆಯಾಗಿದ್ದನು
2. ಪದಿರುಪ್ಪಟ್ಟು, ಪುರನಾನೂರ್ ಮತ್ತು ಶಿಲಪ್ಪದಿಗಾರಂ ಕೃತಿಗಳಲ್ಲಿ ಚೇರನ್ ಸೆಂಗುಟ್ಟುವನ್ ಬಗ್ಗೆ ಹೇರಳವಾಗಿ ವರ್ಣಿಸಲಾಗಿದೆ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1.ಹೇಳಿಕೆ ಎ ಸರಿಯಾಗಿದೆ. 2.ಹೇಳಿಕೆ ಬಿ ಸರಿಯಾಗಿದೆ.
3.ಎರಡೂ ಹೇಳಿಕೆಗಳು ತಪ್ಪಾಗಿವೆ. 4.ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ. 4

ಸಿಎಂ ಮನೆ ಮುಂದೆ ಧರಣಿ ತೀರ್ಮಾನ ಕೈ ಬಿಟ್ಟ ಸ್ವಾಮೀಜಿ

ಪಂಚಮಸಾಲಿ ಮೀಸಲಾತಿ: 2 ತಿಂಗಳಲ್ಲಿ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡುವ ಸಂಬಂಧ ಇನ್ನೆರಡು ತಿಂಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ.

ಅಲ್ಲದೆ, ಮುಖ್ಯಮಂತ್ರಿಯವರ ಸೂಚನೆಯ ಮೇರೆಗೆ ಬುಧವಾರ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರು ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮತ್ತು ಸಮಾಜದ ಮುಖಂಡರ ಜತೆ ಸಂಧಾನ ನಡೆಸಿದರು. ಮುಖ್ಯಮಂತ್ರಿ ಭರವಸೆ ಮತ್ತು ಸಚಿವರ ಸಂಧಾನದ ಪರಿಣಾಮ ಮುಖ್ಯಮಂತ್ರಿಯವರ ಮನೆ ಮುಂದೆ ಸ್ವಾಮೀಜಿ ನಡೆಸಲು ಉದ್ದೇಶಿಸಿದ್ದ ಧರಣಿ ನಿರ್ಧಾರವನ್ನು ಕೈಬಿಟ್ಟರು.

ಸಚಿವ ಸಿ.ಸಿ.ಪಾಟೀಲ ಅವರ ಮನೆಯಲ್ಲಿ ಬೆಳಿಗ್ಗೆಯಿಂದ ಈ ಸಂಬಂಧ ಸರಣಿ ಸಭೆಗಳು ನಡೆದವು. ಸಭೆಯಲ್ಲಿ ಪಂಚಮಸಾಲಿ ಸಮಾಜದ ಮುಖಂಡರು, ಜನಪ್ರತಿನಿಧಿಗಳು ಭಾಗವಹಿಸಿದ್ದರು. ಜಯಮೃತ್ಯುಂಜಯ ಸ್ವಾಮೀಜಿಯವರ ಜತೆ ಗುರುತಿಸಿಕೊಂಡವರೇ ಈ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು.

'ಮೀಸಲಾತಿಯನ್ನು ಕೂಡಲೇ ಪ್ರಕಟಿಸಬೇಕು' ಎಂದು ಕೆಲವರು ಸಭೆಯಲ್ಲಿ ಆಗ್ರಹಿಸಿದರು. ಸಭೆಯಲ್ಲಿ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗದ ಕಾರಣ, ಮುಖ್ಯಮಂತ್ರಿ ಜತೆ ಚರ್ಚಿಸುವುದು ಸೂಕ್ತ ಎಂಬ ಅಭಿಪ್ರಾಯ ಕೇಳಿ ಬಂತು.

ಆ ಬಳಿಕ ಸಚಿವ ಸಿ.ಸಿ.ಪಾಟೀಲ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಇತರರು ಬೊಮ್ಮಾಯಿ ಅವರನ್ನು ಶಕ್ತಿಭವನದಲ್ಲಿ ಭೇಟಿ ಮಾಡಿದರು. 'ಸರ್ಕಾರ ಪಂಚಮಸಾಲಿ ಸಮುದಾಯವನ್ನು ಕಡೆಗಣಿಸಿದೆ ಎಂಬ ಭಾವನೆ ಬಂದಿದೆ. ಸಮುದಾಯದ ಜನರೂ ಸರ್ಕಾರದ ಮೇಲೆ ಆಕ್ರೋಶಗೊಂಡಿದ್ದಾರೆ' ಎಂಬುದನ್ನು ಅವರ ಗಮನಕ್ಕೆ ತಂದರು.

ಈ ಆಗ್ರಹಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ನಿಮ್ಮ ಬೇಡಿಕೆಗಳ ಬಗ್ಗೆ ಸರ್ಕಾರ ಸಕಾರಾತ್ಮಕ ನಿಲುವು ಹೊಂದಿದೆ. ಆದರೆ, ಕಾನೂನಿನ ತೊಡಕುಗಳಿವೆ. ಇದಕ್ಕಾಗಿ ಸಮಯಾವಕಾಶ ಬೇಕು. ಎರಡು ತಿಂಗಳ ಸಮಯ ಕೊಡಿ, ಮೀಸಲಾತಿ ಬಗ್ಗೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುತ್ತೇನೆ' ಎಂದು ಭರವಸೆ ನೀಡಿದರು. ಈ ಮಾಹಿತಿಯನ್ನು ಸ್ವಾಮಿಜಿಯವರಿಗೆ ತಿಳಿಸಿದ ಬಳಿಕ ಧರಣಿಯನ್ನು ಕೈಬಿಡಲು ಸಮ್ಮತಿ ಸೂಚಿಸಿದರು.

ಮುಖ್ಯಮಂತ್ರಿ ಜತೆಗಿನ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿ.ಸಿ.ಪಾಟೀಲ, 2 ಎ ಮೀಸಲಾತಿಗೆ ಒತ್ತಾಯಿಸಿ ಸ್ವಾಮೀಜಿ ಪಾದಯಾತ್ರೆ ನಡೆಸಿದರು. ನಿರಂತರ ಹೋರಾಟ ಮತ್ತು ಸಮಾವೇಶಗಳನ್ನೂ ಮಾಡಿದರು. ಇವೆಲ್ಲದರ ಫಲವಾಗಿ ಸದ್ಯವೇ ಸಿಹಿ ಸುದ್ದಿ ಸಿಗಲಿದೆ ಎಂದರು.

ಶಾಸಕ ಯತ್ನಾಳ್ ಗಡುವು

'ಮೀಸಲಾತಿ ನೀಡುವ ಬಗ್ಗೆ ಮುಖ್ಯಮಂತ್ರಿ ಬೊಮ್ಮಾಯಿ ಸಕಾರಾತ್ಮಕ ಧೋರಣೆ ಹೊಂದಿದ್ದಾರೆ. ಎರಡು ತಿಂಗಳಲ್ಲಿ ಮೀಸಲಾತಿ ಕೊಡುವುದಾಗಿ ಭರವಸೆ ನೀಡಿದ್ದಾರೆ. ಆದ್ದರಿಂದ, ಆಗಸ್ಟ್ 22 ರವರೆಗೆ ಕಾಯುತ್ತೇವೆ. ಆಗಲೂ ಆಗಿಲ್ಲ ಎಂದರೆ ಬೊಮ್ಮಾಯಿ ಮನೆ ಮುಂದೆ ನಾನೇ ಧರಣಿ ಕೂರುತ್ತೇನೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಎಚ್ಚರಿಕೆ ನೀಡಿದರು.

ಭರವಸೆಯನ್ನು ನಂಬಿದ್ದೇವೆ: ಜಯಮೃತ್ಯುಂಜಯ ಸ್ವಾಮೀಜಿ ಸುದ್ದಿಗಾರರ ಜತೆ ಮಾತನಾಡಿ, 'ಮುಖ್ಯಮಂತ್ರಿ ಮನೆ ಮುಂದೆ ಹೋರಾಟ ಮಾಡಲು ತೀರ್ಮಾನ ಮಾಡಿದ್ದೆವು. ಇದಕ್ಕಾಗಿ ಸಾಕಷ್ಟು ಸಭೆಗಳನ್ನೂ ನಡೆಸಿದ್ದೆವು. ಎರಡು ತಿಂಗಳಲ್ಲಿ ಬೇಡಿಕೆ ಈಡೇರಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಆದ್ದರಿಂದ ಮುಖ್ಯಮಂತ್ರಿ ಮನೆ ಮುಂದೆ ಧರಣಿ ನಡೆಸುವ ನಿರ್ಧಾರ ಕೈಬಿಟ್ಟಿದ್ದೇವೆ' ಎಂದರು.



ಉಡುಪಿ ಜಿಲ್ಲೆಯಲ್ಲಿ ಉತ್ತಮ ಮಳೆ ಸುರಿಯುತ್ತಿದ್ದು, ಕೃಷಿ ಚಟುವಟಿಕೆ ಗರಿಗೆದರಿವೆ. ಕೋಟ ಹೋಬಳಿಯಲ್ಲಿ ಭತ್ತ ನಾಟಿ ಕಾರ್ಯ ಆರಂಭವಾಗಿದ್ದು ಬುಧವಾರ ಕಂಡು ಬಂತು

ಕರಾವಳಿಯಲ್ಲಿ 26ರವರೆಗೆ ಭಾರಿ ಮಳೆ ಮುನ್ಸೂಚನೆ

ರಾಜ್ಯದ ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಕಾರವಾರ/ಬೆಳಗಾವಿ: ಉತ್ತರ ಕನ್ನಡದ ವಿವಿಧೆಡೆ ಬುಧವಾರವೂ ಉತ್ತಮ ಮಳೆಯಾಯಿತು.

ಭಟ್ಕಳ, ಹೊನ್ನಾವರ, ಸಿದ್ದಾಪುರ, ಹಳಿಯಾಳ, ಮುಂಡಗೋಡ ತಾಲ್ಲೂಕುಗಳಲ್ಲಿ ದಿನವಿಡೀ ಆಗಾಗ ರಭಸದ ವರ್ಷಧಾರೆಯಾಯಿತು. ಕಾರವಾರ, ಅಂಕೋಲಾ, ಕುಮಟಾ, ಶಿರಸಿ ತಾಲ್ಲೂಕುಗಳಲ್ಲಿ ಒಂದೆರಡು ಸಲ ಸಾಧಾರಣ ಮಳೆಯಾಯಿತು. ದಿನವಿಡೀ ದಟ್ಟವಾದ ಮೋಡ ಕವಿದಿದ್ದು, ಕಾರವಾರದಲ್ಲಿ ಮೋಡದ ಮರೆಯಿಂದ ಆಗಾಗ ಬಿಸಿಲು ಇಣುಕಿತು. 24 ಗಂಟೆಗಳ ಅವಧಿಯಲ್ಲಿ ಭಟ್ಕಳ, ಕುಮಟಾ ಮತ್ತು ಹಳಿಯಾಳದಲ್ಲಿ ತಲಾ ಒಂದು ಮನೆ ಭಾಗಶಃ ಹಾನಿಗೀಡಾಗಿದೆ.

ಕರಾವಳಿಯಲ್ಲಿ ಜೂನ್ 26ರವರೆಗೆ ಭಾರಿ ಮಳೆಯಾಗುವ ಸಾಧ್ಯತೆಗಳಿವೆ. ಮೀನುಗಾರರು, ಪ್ರವಾಸಿಗರು ಸಮುದ್ರಕ್ಕೆ ತೆರಳದಂತೆ ಭಾರತೀಯ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಹುಬ್ಬಳ್ಳಿ ಹಾಗೂ ಸುತ್ತಮುತ್ತ ಕೆಲ ಸಮಯ ಜಿಟಿಜಿಟಿ ಮಳೆಯಾಯಿತು. ಬೆಳಗಾವಿ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ಗೋಣಿಕೊಪ್ಪಲು (ಕೊಡಗು): ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಬುಧವಾರ ಸಂಜೆ ಧಾರಾಕಾರ ಮಳೆ ಸುರಿಯಿತು.

ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ತುಂತುರು ಮಳೆ ಬಿತ್ತು. ಸಂಜೆ 4 ಗಂಟೆಗೆ ಜೋರು ಮಳೆ ಸುರಿದಿದ್ದರಿಂದ ರಸ್ತೆಗಳಲ್ಲಿ ನೀರು ಹರಿಯಿತು. ವಿದ್ಯಾರ್ಥಿಗಳು ಮನೆಗಳಿಗೆ ತೆರಳಲು ತೊಂದರೆ ಉಂಟಾಯಿತು. ಪೊನ್ನಂಪೇಟೆ, ಹುದಿಕೇರಿ, ಬಿ.ಶೆಟ್ಟಿಗೇರಿ, ಹಾತೂರು, ಅರುವತ್ತೊಕ್ಕಲು ಭಾಗದಲ್ಲೂ ಮಳೆಯಾಗಿದೆ. ರೈತರು ಭತ್ತದ ಬಿತ್ತನೆ ಕಾರ್ಯಕ್ಕೆ ಸಜ್ಜಾಗಿದ್ದಾರೆ. ಮಡಿಕೇರಿ ನಗರದಲ್ಲಿ ಬುಧವಾರ ಸಾಧಾರಣ ಮಳೆಯಾಗಿದೆ.

ಕರಾವಳಿಯಲ್ಲಿ ಮಳೆ

ಮಂಗಳೂರು: ಕರಾವಳಿಯ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಬುಧವಾರ ಆಗಾಗ ಬಿರುಸಿನ ಮಳೆ ಸುರಿಯಿತು.

ಮಂಗಳೂರು ನಗರದಲ್ಲಿ ಬುಧವಾರ ಮಧ್ಯಾಹ್ನದಿಂದ ಮಳೆ ಕೊಂಚ ತಗ್ಗಿದೆ. ಸಮುದ್ರದಲ್ಲಿ ಗಂಟೆಗೆ 40–50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದ್ದು, ಮೀನುಗಾರರು ಸಮುದ್ರಕ್ಕೆ ತೆರಳದಂತೆ ಎಚ್ಚರಿಕೆ ನೀಡಿದೆ.

ಗಾಳಿ ಮಳೆಗೆ ಉಡುಪಿ ತಾಲ್ಲೂಕಿನ ಮರ್ಣೆ ಗ್ರಾಮದಲ್ಲಿ ಮನೆಯ ಮಾಡು ಕುಸಿದಿದೆ. ಭಾರಿ ಮಳೆಗೆ ಸಮುದ್ರ ಪ್ರಕ್ಷುಬ್ಧಗೊಂಡಿದ್ದು ಮಲ್ಪೆ, ಪಡುಕೆರೆ, ಮಟ್ಟು ಭಾಗಗಳಲ್ಲಿ ದೈತ್ಯ ಅಲೆಗಳು ತೀರಕ್ಕೆ ಬಂದು ಅಪ್ಪಳಿಸುತ್ತಿವೆ. ಮಳೆ ಮುಂದುವರಿದರೆ ಕಡಲ್ಕೊರೆತ ಉಂಟಾಗುವ ಭೀತಿ ಇದೆ. ಶಿರೂರಿನಲ್ಲಿ 8.5 ಸೆಂ.ಮೀ ಮಳೆ ಬಿದ್ದಿದೆ.


ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು, ಮೂಡಿಗೆರೆ, ಕೊಪ್ಪ, ಕಳಸ ಭಾಗದಲ್ಲಿ ಬುಧವಾರ ಬಿರುಸಿನ ಮಳೆಯಾಗಿದೆ. ಆಲ್ದೂರಿನಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಗುರುತಿಸಿರುವ ಜಾಗದಲ್ಲಿ ಮಳೆ ನೀರು ಆವರಿಸಿದೆ. ಕೊಪ್ಪ, ಕಳಸ ಭಾಗದಲ್ಲಿ ಹದ ಮಳೆಯಾಗಿದೆ. ಚಿಕ್ಕಮಗಳೂರು, ತರೀಕೆರೆ, ಎನ್.ಆರ್.ಪುರ ಸಹಿತ ವಿವಿಧೆಡೆಗಳಲ್ಲಿ ಸಾಧಾರಣ ಮಳೆಯಾಗಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ತಾಸುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ 19.2 ಮಿ.ಮೀ, ಬಂಟ್ವಾಳದಲ್ಲಿ 35.1 ಮಿ.ಮೀ, ಮಂಗಳೂರಿನಲ್ಲಿ 33.4 ಮಿ.ಮೀ. ಪುತ್ತೂರಿನಲ್ಲಿ 29.2 ಮಿ.ಮೀ, ಸುಳ್ಯದಲ್ಲಿ 29.8 ಮಿ.ಮೀ, ಮೂಡುಬಿದಿರೆಯಲ್ಲಿ 18.2 ಮಿ.ಮೀ ಹಾಗೂ ಕಡಬ ತಾಲ್ಲೂಕಿನಲ್ಲಿ 30.2 ಮಿ.ಮೀ ಮಳೆಯಾಗಿದೆ.

ಮಳೆ ವಿವರ

ಸ್ಥಳ	ಸೆಂ.ಮೀ
ಕಾರವಾರ	16
ಕುಮಟಾ	13
ಭಟ್ಕಳ	12.4
ಹೊನ್ನಾವರ	10.1
ಅಂಕೋಲಾ	9.1

ನಟ ದಿಗಂತ್ ಆಸ್ಪತ್ರೆಯಿಂದ ಮನೆಗೆ




ಬೆಂಗಳೂರು: ಇಲ್ಲಿನ ಮಣಿಪಾಲ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ನಟ ದಿಗಂತ್ ಅವರು ಬುಧವಾರ ಸಂಜೆ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ.

ಗೋವಾದಲ್ಲಿ ಬ್ಯಾಕ್ ಫ್ಲಿಪ್ ಮಾಡುವ ವೇಳೆ ಅವರಿಗೆ ಕುತ್ತಿಗೆ ಭಾಗದಲ್ಲಿ ಗಾಯವಾಗಿತ್ತು. ಹೆಲಿಕಾಪ್ಟರ್ ಮೂಲಕ ಮಂಗಳವಾರ ಇಲ್ಲಿಗೆ ಕರೆತಂದು, ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬೆನ್ನುಮೂಳೆ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಎಸ್. ವಿದ್ಯಾಧರ್ ನೇತೃತ್ವದ ವೈದ್ಯರ ತಂಡವು ತಪಾಸಣೆ ನಡೆಸಿ, ಶಸ್ತ್ರಚಿಕಿತ್ಸೆಗೆ ಒಳಪಡಿಸಿತ್ತು.

'ದಿಗಂತ್ ಅವರಿಗೆ ನಡೆಸಲಾದ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ. ಅವರು ಚೇತರಿಸಿಕೊಳ್ಳುತ್ತಿದ್ದು, ಮನೆಗೆ ಕಳುಹಿಸಲಾಗಿದೆ' ಎಂದು ಆಸ್ಪತ್ರೆ ತಿಳಿಸಿದೆ.

ಬೊಮ್ಮಾಯಿ ದೆಹಲಿ ಭೇಟಿ ಕುತೂಹಲ?

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದಿಢೀರನೇ ಎರಡು ದಿನಗಳ ದೆಹಲಿ ಪ್ರವಾಸ ಕೈಗೊಂಡಿರುವುದು ಬಿಜೆಪಿ ಪಡಸಾಲೆಯಲ್ಲಿ ನಾನಾ ರೀತಿಯ ಚರ್ಚೆಗಳಿಗೆ ಕಾರಣವಾಗಿದೆ.

ಎರಡು ದಿನ ರಾಜ್ಯ ಪ್ರವಾಸದಲ್ಲಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಬೊಮ್ಮಾಯಿ ಅನೇಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ವಾರದ ಹಿಂದಷ್ಟೇ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಬೆಂಗಳೂರಿಗೆ ಬಂದು, ಚರ್ಚೆಯನ್ನೂ ನಡೆಸಿದ್ದರು. ಅದಕ್ಕೆ ಒಂದು ದಿನ ಮೊದಲಷ್ಟೇ ಬೊಮ್ಮಾಯಿ ಅವರು ದೆಹಲಿ ಪ್ರವಾಸ ಕೈಗೊಂಡು, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಹಾಗೂ ಗಜೇಂದ್ರ ಸಿಂಗ್ ಶೆಖಾವತ್ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದ್ದರು.

ದೆಹಲಿಗೆ ಬರುವಂತೆ ಬುಲಾವ್ ಬಂದ ಬೆನ್ನಲ್ಲೇ ಬೊಮ್ಮಾಯಿಯವರ ಭೇಟಿ ನಿಗದಿಯಾಗಿದೆ. ಗಾಂಧಿಭವನದಲ್ಲಿ ನಡೆದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ, ವೇದಿಕೆಯ ಮೇಲಿದ್ದಾಗಲೇ ಸತತ ದೂರವಾಣಿ ಕರೆಯನ್ನು ಸ್ವೀಕರಿಸಿ, ಮಾತನಾಡುತ್ತಲೇ ಇದ್ದರು. ಮೂರುಗಂಟೆ ಬಳಿಕ ಕೆಲವು ಗಂಟೆಗಳ ಕಾಲ ಆಪ್ತ ಸಿಬ್ಬಂದಿ, ಬೆಂಗಾವಲು ಪಡೆಯನ್ನು ಬಿಟ್ಟ ಅವರು, ಅಜ್ಞಾತ ಸ್ಥಳಕ್ಕೆ ತೆರಳಿದ್ದರು. ದಿನದ ಈ ಬೆಳವಣಿಗೆಗಳು ರಾಜಕೀಯ ಕುತೂಹಲಕ್ಕೆ ಕಾರಣವಾಗಿವೆ.

ಗುರುವಾರ ಮಧ್ಯಾಹ್ನ ದೆಹಲಿಗೆ ತೆರಳಿರುವ ಅವರು, ಶುಕ್ರವಾರ ಸಂಜೆ ಬೆಂಗಳೂರಿಗೆ ವಾಪಸ್ ಆಗಲಿದ್ದಾರೆ. ಅವರ ಪ್ರವಾಸದ ಪಟ್ಟಿಯಲ್ಲಿ ಕೇಂದ್ರ ಸಚಿವರ ಭೇಟಿ ಎಂದು ನಮೂದಿಸಲಾಗಿದೆ.

ಬೊಮ್ಮಾಯಿ ಅವರು ದಿಢೀರ್ ದೆಹಲಿಗೆ ತೆರಳುತ್ತಿರುವುದರಿಂದ ಸಚಿವ ಸ್ಥಾನದ ಆಕಾಂಕ್ಷಿಗಳಲ್ಲಿನ ಮತ್ತೆ ಆಸೆ ಗರಿಗೆದರಿದೆ. ಈ ಬಾರಿ ವಿಸ್ತರಣೆ ಅಥವಾ ಪುನರ್‌ರಚನೆ ಎರಡರಲ್ಲಿ ಯಾವುದೋ ಒಂದು ಆಗಿಯೇ ತೀರುತ್ತದೆ ಎಂಬ ವಿಶ್ವಾಸ ಹಲವು ಶಾಸಕರಲ್ಲಿ ಮೂಡಿದೆ. 'ದೆಹಲಿಗೆ ಹೋಗುತ್ತಿದ್ದೇನೆ. ಈ ಭೇಟಿ ಫಲಪ್ರದವಾಗಲಿದೆ' ಎಂದು ಬೊಮ್ಮಾಯಿ ತಮ್ಮ ಶಾಸಕರ ಬಳಿ ಹೇಳಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಮೋದಿ ಬಳಿ ಪ್ರಸ್ತಾಪ: ಪ್ರಧಾನಮಂತ್ರಿ ನರೇಂದ್ರ ಮೋದಿ ಎರಡು ದಿನಗಳ ಭೇಟಿಗೆ ರಾಜ್ಯಕ್ಕೆ ಬಂದ ಸಂದರ್ಭದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಸಂಪುಟ ವಿಸ್ತರಣೆಯ ವಿಚಾರವನ್ನು ಪ್ರಸ್ತಾಪಿಸಿದ್ದು, 'ಆಗಲಿ, ತ್ವರಿತವಾಗಿ ಮಾಡಿ, ಅದಕ್ಕೂ ಮುನ್ನ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಿ ಮಾತನಾಡಿ' ಎಂದು ಮೋದಿ ಅವರು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಬೊಮ್ಮಾಯಿ ಸಂಪುಟದಲ್ಲಿ ಈಗ ಒಟ್ಟು 5 ಸಚಿವ ಸ್ಥಾನಗಳು ಖಾಲಿ ಇದ್ದು, ವಿಸ್ತರಣೆಗೆ ಹಸಿರು ನಿಶಾನೆ ಸಿಕ್ಕಿದರೆ ಶುಕ್ರವಾರ ಸಂಜೆ ಅಥವಾ ಶನಿವಾರವೇ ಪ್ರಮಾಣ ವಚನ ಸ್ವೀಕಾರ ನಡೆಯಲೂಬಹುದು ಎಂದೂ ಮೂಲಗಳು ಹೇಳಿವೆ.

ರಾಷ್ಟ್ರಪತಿ ಚುನಾವಣೆ ಕಾರಣ

ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರ ನಾಮಪತ್ರಕ್ಕೆ ಸೂಚಕರಾಗಿ ಸಹಿ ಹಾಕಲು ಬಿಜೆಪಿ ಆಡಳಿತವಿರುವ ರಾಜ್ಯಗಳ ಎಲ್ಲ ಮುಖ್ಯಮಂತ್ರಿಗಳನ್ನು ದೆಹಲಿಗೆ ಬರುವಂತೆ ಸೂಚಿಸಲಾಗಿದೆ. ಈ ಕಾರಣಕ್ಕಾಗಿ ಅವರು ದೆಹಲಿಗೆ ಹೋಗುತ್ತಿದ್ದಾರೆ. ಶುಕ್ರವಾರ ದ್ರೌಪದಿಯವರು ನಾಮಪತ್ರ ಸಲ್ಲಿಸಲಿದ್ದಾರೆ. ಆ ಬಳಿಕ ಬೊಮ್ಮಾಯಿ ಬೆಂಗಳೂರಿಗೆ ವಾಪಸಾಗಲಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಓಮೈಕ್ರಾನ್: ರಾಜ್ಯದಲ್ಲಿ ಉಪತಳಿಗಳು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್‌ನ ಉಪತಳಿಗಳಾದ ಬಿಎ 3, ಬಿಎ 4 ಹಾಗೂ ಬಿಎ 5 ರಾಜ್ಯದಲ್ಲಿ ಪತ್ತೆಯಾಗಿವೆ.

ಸೋಂಕು ದೃಢಪಟ್ಟವರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜಿನೋಮಿಕ್ ಸೀಕ್ವೆನ್ಸಿಸ್) ಒಳಪಡಿಸಿದಾಗ ಉಪತಳಿಗಳು ದೃಢಪಟ್ಟವೆ. 2022ರ ಮೇ ಮತ್ತು ಜೂನ್ ತಿಂಗಳಲ್ಲಿ ನಡೆಸಲಾದ ಜಿನೋಮಿಕ್ ಸೀಕ್ವೆನ್ಸಿಸ್ ಪರೀಕ್ಷೆಯಲ್ಲಿ ಶೇ 98 ರಷ್ಟು ಮಂದಿಯಲ್ಲಿ ಓಮೈಕ್ರಾನ್‌ನ ಬಿಎ1.1.529, ಬಿಎ1 ಮತ್ತು ಬಿಎ2 ಉಪತಳಿಗಳು ಪತ್ತೆಯಾಗಿವೆ. ಶೇ 2 ರಷ್ಟು ಹೊಸ ಉಪತಳಿಗಳು ದೃಢಪಟ್ಟಿವೆ. ರಾಜ್ಯದಲ್ಲಿ ಕೋವಿಡ್ 3ನೇ ಅಲೆಗೆ ಓಮೈಕ್ರಾನ್‌ನ ಉಪತಳಿಗಳಾದ ಬಿಎ1.1.529, ಬಿಎ1 ಮತ್ತು ಬಿಎ2 ಕಾರಣವಾಗಿದ್ದವು.

'ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ: ಅಗ್ನಿವೀರರಿಗೆ ಮೀಸಲಾತಿ'

ಪ್ರಜಾವಾಣಿ ವಾರ್ತೆ

ಉಡುಪಿ: 'ಅಗ್ನಿಪಥ ಯೋಜನೆಯಡಿ ನಾಲ್ಕು ವರ್ಷಗಳ ಸೇವಾ ತರಬೇತಿ ಮುಗಿಸಿ ಹೊರಬರುವ ಅಗ್ನಿವೀರರಿಗೆ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆ ವ್ಯಾಪ್ತಿಯ ವಸತಿ ಶಾಲೆಗಳ ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿಯಲ್ಲಿ ಶೇ 75ರಷ್ಟು ಮೀಸಲಾತಿ ನೀಡುವ ಯೋಚನೆ ಇದೆ' ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಖಾತೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಚಿವರು, 'ಅಗ್ನಿಪಥ ಯೋಜನೆಗೆ ಸಹಕಾರ ನೀಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ದೈಹಿಕ ಶಿಕ್ಷಣ ಶಿಕ್ಷಕರಾಗಲು ಅರ್ಹತೆ ಹೊಂದಿರುವ ಅಗ್ನಿವೀರರನ್ನು ಮೀಸಲಾತಿ ಹಾಗೂ ರೋಸ್ಟರ್ ನಿಯಮದಡಿ ನೇಮಕ ಮಾಡಿಕೊಳ್ಳಲಾಗುವುದು. ಈ ಸಂಬಂಧ ಪರಿಶೀಲನೆಗೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಸಮರ್ಥನೆ: 'ಪಠ್ಯ ಪರಿಷ್ಕರಣೆ ಮಾಡಲು ರಾಜ್ಯ ಸರ್ಕಾರ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಗೆ ಆದೇಶ ನೀಡಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಹಿಂದೆ ಪ್ರೊ.ಜಿ.ಎಸ್. ಮುಡಂಬಡಿತ್ತಾಯ ಸಮಿತಿ ಹಾಗೂ ಪ್ರೊ. ಬರಗೂರು ರಾಮಚಂದ್ರಪ್ಪ ಸಮಿತಿ ಯಾವ ಮಾನದಂಡಗಳ ಆಧಾರದ ಮೇಲೆ ಪಠ್ಯ ಪರಿಷ್ಕರಣೆ ಮಾಡಿದೆಯೋ ಅದೇ ಮಾನದಂಡಗಳಡಿ ರೋಹಿತ್ ಚಕ್ರತೀರ್ಥ ಸಮಿತಿಯೂ ಪಠ್ಯ ಪರಿಷ್ಕರಣೆ ಮಾಡಿದೆ' ಎಂದು ಸಚಿವರು ಸಮರ್ಥಿಸಿಕೊಂಡರು. 'ಪಠ್ಯ ಪರಿಷ್ಕರಣೆ ವಿಚಾರದಲ್ಲಿ ಮಾಜಿ ಪ್ರಧಾನಿ ದೇವೇಗೌಡರು ನೀಡಿರುವ ಸಲಹೆಗಳ ಕುರಿತು ಸರ್ಕಾರ ಚರ್ಚಿಸಲಿದೆ. ಸಾಹಿತಿಗಳ ಆಕ್ಷೇಪಗಳು ಹಾಗೂ ಸಲಹೆಗಳನ್ನು ಪರಿಗಣಿಸಿ ಅವರಿಗೆ ಮನವರಿಕೆ ಮಾಡಿಕೊಡಲಿದೆ' ಎಂದರು.

ಶೂನ್ಯ ಬಡ್ಡಿದರದಲ್ಲಿ ಸಾಲಕ್ಕೆ ಚಿಂತನೆ: ಸಚಿವ ಕೋಟ

ಉಡುಪಿ: 'ನಾರಾಯಣ ಗುರುಗಳ ನಿಗಮ ಸ್ಥಾಪಿಸುವಂತೆ ಹಾಗೂ ರಾಜ್ಯದಾದ್ಯಂತ ಶೇಂದಿ ಇಳಿಸಲು ಅನುಮತಿ ನೀಡುವಂತೆ ಒತ್ತಾಯಿಸಿ ಪ್ರಣಾವಾನಂದ ಶ್ರೀಗಳು ಹೋರಾಟಕ್ಕೆ ಮುಂದಾಗಿದ್ದಾರೆ. ಎಲ್ಲ ಸಮುದಾಯಗಳಿಗೂ ಪ್ರತ್ಯೇಕ ನಿಗಮ ರಚನೆ ಮಾಡುವುದು ಕಷ್ಟ ಎಂದು ಮುಖ್ಯಮಂತ್ರಿ ತಿಳಿಸಿದ್ದು, ಮುಂದೆ, ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ' ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

'ಈಗಾಗಲೇ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಮೀಸಲಿಟ್ಟಿರುವ ₹ 400 ಕೋಟಿ ಅನುದಾನವನ್ನು ಬಿಲ್ಲವರು, ಈಡಿಗರು, ನಾಮಧಾರಿಗಳು ಸೇರಿದಂತೆ ಇತರ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಬಳಸಲು ನಿರ್ಧರಿಸಲಾಗಿದೆ. ಸೇಂದಿ ನಿಷೇಧ ಇರುವ ಜಿಲ್ಲೆಗಳಲ್ಲಿ ಮೂಲ ಕಸುಬು ಕಳೆದುಕೊಂಡಿರುವವರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಚಿಂತನೆ ಇದೆ' ಎಂದು ತಿಳಿಸಿದರು.

'ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸೇಂದಿ ಮಾರಾಟ ನಿಷೇಧವಾಗಿ ಮೂರು ದಶಕಗಳು ಕಳೆದಿವೆ. ಈಗ ಮತ್ತೆ ಸೇಂದಿ ಮಾರಾಟಕ್ಕೆ ಅನುಮತಿ ನೀಡಿದರೆ ಮೂರ್ತೆದಾರರ ಸಮುದಾಯ ಮತ್ತಷ್ಟು ಹಿಂದಕ್ಕೆ ಹೋಗುವ ಆತಂಕಗಳು ಕಾಡುತ್ತಿದೆ. ಈ ನಿಟ್ಟಿನಲ್ಲಿ ಸಮುದಾಯದ ಮುಖಂಡರು ಹಾಗೂ ಸ್ವಾಮೀಜಿಗಳ ಜತೆ ಮುಖ್ಯಮಂತ್ರಿ ಚರ್ಚೆ ನಡೆಸಲಿದ್ದಾರೆ' ಎಂದು ಕೋಟ ತಿಳಿಸಿದರು

ಪಿಎಸ್‌ಐ ಅಕ್ರಮ: ಕಾಟೇಗಾಂವಗೆ ಜಾಮೀನು

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಆರೋಪಿ, ಜ್ಞಾನಜ್ಯೋತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ದಿವ್ಯಾ ಹಾಗರಗಿಗೆ ಆಶ್ರಯ ನೀಡಿದ್ದ ಆರೋಪದ ಮೇಲೆ ಪೊಲೀಸರು ಬಂಧಿಸಿದ್ದ ಮಹಾರಾಷ್ಟ್ರದ ಸುರೇಶ ಕಾಟೇಗಾಂವಗೆ ಹೈಕೋರ್ಟ್‌ನ ಕಲಬುರಗಿ ಪೀಠ ಜಾಮೀನು ಮಂಜೂರು ಮಾಡಿದೆ.

ದಿವ್ಯಾ ಪತಿ, ಜ್ಞಾನಜ್ಯೋತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರಾಜೇಶ್ ಜಾಗರಗಿ ಜಾಮೀನು ಅರ್ಜಿಯನ್ನು ಪೀಠ ತಿರಸ್ಕರಿಸಿದೆ.

ಬುಧವಾರ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ನ್ಯಾಯಪೀಠವು ಸುರೇಶ ಅವರಿಗೆ ಜಾಮೀನು ನೀಡಿದೆ. ಆದರೆ, ಅಕ್ರಮ ನಡೆದ ಪರೀಕ್ಷಾ ಕೇಂದ್ರವಿದ್ದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆಗಿರುವ ಕಾರಣ ರಾಜೇಶ್‌ಗೆ ಜಾಮೀನು ನೀಡುವುದು ಸೂಕ್ತವಲ್ಲ ಎಂದು ಸಿಐಡಿ ಪರವಾಗಿ ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕ ಪ್ರಕಾಶ ಎಲಿ ವಾದ ಮಂಡಿಸಿದರು. ಇದರಿಂದ ರಾಜೇಶ್ ಅರ್ಜಿ ತಿರಸ್ಕೃತಗೊಂಡಿತು.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಕೆಲ ದಿನಗಳ ಹಿಂದೆ ಜಾಮೀನು ತಿರಸ್ಕರಿಸಿದ್ದರಿಂದ ಸುರೇಶ ಕಾಟೇಗಾಂವ ಮತ್ತು ರಾಜೇಶ್ ಹಾಗರಗಿ ಹೈಕೋರ್ಟ್ ಮೊರೆ ಹೋಗಿದ್ದರು. ಬಂಧಿತ ಆರೋಪಿಗಳ ಪೈಕಿ ಸುರೇಶ ಕಾಟೇಗಾಂವಗೆ ಮೊದಲ ಜಾಮೀನು ಸಿಕ್ಕಿದಂತಾಗಿದೆ.

ಪರ್ಯಾಯ ರಾಜಕಾರಣದತ್ತ ಒಲವು: 'ಮುಖ್ಯಮಂತ್ರಿ' ಚಂದ್ರು

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳ ಧೋರಣೆಯಿಂದ ಜನರು ಬೇಸತ್ತಿದ್ದು, ಪರ್ಯಾಯ ರಾಜಕಾರಣದತ್ತ ಒಲವು ವ್ಯಕ್ತವಾಗುತ್ತಿದೆ. ಪಕ್ಷದ ಸಂಘಟನೆಗಾಗಿ ತಿಂಗಳಿಗೆ 15 ದಿನ ರಾಜ್ಯ ಪ್ರವಾಸ ಮಾಡುತ್ತೇನೆ' ಎಂದು ಎಎಪಿ ಮುಖಂಡ 'ಮುಖ್ಯಮಂತ್ರಿ' ಚಂದ್ರು ಹೇಳಿದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬುಧವಾರ ಭೇಟಿಯಾದ ಅವರು ಮೊಹಲ್ಲಾ ಕ್ಲಿನಿಕ್ ಹಾಗೂ ಸರ್ಕಾರಿ ಶಾಲೆಗಳನ್ನು ವೀಕ್ಷಿಸಿದರು. ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ನಾನು ಯಾವುದೇ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ. ಟಿಕೆಟ್‌ಗೆ ಬೇಡಿಕೆ ಇಟ್ಟು ಪಕ್ಷಕ್ಕೆ ಬಂದಿಲ್ಲ. ಕಳೆದ ನಾಲ್ಕು ದಶಕಗಳಲ್ಲಿ ಮೂರು ಪಕ್ಷಗಳ ನಾಯಕರ ಚಟುವಟಿಕೆಗಳನ್ನು ಹತ್ತಿರದಿಂದ ನೋಡಿದ್ದೇನೆ. ಅವರ ಧೋರಣೆಯಿಂದ ಬೇಸತ್ತು ಸ್ವಚ್ಛ ಆಡಳಿತಕ್ಕಾಗಿ ಎಎಪಿಗೆ ಸೇರಿದ್ದೇನೆ' ಎಂದರು.


ಆಮ್ ಆದ್ಮಿ ಪಕ್ಷದ ಕರ್ನಾಟಕ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿರವರು, 'ಭಾರತವು ರಾಜ್ಯಗಳ ಒಕ್ಕೂಟವಾಗಿದ್ದು, ಆಯಾ ರಾಜ್ಯಗಳಲ್ಲಿ ಆಯಾ ಭಾಷೆಗಳನ್ನು ಪ್ರೋತ್ಸಾಹಿಸುವ ಮೂಲಕ ಪ್ರಾದೇಶಿಕತೆಗೆ ಒತ್ತು ನೀಡಿ ರಾಷ್ಟ್ರದ ಸಮಗ್ರತೆ ಮತ್ತು ಏಕತೆಯನ್ನು ಕಾಪಾಡುವುದೇ ಎಎಪಿಯ ಸ್ಪಷ್ಟ ನಿಲುವು' ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ನವೋದ್ಯಮಿ ಸಂಚಿತ್ ಗೌರವ್ ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆಯಾದರು.

ದೆಹಲಿಯಲ್ಲಿ ಕರ್ನಾಟಕ ಕಾಂಗ್ರೆಸ್‌ನ ಶಾಸಕರು, ಪರಿಷತ್ ಸದಸ್ಯರ ಧರಣಿ

ರಾಹುಲ್ ಪರ ಕೈ ನಾಯಕರ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ



ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಸಮಾಲೋಚನೆ ನಡೆಸಿದರು. ಸಿದ್ದರಾಮಯ್ಯ, ಕೆ.ಸಿ.ವೇಣುಗೋಪಾಲ್, ಪ್ರಿಯಾಂಕಾ ಗಾಂಧಿ ಚಿತ್ರದಲ್ಲಿದ್ದಾರೆ

ನವದೆಹಲಿ: ಕೇಂದ್ರ ತನಿಖಾ ಸಂಸ್ಥೆಗಳು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಕಿರುಕುಳ ನೀಡುತ್ತಿವೆ ಎಂದು ಆರೋಪಿಸಿ ಕರ್ನಾಟಕ ಕಾಂಗ್ರೆಸ್‌ನ ಬಹುತೇಕ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಪ್ರತಿಭಟನೆ ನಡೆಸಿ ಶಕ್ತಿ ಪ್ರದರ್ಶನ ಮಾಡಿದರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ನೇತೃತ್ವದಲ್ಲಿ ಎಐಸಿಸಿ ಕಚೇರಿ ಆವರಣದಲ್ಲಿ ಬೆಳಿಗ್ಗೆಯಿಂದ ಸಂಜೆ ವರೆಗೆ ಧರಣಿ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, 'ಜವಾಹರ್‌ಲಾಲ್ ನೆಹರು ಕಾಲದಲ್ಲಿ ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಆರಂಭವಾಯಿತು. ಪತ್ರಿಕೆಯನ್ನು ಪುನರುಜ್ಜೀವನಗೊಳಿಸಲು ಟ್ರಸ್ಟ್ ಸ್ಥಾಪಿಸಲಾಯಿತು. ಇದರಲ್ಲಿ ನಯಾಪೈಸೆಯನ್ನು ಯಾರೂ ಪಡೆದಿಲ್ಲ. ₹2 ಸಾವಿರ ಕೋಟಿ ಅವ್ಯವಹಾರ ನಡೆದಿದೆ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ. ಜತೆಗೆ, ತನಿಖಾ ಸಂಸ್ಥೆಗಳ ಮೂಲಕ ನಮ್ಮ ನಾಯಕರಿಗೆ ಕಿರುಕುಳ ನೀಡಲಾಗುತ್ತಿದೆ. ಇದಕ್ಕೆಲ್ಲ ನಮ್ಮ ಪಕ್ಷ ಬೆದರುವುದಿಲ್ಲ' ಎಂದರು.

ಸಿದ್ದರಾಮಯ್ಯ ಮಾತನಾಡಿ, 'ಮೂರು ನಾಲ್ಕು ಗಂಟೆ ವಿಚಾರಣೆ ಮಾಡುವುದನ್ನು ನಾವು ನೋಡಿದ್ದೇವೆ. ರಾಹುಲ್ ಅವರನ್ನು 54 ವಿಚಾರಣೆ ಮಾಡಿದ್ದಾರೆ. ಇದರಲ್ಲಿ ರಾಜಕೀಯ ದುರುದ್ದೇಶ ಇದೆ' ಎಂದು ಕಿಡಿಕಾರಿದರು.

ಡಿ.ಕೆ. ಶಿವಕುಮಾರ್ ಮಾತನಾಡಿ, 'ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ನನಗೂ ಬಿಜೆಪಿ ಕಿರುಕುಳ ನೀಡಿತ್ತು. ಅದೇ ಮಾದರಿಯಲ್ಲಿ ರಾಹುಲ್ ಗಾಂಧಿ ಅವರಿಗೂ ತೊಂದರೆ ಕೊಡುತ್ತಿದೆ' ಎಂದರು.

ಶಾಸಕ ಕೃಷ್ಣ ಬೈರೇಗೌಡ, 'ಕರ್ನಾಟಕದಲ್ಲಿ ಶೇ 40 ಭ್ರಷ್ಟಾಚಾರ ಇದೆ ಎಂದು ಗುತ್ತಿಗೆದಾರರ ಸಂಘದವರೇ ಪ್ರಧಾನಿ ಅವರಿಗೆ ದೂರು ನೀಡಿದ್ದಾರೆ. ಈ ಬಗ್ಗೆ ಪ್ರಧಾನಿ ಅವರು ಚಕಾರ ಎತ್ತಿಲ್ಲ. ಸಾವಿರಾರು ಕೋಟಿ ಅವ್ಯವಹಾರದ ಬಗ್ಗೆ ಅವರು ಮೊದಲು ಕ್ರಮ ಕೈಗೊಳ್ಳಬೇಕಿತ್ತು. ಅದರ ಬದಲು ಎಂಟು ವರ್ಷಗಳ ಹಿಂದೆ ಮುಕ್ತಾಯಗೊಂಡ ಪ್ರಕರಣದ ವಿಚಾರಣೆ ನಡೆಸಲಾಗುತ್ತಿದೆ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಯಾವುದೇ ಅಕ್ರಮ ನಡೆದಿಲ್ಲ' ಎಂದರು.

ಶಾಸಕರಾದ ಆರ್.ವಿ.ದೇಶಪಾಂಡೆ, ಡಾ.ಜಿ.ಪರಮೇಶ್ವರ, ಕೆ.ಜೆ.ಜಾರ್ಜ್, ಕೆ.ಆರ್.ರಮೇಶ್ ಕುಮಾರ್, ದಿನೇಶ್ ಗುಂಡೂರಾವ್, ಯು.ಟಿ.ಖಾದರ್, ಮಾಜಿ ಸಚಿವರಾದ ಎಚ್.ಆಂಜನೇಯ, ರಮಾನಾಥ ರೈ ಮತ್ತಿತರರು ಇದ್ದರು.

ಇಬ್ಬರು ಶಾಸಕರ ಉಚ್ಚಾಟನೆಗೆ ಪ್ರಮುಖರ ಸಮಿತಿ ನಿರ್ಣಯ

'ಶ್ರೀನಿವಾಸ ಗೌಡ, ಗುಬ್ಬಿ ಶ್ರೀನಿವಾಸ್ ಅನರ್ಹಗೊಳಿಸಿ'

ಪ್ರಜಾವಾಣಿ ವಾರ್ತೆ





ಬೆಂಗಳೂರು: ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಜೂನ್ 10ರಂದು ನಡೆದ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ, ಅಡ್ಡ ಮತದಾನ ಮಾಡಿದ ಆರೋಪದ ಮೇಲೆ ಶಾಸಕರಾದ ಎಸ್. ಆರ್. ಶ್ರೀನಿವಾಸ್ (ಗುಬ್ಬಿ) ಮತ್ತು ಕೆ. ಶ್ರೀನಿವಾಸ ಗೌಡ ಅವರನ್ನು ಅನರ್ಹಗೊಳಿಸುವಂತೆ ವಿಧಾನಸಭೆಯ ಸ್ಪೀಕರ್‌ಗೆ ದೂರು ನೀಡಲು ಜೆಡಿಎಸ್ ನಿರ್ಧರಿಸಿದೆ.

ಇಬ್ಬರೂ ಶಾಸಕರನ್ನು ಪಕ್ಷದಿಂದ ಉಚ್ಚಾಟನೆ ಮಾಡಲು ಶಾಸಕ ಬಂಡೆಪ್ಪ ಕಾಶೆಂಪುರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಜೆಡಿಎಸ್ ರಾಜ್ಯ ಘಟಕದ ಪ್ರಮುಖರ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಶಾಸಕ ಎಚ್.ಡಿ. ರೇವಣ್ಣ ಸೇರಿದಂತೆ ಹಲವು ನಾಯಕರು ಪ್ರಮುಖರ ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದರು.ಸ

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಂಡೆಪ್ಪ, 'ಪಕ್ಷಾಂತರ ನಿಷೇಧ ಕಾಯ್ದೆ ಅಡಿಯಲ್ಲಿ ಇಬ್ಬರೂ ಶಾಸಕರನ್ನು ಅನರ್ಹಗೊಳಿಸುವಂತೆ ವಿಧಾನಸಭೆಯ ಅಧ್ಯಕ್ಷರಿಗೆ ದೂರು ನೀಡಲು ನಿರ್ಣಯ ಕೈಗೊಳ್ಳಲಾಗಿದೆ. ಎರಡು ದಿನಗಳೊಳಗೆ ದೂರು ಸಲ್ಲಿಸುತ್ತೇವೆ' ಎಂದು ತಿಳಿಸಿದರು.

ಪಕ್ಷದಿಂದ ಉಚ್ಚಾಟನೆ: ಪ್ರಮುಖರ ಸಮಿತಿಯಲ್ಲಿ ಕೈಗೊಂಡಿರುವ ನಿರ್ಣಯದಂತೆ ಈ ಇಬ್ಬರೂ ಶಾಸಕರನ್ನು ಪಕ್ಷದಿಂದ ಉಚ್ಚಾಟಿಸಿ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಆದೇಶ ಹೊರಡಿಸಿದ್ದಾರೆ.

ಇ.ಡಿ ವಿಚಾರಣೆ ಮುಂದೂಡಲು ಸೋನಿಯಾ ಮನವಿ

ನವದೆಹಲಿ(ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗಲು ಮತ್ತಷ್ಟು ಕಾಲಾವಕಾಶ ನೀಡುವಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಜಾರಿ ನಿರ್ದೇಶನಾಲಯ(ಇ.ಡಿ)ಕ್ಕೆ ಮನವಿ ಮಾಡಿದ್ದಾರೆ.

ಇ.ಡಿ ಅಧಿಕಾರಿಗಳಿಗೆ ಪತ್ರ ಬರೆದ ಸೋನಿಯಾ, ಕೋವಿಡ್ ಮತ್ತು ಶ್ವಾಸಕೋಶ ಸೋಂಕಿಗೆ ತುತ್ತಾಗಿರುವ ತಮಗೆ ಮನೆಯಲ್ಲೇ ವಿಶ್ರಾಂತಿ ಪಡೆಯಲು ವೈದ್ಯರು ಸಲಹೆ ನೀಡಿದ್ದಾರೆ ಎಂದಿದ್ದಾರೆ.

ಡಯಾಲಿಸಿಸ್ ಸೇವೆ: ಇಂದು ವ್ಯತ್ಯಯ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪಾವತಿ ವಿಳಂಬ ಹಾಗೂ ಕಾರ್ಮಿಕರ ಆರೋಗ್ಯ ವಿಮೆ (ಇಎಸ್‌ಐ) ಮತ್ತು ಭವಿಷ್ಯ ನಿಧಿಗೆ (ಪಿಎಫ್) ಹಣ ಪಾವತಿಸದಿರುವುದನ್ನು ವಿರೋಧಿಸಿ ರಾಜ್ಯದಾದ್ಯಂತ ಡಯಾಲಿಸಿಸ್ ಘಟಕಗಳ ಸಿಬ್ಬಂದಿ ಗುರುವಾರ ಮುಷ್ಕರ ಹಮ್ಮಿಕೊಂಡಿದ್ದಾರೆ. ಇದರಿಂದಾಗಿ ಡಯಾಲಿಸಿಸ್ ಸೇವೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆಯಿದೆ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿನ ಡಯಾಲಿಸಿಸ್ ಘಟಕಗಳನ್ನು ಬಿಆರ್‌ಎಸ್ ಏಜೆನ್ಸಿ ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ ಎಂಬ ಕಾರಣಕ್ಕೆ ಸಂಸ್ಥೆ ಜತೆಗಿನ ಒಪ್ಪಂದವನ್ನು ಆರೋಗ್ಯ ಇಲಾಖೆ ಕಳೆದ ವರ್ಷ ರದ್ದು ಮಾಡಿತ್ತು. ರಾಜ್ಯದ ಎಲ್ಲ ಡಯಾಲಿಸಿಸ್ ಘಟಕಗಳ ನಿರ್ವಹಣೆಯನ್ನು ಈಗ ಸಂಜೀವಿನಿ ಸಂಸ್ಥೆಗೆ ಹೊರಗುತ್ತಿಗೆ ನೀಡಲಾಗಿದೆ. ರಾಜ್ಯದಲ್ಲಿ 162 ಡಯಾಲಿಸಿಸ್ ಘಟಕಗಳಿದ್ದು, ಸುಮಾರು 900 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

'ಬಿಆರ್‌ಎಸ್ ಏಜೆನ್ಸಿ ಈ ಹಿಂದೆ 122 ಘಟಕಗಳನ್ನು ನಿರ್ವಹಣೆ ಮಾಡುತ್ತಿತ್ತು. 650 ಸಿಬ್ಬಂದಿಗೆ 2021ರ ಜೂನ್ ಮತ್ತು ಜುಲೈ ತಿಂಗಳ ಪೂರ್ಣ ಸಂಬಳ ಪಾವತಿಸಿಲ್ಲ. 2019ರ ನವೆಂಬರ್‌ನಿಂದ 2021ರ ಆಗಸ್ಟ್‌ವರೆಗೆ ಇಎಸ್‌ಐ ಮತ್ತು ಪಿಎಫ್ ನೀಡಿಲ್ಲ. ಸರ್ಕಾರದಿಂದ ಬರಬೇಕಾದ ವೇತನವೂ ಬಂದಿಲ್ಲ. 2021ರ ಆಗಸ್ಟ್‌ನಿಂದ 2022ರ ಜನವರಿ ತಿಂಗಳವರೆಗೆ ಸಿಬ್ಬಂದಿಗೆ ಪೂರ್ಣ ವೇತನ ಬಿಡುಗಡೆಯಾಗಿದ್ದರೂ, ವೇತನ ಕಡಿತಗೊಳಿಸಿ ₹ 14 ಸಾವಿರ ನೀಡಲಾಗಿದೆ. ಈ ಅವಧಿಯಲ್ಲಿ ಇಎಸ್‌ಐ ಮತ್ತು ಪಿಎಫ್ ಹಣ ಪಾವತಿಸಿಲ್ಲ' ಎಂದು ಸಿಬ್ಬಂದಿ ತಿಳಿಸಿದ್ದಾರೆ.

ಟೆಂಡರ್ ನಿಯಮ ಉಲ್ಲಂಘನೆ: 'ಸಂಜೀವಿನಿ ಸಂಸ್ಥೆಯಿಂದ ಕಳಪೆ ಗುಣಮಟ್ಟದ ಔಷಧ ಹಾಗೂ ಉಪಕರಣಗಳನ್ನು ನೀಡಲಾಗುತ್ತಿದೆ. ಯಂತ್ರೋಪಕರಣಗಳ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲ. ಚಿಕಿತ್ಸೆಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಟೆಂಡರ್‌ನಲ್ಲಿ ನೀಡಲಾಗಿರುವ ಷರತ್ತು ಮತ್ತು ನಿಯಮಗಳನ್ನು ಸಂಸ್ಥೆ ಪಾಲಿಸುತ್ತಿಲ್ಲ. ಸರ್ಕಾರವು ಕೂಡಲೇ ಸಮಸ್ಯೆಗಳನ್ನು ಪರಿಹರಿಸಬೇಕು' ಎಂದು ಹೇಳಿದ್ದಾರೆ.

'ವೇತನ ಸೇರಿದಂತೆ ನಮ್ಮ ಸಮಸ್ಯೆಗಳ ಬಗ್ಗೆ ಪ್ರಶ್ನಿಸಿದಾಗ ವರ್ಗಾವಣೆ ಮಾಡಲಾಗುತ್ತಿದೆ. ಘಟಕಗಳಲ್ಲಿ ಸೂಕ್ತ ಸೌಲಭ್ಯವೂ ಇಲ್ಲ. ಯಂತ್ರಗಳನ್ನು ನಾವೇ ರಿಪೇರಿ ಮಾಡಿಕೊಳ್ಳಬೇಕಾದ ಸ್ಥಿತಿಯಿದೆ. ಆದ್ದರಿಂದ ಎಲ್ಲ ಘಟಕಗಳ ನೌಕರರು ಒಗ್ಗಟ್ಟಿನಿಂದ ಮುಷ್ಕರಕ್ಕೆ ನಿರ್ಧರಿಸಿದ್ದೇವೆ' ಎಂದು ಮೈಸೂರಿನ ಡಯಾಲಿಸಿಸ್ ಘಟಕದ ತಾಂತ್ರಿಕ ಸಿಬ್ಬಂದಿ ಚೇತನ್ ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




❦ ಸುಭಾಷಿತ ❦

ದುಃಖ ಯಾರಿಗೂ ತಪ್ಪಿದ್ದಲ್ಲ. ಆದರೆ ದುಃಖಕ್ಕೆ ಮನಸೆತ್ತು ಜೀವಿತವನ್ನು ಹಾಳುಮಾಡಿಕೊಳ್ಳುವುದು ಯೋಗ್ಯವಲ್ಲ.
-ಅ.ನ.ಕೃ

ಉದಯ್ ಮಾಹುರ್ಕರ್ ಹೇಳಿಕೆ ಸಲ್ಲದ ಮಾತು, ಅನಪೇಕ್ಷಿತ ನಡೆ

ಬಿಜೆಪಿ ವಕ್ತಾರೆ ಆಗಿದ್ದ ನೂಪುರ್ ಶರ್ಮಾ ಮತ್ತು ಪಕ್ಷದ ದೆಹಲಿ ಘಟಕದ ಮಾಧ್ಯಮ ವಿಭಾಗದ ಮುಖ್ಯಸ್ಥರಾಗಿದ್ದ ನವೀನ್ ಜಿಂದಾಲ್ ಅವರ ಹೇಳಿಕೆಗಳಿಗೆ ಸಂಬಂಧಿಸಿದಂತೆ ಮುಸ್ಲಿಂ ದೇಶಗಳು ಪ್ರತಿಭಟನೆ ವ್ಯಕ್ತಪಡಿಸುವಂತೆ ಅವುಗಳನ್ನು 'ಎತ್ತಿಕಟ್ಟುವ' ಕೆಲಸ ಮಾಡಿದವರ ವಿರುದ್ಧ ವಿಶ್ವಾಸ ದ್ರೋಹದ ಪ್ರಕರಣ ದಾಖಲಿಸಬೇಕು ಎಂದು ಕೇಂದ್ರ ಮಾಹಿತಿ ಆಯೋಗದಲ್ಲಿ ಮಾಹಿತಿ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಉದಯ್ ಮಾಹುರ್ಕರ್ ಅವರು ಹೇಳಿರುವುದು ತೀರಾ ತಪ್ಪು. ಮಾಹಿತಿ ಆಯುಕ್ತ ಹುದ್ದೆಯು ಸಾಂವಿಧಾನಿಕ ಸ್ಥಾನವಲ್ಲ. ಆದರೆ ಅದು ಸ್ವತಂತ್ರವಾದ ಹುದ್ದೆ. ಆ ಹುದ್ದೆಯಲ್ಲಿ ಇರುವವರು ರಾಜಕಾರಣದಿಂದ ದೂರ ಇರಬೇಕು. ಆದರೆ, ಮಾಹಿತಿ ಆಯುಕ್ತರು ನೀಡಿರುವುದು ರಾಜಕೀಯ ಹೇಳಿಕೆ. ಈ ಹೇಳಿಕೆಯ ಮೂಲಕ ಅವರು ತಾವು ಸಹಾನುಭೂತಿ ಹೊಂದಿರುವುದು ಯಾರ ಬಗ್ಗೆ ಎಂಬುದನ್ನೂ ತಿಳಿಸಿದ್ದಾರೆ. ನೂಪುರ್ ಮತ್ತು ನವೀನ್ ಅವರ ಹೇಳಿಕೆಗಳಿಂದಾಗಿ ದೇಶದಲ್ಲಿ ಅಶಾಂತಿ ಸೃಷ್ಟಿಯಾಗಿತ್ತು. ಅಲ್ಲದೆ, ಅವರ ಹೇಳಿಕೆಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ವಿರೋಧ ವ್ಯಕ್ತವಾಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಭಾರತದಲ್ಲಿನ ಕೆಲವರು ಇತರ ದೇಶಗಳನ್ನು ಎತ್ತಿಕಟ್ಟಿದ್ದರಿಂದ ಆಗಿದ್ದು ಎಂದು ಭಾವಿಸುವುದು ನಿಜವಾದ ಅಪರಾಧದಿಂದ ಗಮನವನ್ನು ಬೇರೆಡೆಗೆ ತಿರುಗಿಸುವ ಕೆಲಸ, ಇಲ್ಲದ ಸಮಸ್ಯೆಯ ಕಡೆ ದೃಷ್ಟಿ ತಿರುಗುವಂತೆ ಮಾಡಿ ಅದೇ ದೊಡ್ಡ ಅಪರಾಧವೆಂಬಂತೆ ಬಿಂಬಿಸುವ ಕೆಲಸವೂ ಹೌದು. ಇಡೀ ಪ್ರಕರಣದಿಂದ ಆಗಿರುವ ಮುಜುಗರ, ಬೇರೆ ಬೇರೆ ದೇಶಗಳಿಂದ ವ್ಯಕ್ತವಾದ ಪ್ರತಿಕ್ರಿಯೆಗಳ ವಿಚಾರವಾಗಿ ಏನೂ ಮಾಡಲಾಗದೆ ಇದ್ದಿದ್ದಕ್ಕೆ ಉಂಟಾಗುವ ಕೋಪವನ್ನು ದೇಶದೊಳಗಿನ ವ್ಯಕ್ತಿಗಳ ಮೇಲೆ ಹರಿಬಿಡುವ ಕೆಲಸ.



ಮಾಹಿತಿ ಆಯೋಗಕ್ಕೆ ಸಂಬಂಧವೇ ಇರದ ವಿಚಾರವೊಂದರಲ್ಲಿ, ಆ ಸಂಸ್ಥೆಯಲ್ಲಿರುವ ಪ್ರಮುಖ ವ್ಯಕ್ತಿಗಳು ಆಡಳಿತಾರೂಢ ಪಕ್ಷವನ್ನು ಸಮರ್ಥಿಸಲು ತುದಿಗಾಲಿನಲ್ಲಿ ನಿಂತರೆ ಸಂಸ್ಥೆ ದುರ್ಬಲವಾಗುತ್ತದೆ

ಈ ಇಬ್ಬರು ಹೇಳಿದ ಮಾತುಗಳು ದೇಶದಲ್ಲಿ ಚರ್ಚೆಯ ವಸ್ತುವಾದಾಗ, ಆ ಮಾತಿಗೆ ಬಹಳ ಜನ ವಿರೋಧ ವ್ಯಕ್ತಪಡಿಸಿದಾಗ, ಆ ಮಾತುಗಳನ್ನು 'ಎತ್ತಿಕಟ್ಟುವ' ಕೆಲಸ ಅಥವಾ 'ವಿಶ್ವಾಸದ್ರೋಹ'ದ ಕೆಲಸ ಎನ್ನಲಾಗದು. ಸರ್ಕಾರ ಮತ್ತು ಬಿಜೆಪಿ ನಾಯಕರ ಮಾತು ಮತ್ತು ಕೃತಿಗೆ ದೇಶದ ಒಳಗೆ ಬರುವ ಟೀಕೆಗಳನ್ನು, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿಕ್ರಿಯೆ ಬರುವಂತೆ ಮಾಡುವ 'ಎತ್ತಿಕಟ್ಟುವ' ಕೆಲಸ ಎಂದು ಪರಿಗಣಿಸಲಾಗದು. ಇಂತಹ ಟೀಕೆಗಳನ್ನು ದೇಶದ್ರೋಹ ಎಂದು ಈಚಿನ ದಿನಗಳಲ್ಲಿ ಹೇಳಿದ್ದಿದೆ. ಮಾಹುರ್ಕರ್ ಅವರ ಆರೋಪಗಳು ಅಂತಹ ಮಾತುಗಳ ಧಾಟಿಯಲ್ಲಿಯೇ ಇವೆ. ಅಪಮಾನಕಾರಿ ಹೇಳಿಕೆಗಳನ್ನು ನೀಡಿದ ಹಲವು ದಿನಗಳವರೆಗೆ ಅವರಿಬ್ಬರ ವಿರುದ್ಧ ಯಾವ ಕ್ರಮವನ್ನೂ ಕೈಗೊಂಡಿರಲಿಲ್ಲ. ಇತರ ದೇಶಗಳಿಂದ ಪ್ರತಿಭಟನೆ ವ್ಯಕ್ತವಾದ ನಂತರವೇ ಕ್ರಮ ಜರುಗಿಸಲಾಯಿತು ಎಂಬುದನ್ನು ಇಲ್ಲಿ ಗಮನಿಸಬೇಕು. ಅಂದರೆ, ಅಂತರರಾಷ್ಟ್ರೀಯ ಸಮುದಾಯದಿಂದ ವ್ಯತಿರಿಕ್ತವಾದ ಪ್ರತಿಕ್ರಿಯೆ ಬರುವವರೆಗೆ ಪಕ್ಷವು ಆ ಹೇಳಿಕೆಗಳ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ಇದೇ ರೀತಿಯ ಮನಃಸ್ಥಿತಿಯೇ ಮಾಹುರ್ಕರ್ ಅವರ ಹೇಳಿಕೆಗಳಲ್ಲಿ ಇದೆ. ಯಾರೋ ಒಬ್ಬರು, ಯಾವುದೋ ಒಂದು ಸಂಘಟನೆಯು ಕೆಟ್ಟದ್ದಕ್ಕೆ ಕಾರಣವಾಗಿರಬಹುದು ಎಂಬ ನೆಲೆಯಲ್ಲಿ ಮಾಹಿತಿ ಆಯುಕ್ತರು ಮಾತನಾಡುವುದು ಮುಜುಗರ ಉಂಟುಮಾಡುವಂಥದ್ದು. ಇಂತಹ ಮಾತುಗಳು ಸ್ವೀಕಾರಾರ್ಹ ಅಲ್ಲ. ಇಂತಹ ಮಾತುಗಳು ಹುದ್ದೆಯ ಘನತೆಯನ್ನು ಕುಗ್ಗಿಸುತ್ತವೆ, ಹುದ್ದೆಗೆ ಇರುವ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತವೆ ಕೂಡ. ಮಾಹಿತಿ ಆಯೋಗಕ್ಕೆ ಒಂದು ಸಂಸ್ಥೆಯಾಗಿ ಮುಖ್ಯ ಪಾತ್ರ ಇದೆ. ಅದು ಸರ್ಕಾರದ ವಿರೋಧಿ ಅಲ್ಲದಿದ್ದರೂ, ಸರ್ಕಾರದಿಂದ ಸ್ವತಂತ್ರವಾಗಿ ಕೆಲಸ ಮಾಡಬೇಕು. ಮಾಹಿತಿ ಆಯೋಗಕ್ಕೆ ಸಂಬಂಧವೇ ಇರದ ವಿಚಾರವೊಂದರಲ್ಲಿ, ಆ ಸಂಸ್ಥೆಯಲ್ಲಿರುವ ಪ್ರಮುಖ ವ್ಯಕ್ತಿಗಳು ಸರ್ಕಾರವನ್ನು ಅಥವಾ ಆಡಳಿತಾರೂಢ ಪಕ್ಷವನ್ನು ಸಮರ್ಥಿಸಲು ತುದಿಗಾಲಿನಲ್ಲಿ ನಿಂತುಕೊಂಡಿದ್ದರೆ ಸಂಸ್ಥೆ ದುರ್ಬಲವಾಗುತ್ತದೆ.

ನೂಪುರ್ ಶರ್ಮಾ ಮತ್ತು ನವೀನ್ ಜಿಂದಾಲ್ ಹೇಳಿಕೆಗಳಿಗೆ ಕೆಲವು ವೇದಿಕೆಗಳಿಂದ ಬೆಂಬಲ ಸಿಕ್ಕಿದೆ, ಸಮರ್ಥನೆ ದೊರೆತಿದೆ. ಅವರ ವಿರುದ್ಧ ಕೈಗೊಳ್ಳಲಾಗಿರುವ ಕ್ರಮಗಳನ್ನು ವಿರೋಧಿಸುವವರು ಆಡಳಿತಾರೂಢ ಪಕ್ಷದ ಒಳಗೆಯೂ ಇದ್ದಾರೆ. ಅಲ್ಪಸಂಖ್ಯಾತ ಸಮುದಾಯದ ಭಾವನೆಗಳಿಗೆ ಧಕ್ಕೆ ತಂದಿದ್ದಕ್ಕಾಗಿ ಅವರ ಬಗ್ಗೆ ಕೆಲವರಿಗೆ ಖುಷಿಯೂ ಆಗಿರಬಹುದು. ದೇಶದ ಸಾಮಾಜಿಕ ಮತ್ತು ರಾಜಕೀಯ ಪರಿಸರ ಅದೆಷ್ಟರಮಟ್ಟಿಗೆ ಧ್ರುವೀಕೃತವಾಗಿದೆ, ಅದೆಷ್ಟು ಹಾಳಾಗಿದೆ ಎಂಬುದನ್ನು ಇವೆಲ್ಲವೂ ತೋರಿಸುತ್ತವೆ.

ದಿನದ ಟ್ವೀಟ್

ಇದೆಂಥಾ ಸ್ಥಿತಿ?



ಶಾಸಕರ ಖರೀದಿಗೂ ಜಿಎಸ್‌ಟಿ ಅನ್ವಯ ಆಗುವಂತೆ ಮಾಡಬೇಕು. ಸರ್ಕಾರ ತನ್ನ ಕೊರತೆಯನ್ನು ನೀಗಿಸಿಕೊಳ್ಳಬಹುದು.

ಶ್ರವಣ್, ಉದ್ಯಮಿ

ಕಿಡಿನುಡಿ

ಯಾಕೆ ಪೊಲೀಸ್ ಕಂಪ್ಲೇಂಟ್ ಇಲ್ಲ? ಯಾಕೆ ಎಂಎಲ್‌ಎ ಇಷ್ಟರವರೆಗೆ ಅರೆಸ್ಟ್ ಆಗಿಲ್ಲ? ಜನರಿಂದ ಆರಿಸಿಬಂದ ಶಾಸಕರು ಜನತೆಯ ಸೇವಕರು ಆಗಿರೋದು ಬಿಟ್ಟು ಜನರ ಬಾಸ್ ಆಗಿರಬಾರದು. ಅರೆಸ್ಟ್ ಮಾಡಿ ಆ ಎಂಎಲ್‌ಎಯನ್ನು.



(ಮಂಡ್ಯದ ಜೆಡಿಎಸ್ ಶಾಸಕ ಎಂ.ಶ್ರೀನಿವಾಸ್ ಅವರು ಸರ್ಕಾರಿ ಕಾಲೇಜೊಂದರ ಪ್ರಾಂಶುಪಾಲರಿಗೆ ಕಪಾಳಮೋಕ್ಷ ಮಾಡಿದ ಕೃತ್ಯಕ್ಕೆ ಪ್ರತಿಕ್ರಿಯೆ)

ಅಜಿತ್ ಲೂಯಿಸ್, ಎಂಜಿನಿಯರ್

25 ವರ್ಷಗಳ ಹಿಂದೆ

ಸೋಮವಾರ, 23-6-1997

• ಪರೀಕ್ಷೆಯಲ್ಲಿ ಕಾಪಿ- ಶಿಕ್ಷಣ ಸಚಿವ ಆರೋಪಮುಕ್ತಿ

ಬೆಂಗಳೂರು, ಜೂನ್ 22– ರಾಜ್ಯದ ಉನ್ನತ ಶಿಕ್ಷಣ ಸಚಿವ ಬಿ. ಸೋಮಶೇಖರ್ ಅವರು 70ರ ದಶಕದಲ್ಲಿ ವಿದ್ಯಾರ್ಥಿಯಾಗಿದ್ದಾಗ ಎಲ್.ಎಲ್.ಬಿ. ಪರೀಕ್ಷೆಯಲ್ಲಿ ಕಾಪಿ ಮಾಡಿದ್ದರೆಂಬ ಆರೋಪದಿಂದ ಮುಕ್ತಿಗೊಳಿಸಿ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಚ್. ನಾಗರಾಜ ಶೆಟ್ಟಿ ಅವರು ಮುಖ್ಯಮಂತ್ರಿಗಳಿಗೆ ವರದಿ ಸಲ್ಲಿಸಿದ್ದಾರೆ.

ಸೋಮಶೇಖರ್ ಅವರು ಕಾನೂನು ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಪ್ರಥಮ ಎಲ್.ಎಲ್.ಬಿ ಪರೀಕ್ಷೆಯಲ್ಲಿ ಕಾಪಿ ಮಾಡಿ ಪರೀಕ್ಷಕರ ಕೈಗೆ ಸಿಕ್ಕಿಹಾಕಿಕೊಂಡಿದ್ದರೆಂದು ಕೆಲವು ಪತ್ರಿಕೆಗಳಲ್ಲಿ ಬಂದ ವರದಿಗಳನ್ನಾಧರಿಸಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಎನ್.ಆರ್. ಶೆಟ್ಟಿ ಅವರು ನೀಡಿದ ವರದಿಯ ನಂತರ ಸತ್ಯಾಸತ್ಯತೆ ಪರಿಶೀಲಿಸಿ ತನಿಖೆ ನಡೆಸಿದ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಯವರು ಸಂಬಂಧಿಸಿದ ದಾಖಲೆಗಳೊಂದಿಗೆ 16 ಪುಟಗಳ ಸುದೀರ್ಘ ವರದಿಯನ್ನು ಮುಖ್ಯಮಂತ್ರಿಗಳಿಗೆ ನೀಡಿರುವುದು ಈಗ ವಿಶ್ವಸನೀಯ ಮೂಲಗಳಿಂದ ತಿಳಿದುಬಂದಿದೆ.

ಇಡೀ ವರದಿಯಲ್ಲಿ ಸೋಮಶೇಖರ್ ಅವರನ್ನು ಕಾಪಿ ಮಾಡಿದ ಆರೋಪದಿಂದ ಮುಕ್ತಗೊಳಿಸಿರುವುದಷ್ಟೇ ಅಲ್ಲ, ಈ ವಿಚಾರದಲ್ಲಿ ಅವರ ವಿರುದ್ಧ ಮಾಡಿರುವ ಆರೋಪಗಳು ಹಾಗೂ ಸೃಷ್ಟಿಸಿರುವ ದಾಖಲೆಗಳಲ್ಲಿ ಒಂದಕ್ಕೊಂದು ಸಂಬಂಧವಿಲ್ಲದ ಕಾರಣ ಪ್ರಕರಣ ಕೇವಲ ಕಟ್ಟುಕತೆ ಎಂದು ವರದಿ ಹೇಳಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 23-6-1972

• ಕಂದಾಯ ವಸೂಲಿ: ಬಡ ರೈತರಿಗೆ ಅಧಿಕಾರಿಗಳಿಂದ ಕಿರುಕುಳ- ಆರೋಪ ನಿರಾಕರಣೆ

ಬೆಂಗಳೂರು, ಜೂನ್ 22– 'ಕೊಡಲು ಶಕ್ತಿ-ಇರುವವರಿಂದ ಸಂಪೂರ್ಣ ಭೂ ಕಂದಾಯ ವಸೂಲಿ, ಬಡ ರೈತರಿಂದ ಒಂದು ವರ್ಷದ ಬಾಕಿಗೆ ಮಾತ್ರ ಒತ್ತಾಯ'– ಸರ್ಕಾರದ ಈ ನೀತಿಯಲ್ಲಿ ಬದಲಾವಣೆಯೇನೂ ಆಗಿಲ್ಲ ಎಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

ಬಡವರಿಂದಲೂ ಸಂಪೂರ್ಣ ಭೂ ಕಂದಾಯ ವಸೂಲಿಗೆ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ ಎಂಬ ವಿರೋಧ ಪಕ್ಷದ ನಾಯಕ ಶ್ರೀ ಎಚ್.ಡಿ. ದೇವೇಗೌಡ ಅವರ ದೂರನ್ನು ನಿರಾಕರಿಸಿದ ಶ್ರೀ ಅರಸು ಅವರು, 'ಸರ್ಕಾರದ ಆದೇಶದಲ್ಲಿ ಬದಲಾವಣೆಯೇನೂ ಆಗಿಲ್ಲ. ಆದರೆ ಶ್ರೀಮಂತರಿಂದ ವಸೂಲಿ ಆಗುತ್ತಿರಬಹುದು' ಎಂದು ಹೇಳಿದರು.

• ವಿಧಾನಸಭೆಯಿಂದ ಮೇಲ್ಮನೆಗೆ ಕಾಂಗ್ರೆಸ್ಸಿನ ಎಲ್ಲ ಆರು ಸ್ಪರ್ಧಿಗಳ ಆಯ್ಕೆ

ಬೆಂಗಳೂರು, ಜೂನ್ 22– ಇಂದು ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಎಲ್ಲ ಆರು ಸ್ಪರ್ಧಿಗಳು ಹಾಗೂ ಒಬ್ಬ ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿ ಮೊದಲನೇ ಸುತ್ತಿನಲ್ಲಿ ಚುನಾಯಿತರಾದರು.

ಎಂ.ಪಿ.ಸಿ.ಸಿ ವ್ಯವಸ್ಥಾಪಕ ಕಾರ್ಯದರ್ಶಿ ಎಂ.ವಿ. ವೆಂಕಟಪ್ಪ ಅವರು ಅತ್ಯಂತ ಹೆಚ್ಚು ಮತಗಳಿಸಿ ಪುನರಾಯ್ಕೆಯಾಗಿದ್ದಾರೆ.

ಆಯ್ಕೆ ಆದ ಇತರ ಅಭ್ಯರ್ಥಿಗಳು: ಎಸ್.ಎಂ. ಕೃಷ್ಣ (31), ಎಚ್.ಟಿ. ರೆಡ್ಡಿ (29), ಇಸ್ಮಾಯಿಲ್ ತಾಬಿಷ್ (28), ಎಂ.ಸಿ. ಪೆರುಮಾಳ್ (27), ಕೆ. ರಂಗಪ್ಪ (28), ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿ ರಾಮಕೃಷ್ಣ ಹೆಗಡೆ (27)

ಅಸಮಾನ ಅವಕಾಶಗಳ ನಿವಾರಣೆಗಾಗಿ ನಾವು ಸಜ್ಜಾಗಬೇಕಿದೆ

ಆರೋಗ್ಯ ವಲಯ: ಬದಲಾವಣೆಯ ಅಗತ್ಯ



ವಿಶ್ಲೇಷಣೆ

ಪ್ರೊ. ಶ್ರೀಲತಾ ರಾವ್ ಶೇಷಾದ್ರಿ

ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಸಂಪನ್ಮೂಲಗಳ ಕೊರತೆ ತೀವ್ರವಾಗಿದ್ದು, ಅದರಿಂದ ಸಮಾಜವು ಸಾಮರ್ಥ್ಯಕ್ಕೆ ಮೀರಿದ್ದನ್ನು ಬಯಸುತ್ತಿದೆ ಎಂಬುದು ಭಾರತದ ಆರೋಗ್ಯ ವಲಯದಲ್ಲಿ ಕೆಲಸ ಮಾಡುತ್ತಿರುವವರಿಗೆ ಬಹಳ ಹಿಂದಿನಿಂದಲೂ ತಿಳಿದಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಈ ಕಟುಸತ್ಯ ಮತ್ತೊಮ್ಮೆ ಅನಾವರಣಗೊಂಡಿತು.

ಲಸಿಕೆಯ ಅಭಿವೃದ್ಧಿ ಹಾಗೂ ವಿತರಣಾ ಕಾರ್ಯವನ್ನು ಅದು ಉತ್ತಮವಾಗಿ ನಿರ್ವಹಿಸಿತು ಎಂಬುದು ಗಮನಾರ್ಹವಾದರೂ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಇದ್ದ ಕೊರತೆಗಳು ಕಣ್ಣಿಗೆ ರಾಚುವಂತಿದ್ದವು. ಈ ಕೊರತೆಗಳ ಜೊತೆಗೆ ಆರೋಗ್ಯ ಸೇವೆಗಳ ಲಭ್ಯತೆಯಲ್ಲಿನ ಅಸಮಾನತೆ ಹಾಗೂ ಅದರ ಬಾಧಕಗಳನ್ನು ಸರಿಪಡಿಸಬೇಕಾದುದೂ ಅಗತ್ಯ. 'ನ್ಯಾಯಯುತವಾದ, ಕೈಗೆಟುಕುವ ಹಾಗೂ ಗುಣಮಟ್ಟದ ಆರೋಗ್ಯ ಸೇವೆಗಳು ಎಲ್ಲರಿಗೂ ಸಿಗಬೇಕು' ಎಂಬ ಗುರಿ ಸಾಧಿಸಲು ಸರ್ಕಾರ ಬಯಸಿದ್ದೇ ಆದಲ್ಲಿ ಈ ಕಾರ್ಯಕ್ಕೆ ಅದು ಮುಂದಾಗಬೇಕಾಗುತ್ತದೆ. ಸಮುದಾಯ ಸಂಘಟನೆಗಳೂ ಈ ದಿಸೆಯಲ್ಲಿ ಕೆಲಸ ಮಾಡುತ್ತಿವೆ, ಮುಂದೆಯೂ ಮುಖ್ಯ ಶಕ್ತಿಯಾಗಿ ಕೆಲಸ ಮಾಡಬೇಕಾಗಿದೆ.

ದೊಡ್ಡ ಮಟ್ಟದ ಕೆಲವು ಬದಲಾವಣೆಗಳಿಂದಾಗಿ ಆರೋಗ್ಯ ಅಸಮಾನತೆಗಳು ಹೆಚ್ಚಾಗಿವೆ. ಜನಸಂಖ್ಯೆಯ ವಿಚಾರದಲ್ಲಿ ನಾವು ಪರಿವರ್ತನೆಯ ಕಾಲಘಟ್ಟದಲ್ಲಿದ್ದೇವೆ. ಹೆಚ್ಚು ಜನರು ದೀರ್ಘಾಯುಷಿಗಳಾಗುತ್ತಿದ್ದಾರೆ. ಮಧ್ಯ ವಯಸ್ಸು ದಾಟಿದ ಹಾಗೂ ವಯೋವೃದ್ಧರ ಆರೋಗ್ಯ ಅಗತ್ಯಗಳನ್ನು ಸಂಭಾಳಿಸುವ ಕೆಲಸಕ್ಕೆ ನಾವು ಸಜ್ಜಾಗಬೇಕಾಗಿದೆ. ಅಲ್ಲದೆ, ಹೆಚ್ಚಿನವರು ಜೀವನೋಪಾಯ ಹುಡುಕಿಕೊಂಡು ನಗರ ಪ್ರದೇಶಗಳಿಗೆ ಸ್ಥಳಾಂತರಗೊಳ್ಳುತ್ತಿದ್ದಾರೆ. ಸಾಂಕ್ರಾಮಿಕದ ಸಂದರ್ಭದಲ್ಲಿ ನಾವು ನೋಡಿದಂತೆ, ಅವರು ಸಮಸ್ಯೆಗಳಿಗೆ ಸುಲಭವಾಗಿ ತುತ್ತಾಗುವವರು. ಅಷ್ಟೇ ಅಲ್ಲ, ಆರೋಗ್ಯದ ವಿಷಯದಲ್ಲಿಯೂ ಪರಿವರ್ತನೆ ಆಗುತ್ತಿದೆ. ಕ್ಷಯ ಹಾಗೂ ಮಲೇರಿಯಾದಂತಹ ಸಾಂಕ್ರಾಮಿಕ ಕಾಯಿಲೆಗಳ ಜೊತೆಗೆ ಹೃದ್ರೋಗ ಮತ್ತು ಪಾರ್ಶ್ವವಾಯುವಿನಂತಹ ಸಾಂಕ್ರಾಮಿಕವಲ್ಲದ ಕಾಯಿಲೆಗಳೂ ಹೆಚ್ಚಾಗುತ್ತಾ ದೊಡ್ಡ ಹೊರೆಯಾಗುತ್ತಿವೆ. ಇವನ್ನು 'ಶ್ರೀಮಂತರ ಕಾಯಿಲೆ' ಎಂದು ಕರೆಯಲಾಗುತ್ತಿತ್ತು. ಆದರೆ ವಾಸ್ತವದಲ್ಲಿ, ಇವು ಬಡವ- ಬಲ್ಲಿದ, ನಗರ- ಗ್ರಾಮೀಣ ಜನರನ್ನು ಬಹುತೇಕ ಸಮಾನ ಪ್ರಮಾಣದಲ್ಲೇ ಕಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಪ್ರವಾಹ ಹಾಗೂ ಬಿಸಿಗಾಳಿಯಂತಹ ಹವಾಮಾನ ಬದಲಾವಣೆಗೆ ಸಂಬಂಧಿಸಿದ ನೈಸರ್ಗಿಕ ಪ್ರಕೋಪಗಳು ಹೆಚ್ಚಾಗುತ್ತಿದ್ದು, ತಮ್ಮದೇ ಆದ ಆರೋಗ್ಯ ಸವಾಲುಗಳನ್ನು ಹೊತ್ತು ತರುತ್ತಿವೆ.

ಆರೋಗ್ಯ ವಲಯಕ್ಕೆ ದೊರೆಯುತ್ತಿರುವ ಬಜೆಟ್ ಅನುದಾನದಲ್ಲಿ ಏರಿಕೆ ಆಗುತ್ತಿಲ್ಲದ ಸಂದರ್ಭದಲ್ಲಿ ಈ ಎಲ್ಲ ಬದಲಾವಣೆಗಳೂ ಆಗುತ್ತಿವೆ. ಸಾಂಕ್ರಾಮಿಕದ ಸಂದರ್ಭದಲ್ಲಿ ಕಲಿತ ಕಹಿ ಪಾಠಗಳ ನಡುವೆಯೂ ಆರೋಗ್ಯ ವಲಯಕ್ಕೆ ಅನುದಾನ ಹಂಚಿಕೆಯು ಜಿಡಿಪಿಯ ಶೇಕಡ 1ರ ಪ್ರಮಾಣದಲ್ಲೇ ಇದೆ. ಇದನ್ನು ಶೇಕಡ 2.5ರಿಂದ ಶೇ 3ಕ್ಕೆ ಏರಿಸಬೇಕೆಂದು ರಾಷ್ಟ್ರೀಯ ಆರೋಗ್ಯ ನೀತಿಯು (2017) ಶಿಫಾರಸು ಮಾಡಿದ್ದರೂ ಪರಿಸ್ಥಿತಿ ಬದಲಾಗಿಲ್ಲ. ತೀವ್ರತರನಾದ ಆರೋಗ್ಯ ಸಮಸ್ಯೆಗಳಿಗೆ ಆಗುವ ದುಬಾರಿ ವೆಚ್ಚಕ್ಕೆ 'ಆಯುಷ್ಮಾನ್ ಭಾರತ್' ಯೋಜನೆಯ ಮೂಲಕ ಆರೋಗ್ಯ ವಿಮೆ ಒದಗಿಸಿರುವುದು ಸ್ವಾಗತಾರ್ಹ. ಆದರೆ ಇಲ್ಲಿಯೂ ವಿಮಾರಕ್ಷೆಯು ಅಸಮವಾಗಿದೆ. ಆರೋಗ್ಯ ವಲಯದಲ್ಲಿ ವಿವಿಧ ಬಗೆಯ ಸೇವೆಗಳನ್ನು ಒದಗಿಸುತ್ತಿರುವ ಖಾಸಗಿ ಕಂಪನಿಗಳ ವ್ಯಾಪ್ತಿ ವಿಸ್ತರಿಸಿದ್ದು, ಆರೋಗ್ಯ 'ಪಾಲನೆ'ಯಿಂದ ಆರೋಗ್ಯ 'ವಿಮಾ ರಕ್ಷಣೆ'ಗೆ ಒತ್ತು ದೊರೆತಿದೆ. ಅಂದರೆ, ತಾಯಿ ಹಾಗೂ ಮಗುವಿನ ಆರೋಗ್ಯ ಹಾಗೂ ರೋಗ ತಡೆಗೆ ಅಗತ್ಯವಿರುವ ಸೇವೆಗಳು ಇನ್ನಷ್ಟು ಹಿಂದಕ್ಕೆ ಸರಿಯುತ್ತಿವೆ.

ಆರೋಗ್ಯ ಪರಿಣಾಮಗಳ ಪ್ರಮುಖ ಸೂಚ್ಯಂಕಗಳಾದ ಮಾತೃ ಹಾಗೂ ಶಿಶುಮರಣ ಮತ್ತು ಆಯುಷ್ಯದ ಕುರಿತಾದ ಅಂಕಿಅಂಶಗಳು ಉತ್ತೇಜನಕಾರಿಯಾಗಿದ್ದರೂ ಇವು, ಜಾತಿ, ವರ್ಗ, ಲಿಂಗ, ವಯಸ್ಸು ಹಾಗೂ ಪ್ರದೇಶವನ್ನು ಆಧರಿಸಿದ ಪ್ರಮುಖ ಅಸಮಾನತೆಗಳನ್ನು ಮರೆಮಾಚುತ್ತಿವೆ. ತೀರಾ ಇತ್ತೀಚಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯು (ಎನ್‌ಎಫ್‌ಎಚ್‌ಎಸ್-5, 2019-2021) ಇದಕ್ಕೆ ಬಹಳಷ್ಟು ನಿದರ್ಶನಗಳನ್ನು ಒದಗಿಸುತ್ತದೆ. ಉದಾಹರಣೆಗೆ, ಶೇಕಡ 55ರಷ್ಟು ಗ್ರಾಮೀಣ ಮಹಿಳೆಯರು ಮಾತ್ರ ಪ್ರಸವಪೂರ್ವದಲ್ಲಿ ನಾಲ್ಕು ಅಥವಾ ಹೆಚ್ಚಿನ ಬಾರಿ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿರುತ್ತಾರೆ. ಆದರೆ ನಗರಗಳ ಮಹಿಳೆಯರಲ್ಲಿ ಈ ಪ್ರಮಾಣ ಶೇಕಡ 70. ಆರೋಗ್ಯ ಸೇವೆಗಳಿಗಾಗಿ, ವಿಶೇಷವಾಗಿ ಔಷಧಗಳಿಗಾಗಿ ಸ್ವಂತ ಹಣವನ್ನು ಖರ್ಚು ಮಾಡುವ ಕಾರಣದಿಂದ ಸುಮಾರು 5.5 ಕೋಟಿ ಭಾರತೀಯರು ಬಡತನಕ್ಕೆ ಜಾರುತ್ತಿದ್ದು, ಸುಮಾರು ಶೇಕಡ 18ರಷ್ಟು ಕುಟುಂಬಗಳು ವಾರ್ಷಿಕವಾಗಿ ಮಿತಿಮೀರಿದ ಆರೋಗ್ಯ ವೆಚ್ಚಗಳನ್ನು ಭರಿಸುತ್ತಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅಂದಾಜು ಮಾಡಿದೆ. ವರಮಾನ ಅಥವಾ ಆದಾಯದಲ್ಲಿ ಅಸಮಾನತೆಯು ತೀವ್ರವಾಗಿ ಬೆಳೆಯುತ್ತಿದೆ ಎಂಬುದನ್ನು ಅಂಕಿಅಂಶಗಳು ಸ್ಪಷ್ಟವಾಗಿ ತೋರಿಸುತ್ತಿರುವ ಸಂದರ್ಭದಲ್ಲಿ ಇದನ್ನು ಗ್ರಹಿಸಬೇಕು.



ಸಮುದಾಯ ಸಂಘಟನೆಗಳು ವಿವಿಧ ಮಾರ್ಗಗಳ ಮೂಲಕ ಈ ಅಂತರಗಳನ್ನು ಮುಚ್ಚಲು ಯತ್ನಿಸುತ್ತಿವೆ. ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎನ್‌ಜಿಒಗಳು, ಪೀಪಲ್ಸ್ ಸೈನ್ಸ್ ಆಂದೋಲನ, ಸ್ತ್ರೀವಾದಿ ಸಂಘಟನೆಗಳು ರಾಷ್ಟ್ರವ್ಯಾಪಿ ಜಾಲಗಳ ಒಕ್ಕೂಟವಾದ 'ಜನಸ್ವಾಸ್ಥ್ಯ ಅಭಿಯಾನ'ದಂತಹ ಗುಂಪುಗಳೊಂದಿಗೆ ಸೇರಿ, ಆರೋಗ್ಯ ಹಕ್ಕುಗಳನ್ನು ಕಾಪಾಡಿಕೊಳ್ಳುವ ದಿಸೆಯಲ್ಲಿ ಸರ್ಕಾರದ ನೀತಿಗಳ ಬದಲಾವಣೆಗಾಗಿ ನಡೆಸುವ ಪ್ರಯತ್ನವು ಇದರಲ್ಲಿ ಮುಖ್ಯವಾದುದು.


ಸರ್ಕಾರವನ್ನು ಉತ್ತರದಾಯಿಯಾಗಿಸಲು ಮುದ್ರಣ, ಎಲೆಕ್ಟ್ರಾನಿಕ್ ಹಾಗೂ ಸಾಮಾಜಿಕ ಮಾಧ್ಯಮಗಳ ಸಹಭಾಗಿತ್ವದಲ್ಲಿ ಇಂತಹ ಗುಂಪುಗಳು ತಮ್ಮ ಕೆಲಸಕ್ಕೆ ಬಲ ತಂದುಕೊಳ್ಳಬಹುದು. ಚಿಕಿತ್ಸಾ ಸೌಲಭ್ಯ ಆಧಾರಿತ ಸೇವೆಗಳು ಹಾಗೂ ಸಮುದಾಯ ಆರೈಕೆ ಸೇವೆಗಳನ್ನು ಒದಗಿಸುವಂತಹ ಎನ್‌ಜಿಒಗಳ ಮೂಲಕ, ವಿಶೇಷವಾಗಿ ಸರ್ಕಾರಿ ಸೇವೆಗಳು ಇಲ್ಲದ ಪ್ರದೇಶಗಳಲ್ಲಿ ಮಧ್ಯಪ್ರವೇಶಿಸಿ ಕೆಲಸ ಮಾಡಲು ಸಮುದಾಯ ಸಂಘಟನೆಗಳಿಗೆ ಅವಕಾಶವಿದೆ.

ಇತ್ತೀಚೆಗೆ, ಸಾಂಕ್ರಾಮಿಕದ ಸಂದರ್ಭದಲ್ಲಿ, ವ್ಯಕ್ತಿಗತ ನೆಲೆಯಲ್ಲಿ ತೀರಾ ಬಡವರು ಹಾಗೂ ಕೈಲಾಗದವರಿಗೆ ಆಹಾರ, ಔಷಧ ಹಾಗೂ ಹಣಕಾಸು ಸಹಾಯ ಒದಗಿಸಲು ಜನಸಾಮಾನ್ಯರೂ ಮುಂದೆ ಬಂದಿದ್ದರು. ಶೈಕ್ಷಣಿಕ ಸಂಶೋಧನೆ ಮತ್ತು ನಿರ್ದಿಷ್ಟ ಗುಂಪುಗಳನ್ನು ಗುರಿಯಾಗಿಸಿಕೊಂಡು ಕೆಲಸ ಮಾಡುವ ಅಗತ್ಯವೂ ಇದೆ. ಸರ್ಕಾರದ ಸೇವೆ ತಲುಪದೇ ಇರುವೆಡೆ ಸೇವೆಗಳನ್ನು ಒದಗಿಸಲು ಟಾಟಾ ಟ್ರಸ್ಟ್ ಅಥವಾ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದಂತಹ ದೊಡ್ಡ ದಾನಿ ಸಂಸ್ಥೆಗಳ ಮಧ್ಯ ಪ್ರವೇಶವೂ ಹೆಚ್ಚುತ್ತಿರುವುದು ಗಮನಾರ್ಹ.

ಮಿತ ಸಂಪನ್ಮೂಲಗಳ ಸಂದರ್ಭದಲ್ಲಿಯೂ ಆರೋಗ್ಯ ಸೇವೆಗಳಲ್ಲಿನ ಅಂತರವನ್ನು ಹೇಗೆ ತಗ್ಗಿಸಬಹುದು ಎಂಬುದನ್ನು ಸಮುದಾಯ ಸಂಘಟನೆಗಳು ತೋರಿಸಿಕೊಡುವಲ್ಲಿ ಸಫಲವಾಗಿವೆ. ದುರ್ಬಲ ಸಮುದಾಯಗಳಿಗೆ ಹತ್ತಿರವಾಗಿರುವ ಮೂಲಕ, ಜನಕೇಂದ್ರಿತವಾದ ಹಾಗೂ ಸರ್ಕಾರದ 'ಎಲ್ಲರಿಗೂ ಒಂದೇ ಬಗೆಯ ಪರಿಹಾರ' ಎಂಬಂಥ ಏಕರೂಪಿ ವಿಧಾನವನ್ನು ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಬದಲಿಸುವಂತಹ ಸಾಧ್ಯತೆಗಳನ್ನು ರೂಪಿಸಲು ಸಮುದಾಯ ಸಂಘಟನೆಗಳಿಗೆ ಸಾಧ್ಯವಾಗಿದೆ.

ಆದರೆ, ಹೊಣೆಗಾರಿಕೆಯನ್ನು ಪ್ರಭುತ್ವ ಕಳಚಿಕೊಳ್ಳುವುದು ಹಾಗೂ ಸಮುದಾಯ ಸಂಘಟನೆಗಳು ನಂತರದಲ್ಲಿ ಈ ಹೊಣೆಯನ್ನು ನಿಭಾಯಿಸುವುದು ಅಪೇಕ್ಷಣೀಯವೇ ಎಂಬುದನ್ನು ಕೇಳಿಕೊಳ್ಳಬೇಕಾಗಿದೆ. ಆದರೆ, ಸರ್ಕಾರ ವಹಿಸಬೇಕಾದ ಪಾತ್ರವನ್ನು ನಿಭಾಯಿಸಲು ಇರುವ ಸಂಘಟನೆಗಳು ಇವು ಅಲ್ಲ. ಸರ್ಕಾರದ ಜೊತೆ ಸೇರಿ ಪ್ರಗತಿಪರ ಹಾಗೂ ಸ್ಪಂದನಶೀಲ ಆಡಳಿತ ಒದಗಿಸಲು ಹಾಗೂ ಸಮಸ್ಯೆಗಳನ್ನು ಹೇಗೆ ಬಗೆಹರಿಸಬಹುದೆಂಬ ಬಗ್ಗೆ ಒಳನೋಟಗಳನ್ನು ನೀಡಲು ಈ ಸಂಘಟನೆಗಳಿಗೆ ಸಾಧ್ಯವಾದಲ್ಲಿ ಅದು ಹೆಚ್ಚು ಪರಿಣಾಮಕಾರಿ. ಹೀಗಿರುವಾಗ, ಪರಿಣಾಮಕಾರಿಯಾದ ಸರ್ಕಾರಿ ಆರೋಗ್ಯ ವ್ಯವಸ್ಥೆಗೆ ಪರ್ಯಾಯ ಯಾವುದೂ ಇಲ್ಲ. ಆರೋಗ್ಯ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಪರಿಹರಿಸುವ ಸಲುವಾಗಿ ಸರ್ಕಾರವು ಆರೋಗ್ಯ ವಲಯವನ್ನು ತನ್ನ ಆಡಳಿತದ ಪ್ರಮುಖ ಕ್ಷೇತ್ರಗಳಲ್ಲಿ ಒಂದು ಎಂದು ಪುನರ್‌ಪ್ರತಿಪಾದಿಸುವುದು ನಿರ್ಣಾಯಕವಾಗಿದೆ.

ಚುರುಮುರಿ



ದುಡ್ಡಾಲದ ಮರ!

• ತುರುವೇಕೆರೆ ಪ್ರಸಾದ್

ಹರಟೆಕಟ್ಟೇಲಿ ಎಸಿಬಿ ರೈಡ್ ಬಗ್ಗೆ ಚರ್ಚೆ ನಡೀತಿತ್ತು: 'ಪರವಾಗಿಲ್ಲ ಕಣೋ, ಎಸಿಬಿ ರೈಡೂ ಈಚೆಗೆ ವೈವಿಧ್ಯಮಯವಾಗಿದೆ' ಎಂದ ಪರ್ಮೇಶಿ.

'ಎಲ್ಲಾ ಲಂಚನೇ! ಅದರಲ್ಲಿ ವೈವಿಧ್ಯಮಯ ಏನ್ ಬಂತು ಮಣ್ಣು' ಕೊಂಕು ತೆಗೆದ ಈರಭದ್ರ.

'ಲಂಚನೇ ಆದ್ರೂ ಅದನ್ನ ವಿವಿಧ ರೂಪಗಳಲ್ಲಿ, ವಿವಿಧ ಆಕಾರಗಳಲ್ಲಿ, ವಿವಿಧ ಪಾತ್ರಗಳಲ್ಲಿ ಅಡಗಿಸಿಟ್ಟಿರೋದು ವೈವಿಧ್ಯನೇ ಅಲ್ಲವಾ?' ಎಂದ ಜಾಣೇಶ.

'ಹೌದೌದು, ಮನೆ ಕಬೋರ್ಡು, ಕಮೋಡು, ಕಾರಿನ ಡ್ಯಾಶ್‌ಬೋರ್ಡು, ಬ್ಯಾಂಕು, ಬಂಕು, ನೀರಿನ ಪೈಪು, ಕಸದ ತೊಟ್ಟಿ, ಕಾರ್ ಟೈರು, ಕೊನೆಗೆ ಕಿಡ್ನಿ, ಲಿವರು, ಹೊಟ್ಟೆ, ಲಂಗ್ಸಲ್ಲೂ ಚಿನ್ನ, ದುಡ್ಡು ಇಡೋ ಹೊಸ ಮಾರ್ಗಗಳನ್ನ ಆವಿಷ್ಕಾರ ಮಾಡಿರೋದು ಏಕತೆಯಲ್ಲಿ ವೈವಿಧ್ಯನೇ ಬಿಡು'.

'ನಾನು ಹೇಳಿದ್ದು ಈ ವೈವಿಧ್ಯ ಅಲ್ಲ' ಗಂಭೀರವಾಗಿ ಗುಡುಗಿದ ಪರ್ಮೇಶಿ.

'ಮತ್ತೆ ಇನ್ಯಾವ ವೈವಿಧ್ಯ?'

'ನೋಡ್ರೋ, ಮೊದ್ಲೆಲ್ಲಾ ಬರೀ ಇಂಜಿನಿಯರ್‌ಗಳು, ಪೊಲೀಸ್ನೋರು, ಸಬ್ ರಿಜಿಸ್ಟ್ರಾರ್‌ಗಳು ಸಿಕ್ಕಾಪಟ್ಟೆ ಆಸ್ತಿ ಮಾಡಿ ಸಿಕ್ಕಿಬೀಳ್ತಿದ್ರು. ಈಗ ನೋಡಿ, ಅವರ ಜೊತೆಗೆ ಬೇರೆಯವರಿಗೂ ಇದರಲ್ಲಿ ಪ್ರಾತಿನಿಧ್ಯ ಸಿಕ್ತಿದೆ. ಬರೀ ಆಸ್ತಿ ನೊಂದಣಿ ಮಾಡೋ ರಿಜಿಸ್ಟ್ರಾರ್‌ಗಳು ಮಾತ್ರ ಈ ಗುಂಪಲ್ಲಿದ್ರು. ಈಗ ಮೌಲ್ಯಮಾಪನ ಮಾಡೋ ಯೂನಿವರ್ಸಿಟಿ ರಿಜಿಸ್ಟ್ರಾರ್‌ಗಳೂ ಅಪಮೌಲ್ಯ ಆಗೋಗಿದಾರೆ. ಮಹಿಳಾ ಕಲ್ಯಾಣದೋರೂ ಲಂಚ ಅಭಿವೃದ್ಧಿಗೆ ಕೈ ಜೋಡ್ಸಿದಾರೆ'.

'ಹೌದೌದು, ಲಾಲೂ ತರ ಮೇವು ತಿನ್ನೋರೂ ಪಶು ವಿ.ವಿ.ಲಿ ತಗಲಾಕ್ಕೊಂಡಿದಾರೆ'.

'ಅದೇನ್ ಹೇಳ್ತೀಯ? ಬಿಡಿಎ ತೋಟದ ಮಾಲಿ ಒಬ್ರು ಆದಾಯ ಮೀರಿ ಸೈಟು, ಬಂಗ್ಲೆ ಎಲ್ಲಾ ಮಾಡ್ಕೊಂಡಿದಾರೆ. ದುಡ್ಡೇನು ಮರದಿಂದ ಉದುರ್ತಾ ಅಂತಿದ್ರಲ್ಲ, ನೋಡು ಈಗ ಅದನ್ನೂ ನಿಜ ಮಾಡಿ ಎಂತಹ ಸಾಧನೆ ಮಾಡಿದಾರೆ. ದೊಡ್ಡಾಲದ ಮರದ ಥರ 'ದುಡ್ಡಾಲದ ಮರ' ಅನ್ನೋ ತಳಿನೇ ಕಂಡ್‌ಹಿಡಿತಾರೇನೋ?'

'ಮಾಲಿಯಾದರೇನು ಶಿವ, ಗಾಲಿಯಾದರೇನು ಶಿವ ಎಲ್ಲೆಲ್ಲೂ ಲಂಚವೇ ಶಿವ' ಎಂದು ಹಾಡುತ್ತಾ ಪಂಚೆ ಕೊಡವಿ ಮೇಲೆದ್ದ ಜಾಣೇಶ.

ಸಂಗತ

ಕನ್ನಡದಲ್ಲಿ ವಿಜ್ಞಾನ: ಬೆಸೆಯುವ ಕೆಲಸವಾಗಲಿ

ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳನ್ನು ಕನ್ನಡದಲ್ಲಿ ಕಲಿಸಲು ಹೊರಡುವ ಪ್ರಯತ್ನಗಳು ದ್ವೀಪಗಳನ್ನು ನಿರ್ಮಿಸದೆ ಸೇತುವೆಗಳಾಗಿ ಮಾರ್ಪಡಬೇಕಾದ ಅಗತ್ಯವಿದೆ

• ಎಚ್.ಕೆ.ಶರತ್


ಕೇಂದ್ರ ಶಿಕ್ಷಣ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಸಿಎಸ್‌ಟಿಟಿ (Commission for Scientific and Technical Terminology) ಉಸ್ತುವಾರಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಹಿಂದಿ-ಇಂಗ್ಲಿಷ್-ಕನ್ನಡ ಮೂರು ಭಾಷೆಗಳಲ್ಲಿ ಪದಕೋಶ ರೂಪಿಸುವ ಯೋಜನೆ ಇನ್ನೇನು ಪೂರ್ಣಗೊಳ್ಳುವ ಹಂತದಲ್ಲಿದೆ. ವಿಜ್ಞಾನ- ತಂತ್ರಜ್ಞಾನದ ವಿಷಯಗಳಲ್ಲಿ ಬಳಸುವ ಇಂಗ್ಲಿಷ್ ಪದಗಳಿಗೆ ಸಮಾನಾರ್ಥಕ ಪದ ಹುಡುಕುವ ಅಥವಾ ಸೂಚಿಸುವ ಕಾರ್ಯಕ್ಕೆ ರಾಜ್ಯದ ವಿವಿಧ ಪದವಿ ಹಾಗೂ ಎಂಜಿನಿಯರಿಂಗ್ ಕಾಲೇಜುಗಳ ಪ್ರಾಧ್ಯಾಪಕರನ್ನು ಬಳಸಿಕೊಳ್ಳಲಾಗಿದೆ.

ಎಂಜಿನಿಯರಿಂಗ್ ಪದವಿ ಮತ್ತು ಡಿಪ್ಲೊಮಾ ಕೋರ್ಸುಗಳನ್ನು ಕನ್ನಡ ಮಾಧ್ಯಮದಲ್ಲಿ ಕಲಿಸುವ ಕುರಿತು ಚರ್ಚೆಯಾಗುತ್ತಿರುವ ಹೊತ್ತಿನಲ್ಲಿ ಸಿಎಸ್‌ಟಿಟಿ ತಯಾರಿಸುತ್ತಿರುವ ತ್ರಿಭಾಷಾ ಪದಕೋಶ ಮಹತ್ವಪೂರ್ಣವಾದುದು. ಆದರೆ, ಈ ಪ್ರಕ್ರಿಯೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳನ್ನು ಬೋಧಿಸುವ ಅಧ್ಯಾಪಕರನ್ನು ಮಾತ್ರ ಒಳಗೊಂಡಿರುವುದರಿಂದ ಪದಕೋಶದ ಗುಣಮಟ್ಟದ ಕುರಿತು ಅನುಮಾನಗಳು ವ್ಯಕ್ತವಾಗಿವೆ. ಈಗಾಗಲೇ ರೂಪಿಸಲಾಗಿರುವ ಪದಕೋಶಗಳು, ಅನುವಾದಿತ ಮತ್ತು ನೇರವಾಗಿ ಕನ್ನಡದಲ್ಲೇ ಬರೆಯಲಾಗಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಪುಸ್ತಕಗಳೆಲ್ಲವನ್ನೂ ಅಂತರ್ಜಾಲ ತಾಣವೊಂದರಲ್ಲಿ ಸುಲಭವಾಗಿ ಲಭ್ಯವಾಗುವಂತೆ ಮಾಡಲು ಸರ್ಕಾರ ಮುತುವರ್ಜಿ ತೋರಬೇಕಿದೆ.

ಕೆಲ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ಬಾರಿ ಪ್ರಾಯೋಗಿಕವಾಗಿ ಕನ್ನಡ ಮಾಧ್ಯಮದಲ್ಲಿ ಎಂಜಿನಿಯರಿಂಗ್ ಶಿಕ್ಷಣ ನೀಡಲು ಮುಂದಾಗಿದ್ದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಇದಕ್ಕೆ ಪೂರಕವಾಗಿ ತಯಾರಿಸಿ ಇಟ್ಟುಕೊಂಡಿದ್ದ ಪಠ್ಯ ಪುಸ್ತಕಗಳನ್ನು ಆಸಕ್ತರು ಓದು ಮತ್ತು ಪರಾಮರ್ಶನಕ್ಕೆ ಸುಲಭವಾಗಿ ಲಭ್ಯವಾಗಿಸುವ ಕೆಲಸ ಮಾಡಬಾರದೇ? ತನ್ನದೇ ವೆಬ್‌ಸೈಟ್‌ನಲ್ಲಾದರೂ ಹಾಕಬಾರದೇ? ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಇಂಗ್ಲಿಷ್ ಅಥವಾ ಕನ್ನಡ ಎರಡರಲ್ಲಿ ತಮಗೆ ಸೂಕ್ತವೆನಿಸುವ ಭಾಷೆಯಲ್ಲಿ ಉತ್ತರ ಬರೆಯುವ ಆಯ್ಕೆಯನ್ನು ಈ ಬಾರಿ ನೀಡಲಾಗಿದೆ. ಇದೇ ಆಯ್ಕೆಯನ್ನು ಮುಂದೆ ಎಂಜಿನಿಯರಿಂಗ್ ಸೇರಿದಂತೆ ಉಳಿದ ವಿಜ್ಞಾನ ಮತ್ತು ತಂತ್ರಜ್ಞಾನ ಪದವಿಗಳಿಗೂ ವಿಸ್ತರಿಸುವ ಪ್ರಯೋಗ ಮಾಡಲು ಹೊರಟಾಗ ಅದಕ್ಕೆ ಪೂರಕ ಸಂಪನ್ಮೂಲಗಳು ವಿದ್ಯಾರ್ಥಿಗಳಿಗೂ ಸುಲಭವಾಗಿ ಲಭ್ಯವಾಗುವಂತೆ ಇದ್ದರೆ ಒಳಿತಲ್ಲವೇ?

ವಿಜ್ಞಾನ ವಿಷಯಗಳಲ್ಲಿ ಇಂಗ್ಲಿಷ್ ಪದಗಳಿಗೆ ಪರ್ಯಾಯವಾಗಿ ಪ್ರಸ್ತುತ ಬಳಸಲಾಗುತ್ತಿರುವ ಕನ್ನಡ ಪದಗಳು ವಿದ್ಯಾರ್ಥಿಗಳ ಪಾಲಿಗೆ ಕಬ್ಬಿಣದ ಕಡಲೆಯಾಗಿರುವುದು ಕೂಡ ಬಹುಚರ್ಚಿತ ಅಂಶವೆ. ಇದನ್ನು ಸರಿಪಡಿಸುವ ಪ್ರಯತ್ನವನ್ನು ಕೆಲವರಾದರೂ ಮಾಡುತ್ತಿರುವುದು ಆಶಾದಾಯಕ ಬೆಳವಣಿಗೆ. ಕನ್ನಡದಲ್ಲಿ ವಿಜ್ಞಾನ- ತಂತ್ರಜ್ಞಾನ ಹೇಳಿಕೊಡುವ ಸಲುವಾಗಿ ನಡೆಯುವ ಸರ್ಕಾರಿ ಕೆಲಸಗಳು ಆಯಾ ಸಂಸ್ಥೆ ಮತ್ತು ಶೈಕ್ಷಣಿಕ ವಲಯಕ್ಕೆ ಮಾತ್ರ ಸೀಮಿತಗೊಳ್ಳದೆ, ಇದಕ್ಕಾಗಿ ಸ್ವಂತ ಆಸಕ್ತಿಯಿಂದ ಶ್ರಮಿಸುತ್ತಿರುವವರನ್ನು ಸಹಭಾಗಿಯಾಗಿಸಿಕೊಳ್ಳುವ ಅಗತ್ಯವಿದೆ. 'ಹೊನಲು.ನೆಟ್' (https://honalu.net/) ಈ ದಿಸೆಯಲ್ಲಿ ಒಂದು ದಶಕದಿಂದ ಗಮನಾರ್ಹ ಕೆಲಸ ಮಾಡುತ್ತ ಬಂದಿದೆ.

ಸದ್ಯ ಸಿಎಸ್‌ಟಿಟಿ ಕೈಗೊಂಡಿರುವ ತ್ರಿಭಾಷಾ ಪದಕೋಶ ರೂಪಿಸುವ ಯೋಜನೆಗೆ ಪೂರಕವಾಗಿ ಬಳಸಲಾಗುತ್ತಿರುವುದು, ಅಂತರ್ಜಾಲದಲ್ಲಿ ಲಭ್ಯವಿರುವ ಮೈಸೂರು ವಿಶ್ವವಿದ್ಯಾಲಯದ ನಿಘಂಟು ಮತ್ತು ಗೂಗಲ್ ಟ್ರಾನ್ಸ್‌ಲೇಟರ್. ಗೂಗಲ್ ನೆರವಿನಿಂದ ಮಾಡಲಾದ ಅನುವಾದದ ಗುಣಮಟ್ಟ ಹೇಗಿರಬಹುದು ಎಂಬುದನ್ನು ಯಾರಾದರೂ ಊಹಿಸಬಹುದು. ಉದಾಹರಣೆಗೆ, ಇಂಗ್ಲಿಷ್‌ನ 'Torque' ಪದಕ್ಕೆ ಹೊನಲು.ನೆಟ್ ತಂಡ 'ತಿರುಗುಬಲ' ಪದ ಬಳಸಿದರೆ, ಮೈಸೂರು ವಿಶ್ವವಿದ್ಯಾಲಯದ ನಿಘಂಟಿನಲ್ಲಿ 'ಭ್ರಾಮಕ' ಎಂದಿದೆ. ಗೂಗಲ್ ಟ್ರಾನ್ಸ್‌ಲೇಟರ್ ಯಥಾವತ್ತು ಪದ ('ಟಾರ್ಕ್')



ನೀಡುತ್ತಿದೆ. ಇಂಗ್ಲಿಷ್‌ನ 'Power' ಪದಕ್ಕೆ ನಿಘಂಟು ಹಾಗೂ ಗೂಗಲ್ ಟ್ರಾನ್ಸ್‌ಲೇಟರ್ 'ಶಕ್ತಿ', 'ಸಾಮರ್ಥ್ಯ' ಪದಗಳನ್ನು ಸೂಚಿಸಿದರೆ, ಹೊನಲು.ನೆಟ್ ತಂಡ 'ಕಸುವು' ಪದ ಬಳಸುತ್ತಿದೆ.

ಮೈಸೂರು ವಿಶ್ವವಿದ್ಯಾಲಯವು ನಿಘಂಟನ್ನು ಯಾರಾದರೂ ಸುಲಭವಾಗಿ ಬಳಸಿಕೊಳ್ಳುವ ಸಾಧ್ಯತೆಯನ್ನು ಅಂತರ್ಜಾಲ ತಾಣದ ಮೂಲಕ ತೆರೆದಿಟ್ಟಿದೆ. ಇದೇ ರೀತಿ ಎಲ್ಲ ನಿಘಂಟು ಮತ್ತು ಸಂಪನ್ಮೂಲಗಳೂ ಸುಲಭವಾಗಿ ಲಭ್ಯವಾದರೆ, ಮುಂದೆ ಕನ್ನಡದಲ್ಲಿ ವಿಜ್ಞಾನ ಕಲಿಸುವ ಪ್ರಯತ್ನ ಪರಿಣಾಮಕಾರಿಯಾಗಲು ನೆರವಾಗಲಿದೆ. ಸಿಎಸ್‌ಟಿಟಿ ತಯಾರಿಸುತ್ತಿರುವ ತ್ರಿಭಾಷಾ ಪದಕೋಶವನ್ನು ಒಕ್ಕೂಟ ಸರ್ಕಾರದ ಅಡಿ ಕಾರ್ಯನಿರ್ವಹಿಸುವ ನೇಮಕಾತಿ ಆಯೋಗಗಳು ಬಳಸುವ ಸಾಧ್ಯತೆ ಇರುವುದರಿಂದ ಅದರ ಅಂತಿಮ ಕರಡನ್ನು ಸಾರ್ವಜನಿಕರ ಎದುರು ಇರಿಸಿ, ಆಕ್ಷೇಪಗಳನ್ನು ಆಹ್ವಾನಿಸಿ, ಅವುಗಳ ಪರಾಮರ್ಶೆಯ ನಂತರವಷ್ಟೇ ಬಳಕೆಗೆ ಪರಿಗಣಿಸುವಂತೆ ರಾಜ್ಯ ಸರ್ಕಾರವು ಸಿಎಸ್‌ಟಿಟಿ ಮೇಲೆ ಒತ್ತಡ ಹೇರಬೇಕಿದೆ. ಇಲ್ಲವಾದರೆ ಒಕ್ಕೂಟ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುವ ನೇಮಕಾತಿ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯುವವರಿಗೂ ಮುಂಬರುವ ದಿನಗಳಲ್ಲಿ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ.

ವಾಚಕರ ವಾಣಿ

ಅಪಾಯಕಾರಿ ದುಸ್ಸಾಹಸ ಸಲ್ಲ

ನಟ ದಿಗಂತ್ ಅವರು ಗೋವಾ ಪ್ರವಾಸದ ವೇಳೆ ಬ್ಯಾಕ್‌ಫ್ಲಿಪ್ ಮಾಡುವಾಗ ಬೆನ್ನುಮೂಳೆಗೆ ಪೆಟ್ಟಾಗಿ ಆಸ್ಪತ್ರೆ ಸೇರಿದ್ದಾರೆ. ಇಂತಹ ಅಪಾಯಕಾರಿ ಜಿಗಿತಗಳನ್ನು ತರಬೇತಿ ಇಲ್ಲದೆ ಕೇವಲ ರೀಲ್ಸ್ ಮಾಡಲು ಹಾಗೂ ಶಾರ್ಟ್ ವಿಡಿಯೊಗಳಿಗಾಗಿ ಅನೇಕ ಯುವಕರು ಮಾಡುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ ಕೆಲಸವಾಗಿದೆ. ತರಬೇತಿ ಪಡೆಯದೆ ಇಂತಹ ದುಸ್ಸಾಹಸಗಳಿಗೆ ಯುವಜನ ಕೈ ಹಾಕಬಾರದು.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಭ್ರಷ್ಟಾಚಾರ: ಆಡಳಿತ ಪಕ್ಷ ಹೊರತಾಗಿದೆಯೇ?

ವಿವಿಧ ಪ್ರಕರಣಗಳಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಡಿ.ಕೆ.ಶಿವಕುಮಾರ್ ಮುಂತಾದವರನ್ನು ವಿಚಾರಣೆಗೆ ಒಳಪಡಿಸುವ ಬಗ್ಗೆ ದೇಶದಲ್ಲಿ ಭ್ರಷ್ಟಾಚಾರ ವಿರೋಧಿಗಳ ತಕರಾರು ಖಂಡಿತಾ ಇರುವುದಿಲ್ಲ. ನಿಜವಾಗಿಯೂ ಅವರೆಲ್ಲಾ ಆಯಾ ಪ್ರಕರಣಗಳಲ್ಲಿ ತಪ್ಪಿತಸ್ಥರೇ ಆಗಿದ್ದರೆ ಅವರಿಗೆ ತಕ್ಕ ಶಿಕ್ಷೆ ಆಗಲೇಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಅದರ ಬಗ್ಗೆ ಯಾರಾದರೂ ವಿರೋಧ ವ್ಯಕ್ತಪಡಿಸಿದರೆ ಅದು ಒಪ್ಪುವಂಥದ್ದೂ ಅಲ್ಲ. ಆದರೆ ಪ್ರಶ್ನೆ ಇರುವುದು, ಆಡಳಿತ ಪಕ್ಷಕ್ಕೆ ಸೇರಿದ ಯಾರನ್ನೂ ಮುಟ್ಟದೆ ಬರೀ ವಿರೋಧ ಪಕ್ಷದವರನ್ನೇ ಇ.ಡಿ. ಅಧಿಕಾರಿಗಳು ತಮ್ಮ ಗುರಿಯನ್ನಾಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುವುದರ ಬಗ್ಗೆ. ಹಾಗಾದರೆ ಆಡಳಿತ ಪಕ್ಷದವರು ಇದೆಲ್ಲದರಿಂದ ಹೊರತಾದವರೇ? ಅವರ ಭ್ರಷ್ಟಾಚಾರ ಪ್ರಕರಣಗಳು ದಿನಾಲೂ ಕಣ್ಣಿಗೆ ರಾಚುವಂತೆ ಕಾಣುತ್ತಿದ್ದರೂ ಅವರನ್ನು ಮುಟ್ಟುವ ಧೈರ್ಯ ಇ.ಡಿ.ಗೆ ಏಕಿಲ್ಲ? ಇದರಿಂದ, ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಬೇಕಾದ ಇ.ಡಿ.ಯಂಥ ಸಂಸ್ಥೆಗಳು ಕೂಡ ಆಡಳಿತ ಪಕ್ಷದ ಕೈಗೊಂಬೆಯಂತೆ ವರ್ತಿಸುತ್ತಿವೆ ಎಂಬ ಅನುಮಾನ ಜನಸಾಮಾನ್ಯರಲ್ಲಿ ಬಲಗೊಂಡರೆ ಅಚ್ಚರಿಯೇನಿಲ್ಲ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಶಿಕ್ಷಕರ ವೇತನಕ್ಕೆ ದಿನಾಂಕ ನಿಗದಿಯಾಗಲಿ

ರಾಜ್ಯ ಸರ್ಕಾರವು ಪ್ರಾಥಮಿಕ ಶಾಲೆಯ ಅತಿಥಿ ಶಿಕ್ಷಕರಿಗೆ ₹ 7,500 ಮತ್ತು ಪ್ರೌಢಶಾಲೆಯ ಅತಿಥಿ ಶಿಕ್ಷಕರಿಗೆ ₹ 8,000 ಇದ್ದಂತಹ ವೇತನವನ್ನು ಕ್ರಮವಾಗಿ ₹ 10,000 ಮತ್ತು ₹ 10,500ಕ್ಕೆ ಹೆಚ್ಚಿಸಿ ಆದೇಶವನ್ನು ಹೊರಡಿಸಿದೆ. ಈ ವೇತನ ಕೂಡ ಅವರಿಗೆ ಕಡಿಮೆಯೇ ಆಗಿದೆ. ಏಕೆಂದರೆ, ಸರ್ಕಾರಿ ಕಾಯಂ ಹುದ್ದೆಯಲ್ಲಿರುವ ಶಿಕ್ಷಕರಂತೆ ಅವರು ಸಹ ಶಾಲೆಯಲ್ಲಿ ಸಕ್ರಿಯರಾಗಿ ಬೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಉದ್ಯೋಗ ಭದ್ರತೆ ಇಲ್ಲದೆ ಕಡಿಮೆ ವೇತನಕ್ಕೆ ಕಾರ್ಯನಿರ್ವಹಿಸುತ್ತಿದ್ದಾರೆ. ದುಬಾರಿ ಜೀವನವೆಚ್ಚದ ಈ ದಿನಮಾನಗಳಲ್ಲಿ ಇಷ್ಟು ಕಡಿಮೆ ವೇತನದಲ್ಲಿ ಕುಟುಂಬದ ಜವಾಬ್ದಾರಿ ನಿರ್ವಹಿಸುವುದು ತ್ರಾಸದಾಯಕ. ಅಗತ್ಯ ವಸ್ತುಗಳ ಬೆಲೆ ಗಗನಮುಖಿಯಾಗಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ, ಮನೆ ಬಾಡಿಗೆಗೆ ಹಾಗೂ ಇನ್ನಿತರ ಖರ್ಚುವೆಚ್ಚಕ್ಕೆ ಅವರಿಗೆ ಈ ವೇತನ ಸಾಕಾಗುವುದಿಲ್ಲ. ಆದ್ದರಿಂದ ವೇತನವನ್ನು ಇನ್ನೂ ಹೆಚ್ಚಿಸಬೇಕು ಮತ್ತು ಅವರಿಗೆ ವೇತನವನ್ನು ನೀಡಲು ಕಡ್ಡಾಯವಾಗಿ ದಿನಾಂಕವನ್ನು ನಿಗದಿಗೊಳಿಸಿ ಅನುಕೂಲ ಕಲ್ಪಿಸಬೇಕು.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

ಅಧಿಕಾರಿಯ ಹೃದಯವೈಶಾಲ್ಯ

ದಿನಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ಸುದ್ದಿಯೊಂದು ಸರ್ಕಾರಿ ಅಧಿಕಾರಿಯೊಬ್ಬರ ಹೃದಯ ವೈಶಾಲ್ಯಕ್ಕೆ ಸಾಕ್ಷಿಯಾಗಿದೆ. ದೀರ್ಘಕಾಲದಿಂದ ಗೈರುಹಾಜರಾಗಿದ್ದ ಕಾರಣಕ್ಕೆ ವಜಾಗೊಂಡಿದ್ದ ಚಾಲಕರೊಬ್ಬರನ್ನು, ಅವರ ಪುಟಾಣಿ ಮಗಳು ವಿವರಿಸಿದ ಮನೆಯ ಕಷ್ಟದ ಪರಿಸ್ಥಿತಿ ಕೇಳಿ ಮನಕರಗಿದ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅವರು ಕೆಲಸಕ್ಕೆ ಪುನರ್‌ನೇಮಕ ಮಾಡಿಕೊಂಡಿದ್ದಾರೆ. ಅವರ ಈ ನಡೆ ಶ್ಲಾಘನೀಯ.

ನೌಕರನ ಅಶಿಸ್ತನ್ನು ಮಾನವೀಯ ದೃಷ್ಟಿಯಿಂದ ಕ್ಷಮಿಸಿ, ಅವರನ್ನು ಮರುನೇಮಕ ಮಾಡಿದ್ದು ಸರ್ಕಾರಿ ಅಧಿಕಾರಿಗಳು ಹೇಗೆ ಪರಿಸ್ಥಿತಿಗೆ ತಕ್ಕಂತೆ ತಮ್ಮ ವಿವೇಚನಾ ಶಕ್ತಿಯನ್ನು ಬಳಸಿ, ಕ್ಷಮಾದಾನಕ್ಕೆ ಅನುವು ಮಾಡಿಕೊಡಬಹುದು ಎಂಬುದಕ್ಕೆ ನಿದರ್ಶನವಾಗಿದೆ. ವಜಾದಂತಹ ಕಠಿಣ ಕ್ರಮ ಎಲ್ಲ ಸಂದರ್ಭದಲ್ಲೂ ಸಮರ್ಥನೀಯವಲ್ಲ ಎಂದು ಮನಗಂಡು ತಮ್ಮ ಅಧಿಕಾರವನ್ನು ಸದ್ಬಳಕೆ ಮಾಡಿಕೊಂಡ ಅಧಿಕಾರಿಯ ನಡೆ ಮೆಚ್ಚುವಂತಹುದು. ಅಧಿಕಾರದ ಬಲದಿಂದ ಅಧೀನ ಸರ್ಕಾರಿ ನೌಕರರನ್ನು ವಿನಾಕಾರಣ ದಮನ ಮಾಡುವ ಮೇಲಧಿಕಾರಿಗಳು ಈ ಪ್ರಕರಣವನ್ನು ನೋಡಿಯಾದರೂ ಕಣ್ತೆರೆಯಲಿ.

ಬಿ.ಕೆ.ಮಂಜುನಾಥ್, ಬೆಂಗಳೂರು

'ಮಹಾ'ಸ್ಫೋಟ

ಭಿನ್ನ ಸಿದ್ಧಾಂತದ
ಜನರು ಸೇರಿ ಆಗಿತ್ತು
ಮಹಾ ಸರ್ಕಾರ ಅಘಾಡಿ
ಭಿನ್ನಾಭಿಪ್ರಾಯ ಬಂದು
ಅಲುಗಾಡುತ್ತಿದೆ
ಸರ್ಕಾರದ ಆ ಗಾಡಿ!

ಮಹಾಂತೇಶ ಮಾಗನೂರ
ಬೆಂಗಳೂರು

ಪುಸ್ತಕ ಕೊಂಡು ಓದಿ

ಪುಸ್ತಕ, ಪತ್ರಿಕೆಗಳನ್ನು ಕೊಂಡು ಓದುವ ಪ್ರವೃತ್ತಿ ಇತ್ತೀಚೆಗೆ ಕಡಿಮೆಯಾಗುತ್ತಾ ಬರುತ್ತಿರುವುದು ವಿಷಾದನೀಯ. ಯಾರ ಕೈಯಲ್ಲಿ ನೋಡಿದರೂ ಮೊಬೈಲ್ ಕಾಣುತ್ತದೆ. ಟಿ.ವಿಗಳಲ್ಲಿ ಬರುವ ಧಾರಾವಾಹಿಯ ಸುದ್ದಿಗಳಿಗೆ ಅತಿ ಹೆಚ್ಚು ಪ್ರಾಶಸ್ತ್ಯ ಸಿಗುತ್ತಿದೆ. ಮಕ್ಕಳಿಗೆ ಪೋಷಕರು ಬಾಲ್ಯದಿಂದಲೇ ಇವುಗಳ ಗೀಳು ಹಿಡಿಸುತ್ತಿದ್ದಾರೆ. ಇದರಿಂದ ಅಮೂಲ್ಯ ಪುಸ್ತಕಗಳಲ್ಲಿ ಅಡಕವಾಗಿರುವ ಮಹತ್ತರ ವಿಷಯಗಳು ಮಕ್ಕಳಿಗೆ ತಿಳಿಯುವುದೇ ಇಲ್ಲ.

ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನವನ್ನು ಓದಿ ಕೆಲವೊಮ್ಮೆ ನಾನು ಲೇಖಕರಿಗೆ ಶುಭಾಶಯ ತಿಳಿಸಲು ಮುಂದಾದಾಗ, ಅವರು ನನಗೆ ಒಂದು ವಂದನೆಯನ್ನೂ ತಿಳಿಸದೇ ಇದ್ದುದು ನನ್ನ ಮನಸ್ಸಿಗೆ ನೋವು ತಂದಿದೆ. ಇನ್ನು ಕೆಲವರಿಗೆ ನಾನು ಪತ್ರಿಕೆಯಲ್ಲಿ ಓದಿದ ಮುಖ್ಯ ಬರಹವೊಂದರ ಬಗೆಗೆ ತಿಳಿಸಿದರೆ, 'ಅದನ್ನು ನಮ್ಮ ಪಕ್ಕದ ಮನೆಯವರು ತರಿಸುತ್ತಾರೆ. ಅಲ್ಲಿ ನೋಡಿಕೊಳ್ಳುತ್ತೇನೆ' ಎನ್ನುವವರನ್ನೂ ಗಮನಿಸಿದ್ದೇನೆ. ಇದು ಸರಿಯಲ್ಲ. ಪ್ರತಿಯೊಬ್ಬರೂ ಪುಸ್ತಕ, ಪತ್ರಿಕೆಗಳನ್ನು ಕೊಂಡು ಓದಿ ಪ್ರೋತ್ಸಾಹಿಸುವ ರೂಢಿಯನ್ನು ಬೆಳೆಸಿಕೊಳ್ಳಬೇಕು.

ಎ.ಕೆ.ಅನಂತಮೂರ್ತಿ, ಬೆಂಗಳೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪಠ್ಯಪುಸ್ತಕ ಪರಿಷ್ಕರಣೆ: 10ನೇ ತರಗತಿ ಸಮಾಜ ವಿಜ್ಞಾನ ಭಾಗ–2

ಅಂಬೇಡ್ಕರ್ ವಿಚಾರ ಕೈಬಿಟ್ಟ ಚಕ್ರತೀರ್ಥ ಸಮಿತಿ

ಪ್ರೊ.ಬರಗೂರು ರಾಮಚಂದ್ರಪ್ಪ ಅವರ ಸರ್ವಾಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿಯು, ಕನ್ನಡ ಮಾಧ್ಯಮದ 10ನೇ ತರಗತಿಯ ಸಮಾಜ ವಿಜ್ಞಾನ ಭಾಗ–2 ಪಠ್ಯಪುಸ್ತಕದ 'ಸ್ವಾತಂತ್ರ್ಯೋತ್ತರ ಭಾರತ' ಪಾಠದಲ್ಲಿ ಡಾ.ಬಿ.ಆರ್.ಅಂಬೇಡ್ಕರ್, ಜವಾಹರಲಾಲ್ ನೆಹರು ಮತ್ತು ಭಾರತ ವಿಭಜನೆಗೆ ಸಂಬಂಧಿಸಿದ ವಿವರಗಳನ್ನು ನೀಡಿತ್ತು. ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಶೀಲನಾ ಸಮಿತಿಯು ಈ ವಿವರಗಳನ್ನು ಬದಲಿಸಿದೆ ಮತ್ತು ಕೆಲವು ವಿವರಗಳನ್ನು ಕೈಬಿಟ್ಟಿದೆ

ಪರಿಷ್ಕರಣ ಸಮಿತಿ (ಪ್ರೊ.ಬರಗೂರು ರಾಮಚಂದ್ರಪ್ಪ ಸರ್ವಾಧ್ಯಕ್ಷತೆ)



ಡಾ. ಬಿ.ಆರ್. ಅಂಬೇಡ್ಕರ್

1 ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ; ಅದು ಕೇವಲ ಮರೀಚಿಕೆಯಾಗಿ ಉಳಿಯುತ್ತದೆ ಎಂದು ಅಂಬೇಡ್ಕರ್‌ರವರು ತಿಳಿದಿದ್ದರು. 2 ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಒಟ್ಟಾರೆ ಮುಖವನ್ನು ಪರಿಚಯಿಸಿದರು. ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು. ಅಸ್ಪೃಶ್ಯರು ಕನಿಷ್ಠ ಮಟ್ಟದ ಅವಕಾಶಗಳಿಂದಲೂ ವಂಚಿತರಾಗಿರುವುದನ್ನು ನಿರೂಪಿಸಲು 'ಮಹದ್' ಮತ್ತು 'ಕಾಲಾರಾಂ' ದೇವಾಲಯ ಚಳವಳಿಗಳನ್ನು ರೂಪಿಸಿದರು. 3 ಇವರು ಮೂರೂ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ

ಡಾ. ಬಿ.ಆರ್.ಅಂಬೇಡ್ಕರ್

19

ಭಾಗವಹಿಸಿ ನಿಮ್ನ ವರ್ಗಗಳು ವಿವಿಧ ಬಗೆಯ ಸಂಕೋಲೆಗಳಿಂದ ಬಿಡುಗಡೆ ಪಡೆಯಲು ಬೇಕಾದ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು. ಹರಿಜನೋದ್ಧಾರ ಮತ್ತು ಅಸ್ಪೃಶ್ಯರ ಮುಖಂಡತ್ವಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಮತ್ತು ಅಂಬೇಡ್ಕರ್‌ರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು. ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದು ಗಾಂಧಿ ಮತ್ತು ಅಂಬೇಡ್ಕರರ ನಡುವೆ ವಿವಾದಕ್ಕೂ ಕಾರಣವಾಯಿತು. ಇವರು ಬರೋಡ ಮಹಾರಾಜರಡಿಯಲ್ಲಿ ದಿವಾನರಾಗಿದ್ದರು. ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ನಂತರದಲ್ಲಿ ವೈಸ್‌ರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲೂ ಸಹ ಅತ್ಯಂತ ಮುತುವರ್ಜಿಯಿಂದ ಕಾರ್ಯಭಾರವನ್ನು ನಿಭಾಯಿಸಿದರು. ಅಂಬೇಡ್ಕರ್ ಕಾಂಗ್ರೆಸ್ ಪಕ್ಷವನ್ನು ಸೇರದೆ 'ಬಹಿಷ್ಕೃತ ಹಿತಕಾರಿಣಿ ಸಭಾ' ಎಂಬ ಸಂಘಟನೆಯನ್ನು ಹಾಗೂ 'ಸ್ವತಂತ್ರ ಕಾರ್ಮಿಕ ಪಕ್ಷ' ಎಂಬ ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದರು. 'ಪ್ರಬುದ್ಧ ಭಾರತ', 'ಜನತಾ', 'ಮೂಕನಾಯಕ', 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹೊರಡಿಸಿದರು. ಕಮ್ಯುನಿಸ್ಟ್ ಮತ್ತು ಸಮಾಜವಾದಿ ಧೋರಣೆಗಳಿಂದ ದೂರವೇ ಉಳಿದು ಕೃಷಿ ಕಾರ್ಮಿಕರ ಏಳಿಗೆಗಾಗಿಯೂ ಇವರು ದುಡಿದರು.

ಸ್ವತಂತ್ರ ಭಾರತದ ಮುನ್ನೋಟದ ದಿಕ್ಸೂಚಿಯಾಗಿ ಭಾರತದ ಸಂವಿಧಾನವನ್ನು ರಚಿಸಬೇಕಾಯಿತು. ಸಂವಿಧಾನ ಸಭೆಯ ಅಧ್ಯಕ್ಷರಾಗಿ ಡಾ. ಬಾಬು ರಾಜೇಂದ್ರ ಪ್ರಸಾದ್‌ರವರನ್ನು ಆಯ್ಕೆ ಮಾಡಲಾಯಿತು. ಮುಂದುವರೆದು ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಡಾ. ಬಿ.ಆರ್.ಅಂಬೇಡ್ಕರ್‌ರವರನ್ನು ಸಂವಿಧಾನ ರಚನಾ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿತು. ಸಂವಿಧಾನದಲ್ಲಿ ಸಮಾನತೆಯನ್ನು ಪ್ರತಿಪಾದಿಸಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನಿನ ರಕ್ಷಣೆಯನ್ನು ಒದಗಿಸಿದರು. ಅಸ್ಪೃಶ್ಯತಾ ಆಚರಣೆಯನ್ನು ಅಪರಾಧವೆಂದು ಭಾರತದ ಸಂವಿಧಾನವು ಪರಿಗಣಿಸಿದೆ. ಸ್ವತಂತ್ರ ಭಾರತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಕಾನೂನು ಮಂತ್ರಿಯಾದರು. ಆಧುನಿಕತೆ, ವೈಚಾರಿಕತೆ ಮತ್ತು ಪಾಶ್ಚಾತ್ಯ ವಿದ್ವಾಂಸರಿಂದ 4 ಪ್ರೇರಣೆ ಪಡೆದರೂ ದೇಶೀಯ ಬೇರುಗಳ ಕಡೆಗೆ ಒಲವನ್ನು ತೋರಿದರು. ಜಾತಿ ವ್ಯವಸ್ಥೆಯಿಂದ ಬೇಸತ್ತ ಇವರು ಹಿಂದೂ ಧರ್ಮವನ್ನು ತೊರೆದು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಜಾತಿ ಮತ್ತು ಸಾಮಾಜಿಕ ಶ್ರೇಣೀಕರಣವನ್ನು ವಿರೋಧಿಸಿದ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಮಾರ್ಕ್ಸ್‌ವಾದವು ಯಾವ ಬದಲಾವಣೆಯನ್ನು ರಕ್ತ ಮತ್ತು ಹಿಂಸೆಯಿಂದ ತರಬಹುದೋ ಅದನ್ನು ಬೌದ್ಧ ಧರ್ಮವು ಶಾಂತಿ ಮತ್ತು ಅಹಿಂಸಾತ್ಮಕವಾಗಿ ತರಬಲ್ಲದು ಎಂದು ಅವರು ನಂಬಿದ್ದರು. ಅವರ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರವು ಇವರಿಗೆ ಮರಣೋತ್ತರವಾಗಿ 'ಭಾರತರತ್ನ'ವನ್ನು ನೀಡಿ ಗೌರವಿಸಿದೆ.


ನಿಮಗಿದು ತಿಳಿದಿರಲಿ : "ಪತ್ರಿಕೆಗಳಿಲ್ಲದ ನಾಯಕ ರೆಕ್ಕೆಯಿಲ್ಲದ ಪಕ್ಷಿಯಂತೆ". – ಡಾ.ಬಿ.ಆರ್.ಅಂಬೇಡ್ಕರ್

ಅಸಮಾನತೆ, ಶ್ರೇಣೀಕರಣಕ್ಕೆ ಕೊಕ್

ಪರಿಷ್ಕರಣ ಸಮಿತಿಯು ಅಂತಿಮಗೊಳಿಸಿದ್ದ ಪಠ್ಯಪುಸ್ತಕದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಕುರಿತು ಇದ್ದ ಪಾಠದಲ್ಲಿ ಹಲವಾರು ಬದಲಾವಣೆಗಳನ್ನು ಪರಿಶೀಲನಾ ಸಮಿತಿ ತಂದಿದೆ. ಸಮಾನತೆ–ಅಸಮಾನತೆ, ಸಾಮಾಜಿಕ ಶ್ರೇಣೀಕರಣಕ್ಕೆ ಸಂಬಂಧಿಸಿದಂತೆ ಇದ್ದ ವಿವರಗಳನ್ನು ಪರಿಶೀಲನಾ ಸಮಿತಿ ಕೈಬಿಟ್ಟಿದೆ. ಅಂತಹ ಪ್ರಮುಖ ಬದಲಾವಣೆಗಳು ಇಂತಿವೆ

1. 'ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ.ಬಿ.ಆರ್. ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು' ಎಂಬ ವಾಕ್ಯವನ್ನು, 'ಸಾಮಾಜಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ.ಬಿ.ಆರ್. ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು' ಎಂದು ಬದಲಿಸಲಾಗಿದೆ. ಸಮಾನತೆ ಎಂಬ ಪದವನ್ನು ಕೈಬಿಡಲಾಗಿದೆ
2. 'ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಒಟ್ಟಾರೆ ಮುಖವನ್ನು ಪರಿಚಯಿಸಿದರು' ಎಂಬ ವಾಕ್ಯವನ್ನು, 'ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಭಾವನಾತ್ಮಕ ಮುಖವನ್ನು ಪರಿಚಯಿಸಿದರು' ಎಂದು ಬದಲಿಸಲಾಗಿದೆ
3. 'ಇವರು ಮೂರೂ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ ಭಾಗವಹಿಸಿ ನಿಮ್ನ ವರ್ಗಗಳು ವಿವಿಧ ಸಂಕೋಲೆಗಳಿಂದ ಬಿಡುಗಡೆ ಪಡೆಯಲು ಬೇಕಾದ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು' ಎಂಬ ವಾಕ್ಯವನ್ನು, 'ಇವರು ಮೂರೂ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ ಭಾಗವಹಿಸಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿದರು' ಎಂದು ಬದಲಿಸಲಾಗಿದೆ. 'ನಿಮ್ನ ವರ್ಗಗಳು ವಿವಿಧ ಸಂಕೋಲೆಗಳಿಂದ ಬಿಡುಗಡೆ ಪಡೆಯಲು ಬೇಕಾದ' ಎಂಬ ವಿವರವನ್ನು ಕೈಬಿಡಲಾಗಿದೆ
4. 'ಜಾತಿ ವ್ಯವಸ್ಥೆಯಿಂದ ಬೇಸತ್ತ ಇವರು ಹಿಂದೂ ಧರ್ಮವನ್ನು ತೊರೆದು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಜಾತಿ ಮತ್ತು ಸಾಮಾಜಿಕ ಶ್ರೇಣೀಕರಣವನ್ನು ವಿರೋಧಿಸಿದ ಬೌದ್ಧ ಧರ್ಮವನ್ನು ಸ್ವೀಕರಿಸಿದರು' ಎಂಬ ವಾಕ್ಯವನ್ನು, 'ತಮ್ಮ ಇಳಿವಯಸ್ಸಿನಲ್ಲಿ ಇವರು ಹಿಂದೂ ಧರ್ಮವನ್ನು ತೊರೆದು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಬೌದ್ಧ ಧರ್ಮವನ್ನು ಸ್ವೀಕರಿಸಿದರು' ಎಂದು ಬದಲಿಸಲಾಗಿದೆ. 'ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಜಾತಿ ಮತ್ತು ಸಾಮಾಜಿಕ ಶ್ರೇಣೀಕರಣವನ್ನು ವಿರೋಧಿಸಿದ ಬೌದ್ಧ ಧರ್ಮವನ್ನು' ಎಂಬುದನ್ನು ತೆಗೆದು, ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಬೌದ್ಧ ಧರ್ಮ' ಎಂದು ಬೇರೆ ಅರ್ಥ ಬರುವಂತೆ ಬರೆಯಲಾಗಿದೆ

ಪರಿಶೀಲನಾ ಸಮಿತಿ (ರೋಹಿತ್ ಚಕ್ರತೀರ್ಥ ಅಧ್ಯಕ್ಷತೆ)



ಡಾ. ಬಿ.ಆರ್. ಅಂಬೇಡ್ಕರ್ 1 ಸಾಮಾಜಿಕ ಸ್ವಾತಂತ್ರ್ಯವಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಡಾ. ಬಿ.ಆರ್. ಅಂಬೇಡ್ಕರ್‌ರವರು ಬಲವಾಗಿ ನಂಬಿದ್ದರು. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ; ಅದು ಕೇವಲ ಮರೀಚಿಕೆಯಾಗಿ ಉಳಿಯುತ್ತದೆ ಎಂದು ಅಂಬೇಡ್ಕರ್‌ರವರು ತಿಳಿದಿದ್ದರು. 2 ಅವರು ಭಾರತವನ್ನು ಕೇವಲ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣದೆ ಅದರ ಭಾವನಾತ್ಮಕ ಮುಖವನ್ನು ಪರಿಚಯಿಸಿದರು. ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು. ಅಸ್ಪೃಶ್ಯರು ಕನಿಷ್ಠ ಮಟ್ಟದ ಅವಕಾಶಗಳಿಂದ ವಂಚಿತರಾಗಿರುವುದನ್ನು ನಿರೂಪಿಸಲು 'ಮಹಾಡ್' ಮತ್ತು 'ಕಾಲಾರಾಂ' ದೇವಾಲಯ ಚಳವಳಿಗಳನ್ನು ರೂಪಿಸಿದರು. 3 ಇವರು ಮೂರೂ ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ ಭಾಗವಹಿಸಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿದರು. ಹರಿಜನೋದ್ಧಾರ ಮತ್ತು ಅಸ್ಪೃಶ್ಯರ ಮುಖಂಡತ್ವಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಮತ್ತು ಅಂಬೇಡ್ಕರ್‌ರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು. ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದು ಗಾಂಧಿ ಮತ್ತು ಅಂಬೇಡ್ಕರರ ನಡುವೆ ವಿವಾದಕ್ಕೂ ಕಾರಣವಾಯಿತು. ಇವರು ಬರೋಡ ಮಹಾರಾಜರಡಿಯಲ್ಲಿ ದಿವಾನರಾಗಿದ್ದರು. ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ನಂತರದಲ್ಲಿ ವೈಸ್‌ರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲೂ ಸಹ ಅತ್ಯಂತ ಮುತುವರ್ಜಿಯಿಂದ ಕಾರ್ಯಭಾರವನ್ನು ನಿಭಾಯಿಸಿದರು. ಅಂಬೇಡ್ಕರ್ ಕಾಂಗ್ರೆಸ್ ಪಕ್ಷವನ್ನು ಸೇರದೆ 'ಬಹಿಷ್ಕೃತ ಹಿತಕಾರಿಣಿ ಸಭಾ' ಎಂಬ ಸಂಘಟನೆಯನ್ನು ಹಾಗೂ 'ಸ್ವತಂತ್ರ ಕಾರ್ಮಿಕ ಪಕ್ಷ' ಎಂಬ ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದರು. 'ಪ್ರಬುದ್ಧ ಭಾರತ', 'ಜನತಾ', 'ಮೂಕನಾಯಕ', 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹೊರಡಿಸಿದರು. ಕಮ್ಯುನಿಸ್ಟ್ ಮತ್ತು ಸಮಾಜವಾದಿ ಧೋರಣೆಗಳಿಂದ ದೂರವೇ ಉಳಿದು ಕೃಷಿ ಕಾರ್ಮಿಕರ ಏಳಿಗೆಗಾಗಿಯೂ ಇವರು ದುಡಿದರು.

ಡಾ. ಬಿ.ಆರ್. ಅಂಬೇಡ್ಕರ್

ನಿಮಗಿದು ತಿಳಿದಿರಲಿ : "ಪತ್ರಿಕೆಗಳಿಲ್ಲದ ನಾಯಕ ರೆಕ್ಕೆಯಿಲ್ಲದ ಪಕ್ಷಿಯಂತೆ". ಡಾ.ಬಿ.ಆರ್.ಅಂಬೇಡ್ಕರ್

ಸ್ವತಂತ್ರ ಭಾರತದ ದಿಕ್ಸೂಚಿಯಾಗಿ ಭಾರತದ ಸಂವಿಧಾನವನ್ನು ರಚಿಸಬೇಕಾಯಿತು. ಸಂವಿಧಾನ ಸಭೆಯ ಅಧ್ಯಕ್ಷರಾಗಿ ಡಾ. ಬಾಬು ರಾಜೇಂದ್ರ ಪ್ರಸಾದ್‌ರವರನ್ನು ಆಯ್ಕೆ ಮಾಡಲಾಯಿತು. ಮುಂದುವರೆದು ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ಡಾ. ಬಿ.ಆರ್.ಅಂಬೇಡ್ಕರ್‌ರವರನ್ನು ಸಂವಿಧಾನ ರಚನಾ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿತು. ಸಂವಿಧಾನದಲ್ಲಿ ಸಮಾನತೆಯನ್ನು


22

ಪ್ರತಿಪಾದಿಸಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನಿನ ರಕ್ಷಣೆಯನ್ನು ಒದಗಿಸಿದರು. ಅಸ್ಪೃಶ್ಯತಾ ಆಚರಣೆಯನ್ನು ಅಪರಾಧವೆಂದು ಭಾರತದ ಸಂವಿಧಾನವು ಪರಿಗಣಿಸಿದೆ. ಸ್ವತಂತ್ರ ಭಾರತದಲ್ಲಿ ಡಾ. ಬಿ.ಆರ್.ಅಂಬೇಡ್ಕರ್‌ರವರು ಕಾನೂನು ಮಂತ್ರಿಯಾದರು. ಆಧುನಿಕತೆ, ವೈಚಾರಿಕತೆ ಮತ್ತು 4 ಪಾಶ್ಚಾತ್ಯ ವಿದ್ವಾಂಸರಿಂದ ಪ್ರೇರಣೆ ಪಡೆದರೂ ದೇಶೀಯ ಬೇರುಗಳ ಕಡೆಗೆ ಒಲವನ್ನು ತೋರಿದರು. ತಮ್ಮ ಇಳಿವಯಸ್ಸಿನಲ್ಲಿ ಇವರು ಹಿಂದೂ ಧರ್ಮವನ್ನು ತೊರೆದು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಮಾರ್ಕ್ಸ್‌ವಾದವು ಯಾವ ಬದಲಾವಣೆಯನ್ನು ರಕ್ತ ಮತ್ತು ಹಿಂಸೆಯಿಂದ ತರಬಹುದೋ ಅದನ್ನು ಬೌದ್ಧ ಧರ್ಮವು ಶಾಂತಿ ಮತ್ತು ಅಹಿಂಸಾತ್ಮಕವಾಗಿ ತರಬಲ್ಲದು ಎಂದು ಅವರು ನಂಬಿದ್ದರು. ಅವರ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರವು ಇವರಿಗೆ ಮರಣೋತ್ತರವಾಗಿ 'ಭಾರತರತ್ನ'ವನ್ನು

ಚಟುವಟಿಕೆ : ಡಾ. ಬಿ.ಆರ್. ಅಂಬೇಡ್ಕರ್ ರವರ ಜೀವನ ಚರಿತ್ರೆಯನ್ನು ಓದಿ.

ಗಾಂಧಿ ಹತ್ಯೆ ವಿಚಾರ ಮಾಯ


- ಪ್ರೊ. ಬರಗೂರು ಸಮಿತಿಯು 'ಭಾರತದ ವಿಭಜನೆ' ಕುರಿತು ಮಾಹಿತಿ ನೀಡುವಾಗ, 'ಹಿಂದು ಮತ್ತು ಮುಸ್ಲಿಂ ವಿಭಜನೆಯನ್ನು ಸೃಷ್ಟಿಸುವ ಆಸಕ್ತಿಯನ್ನು ಬ್ರಿಟಿಷರು ಹೊಂದಿದ್ದರು. ಬಂಗಾಳ ವಿಭಜನೆ, 1909ರ ಕಾಯ್ದೆಯ ಅನುಷ್ಠಾನದ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ರಾಜಕೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಪ್ರಯತ್ನಗಳನ್ನು ಮಾಡಿದ್ದನ್ನು ಇಲ್ಲಿ ಕಾಣಬಹುದು. ಹಾಕಿದ ವಿಭಜನೆಯ ಬೇರುಗಳು ದೇಶ ವಿಭಜನೆಯಲ್ಲಿ ಪರ್ಯಾವಸಾನವಾಯಿತು' ಎಂದು ಉಲ್ಲೇಖಿಸಿದೆ. ಈ ಪ್ಯಾರಾವನ್ನು ಪರಿಶೀಲನಾ ಸಮಿತಿ ಕೈಬಿಟ್ಟಿದೆ
- 'ಹಿಂದೂ ಮತ್ತು ಮುಸ್ಲಿಂ ಭಾವೈಕ್ಯತೆಯ ಹರಿಕಾರ ಗಾಂಧೀಜಿಯವರನ್ನು ನಾಥೂರಾಮ್ ಗೋಡ್ಸೆ ಎಂಬುವವನು ಹತ್ಯೆ ಮಾಡಿದನು' ಎಂಬ ವಿವರವನ್ನು ಪರಿಶೀಲನಾ ಸಮಿತಿ ತೆಗೆದುಹಾಕಿದೆ. ಅಂದರೆ, ಗಾಂಧೀಜಿ ಹಂತಕನ ಬಗೆಗಿನ ಮಾಹಿತಿಯನ್ನು ಕೈಬಿಡಲಾಗಿದೆ
- 'ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡಿದಾಗ ದೇಶದಾದ್ಯಂತ ಕೋಮುಗಲಭೆಗಳು ನಡೆದವು' ಎಂದಷ್ಟೇ ಪ್ರೊ. ಬರಗೂರು ಸಮಿತಿ ಹೇಳುತ್ತದೆ. ಆದರೆ ಪರಿಶೀಲನಾ ಸಮಿತಿಯು ಇದನ್ನು ಮುಂದುವರಿಸಿ, 'ಬಂಗಾಳ ಒಂದರಲ್ಲೇ ಸಾವಿರಾರು ಅಮಾಯಕ ಹಿಂದೂಗಳನ್ನು ಕೇವಲ 48 ತಾಸುಗಳ ಅವಧಿಯಲ್ಲಿ ಮೂಲಭೂತವಾದಿ ಮುಸ್ಲಿಮರು ಅಮಾನುಷವಾಗಿ ಕೊಂದರು' ಎಂಬ ವಿವರವನ್ನು ಹೊಸದಾಗಿ ಸೇರಿಸಿದೆ



ಚರ್ಚಿಸಿತು. ಭಾರತಕ್ಕೆ ಫೆಡರಲ್ ಮಾದರಿ ಸರ್ಕಾರವನ್ನು ಸೂಚಿಸಿತು. ಸಂವಿಧಾನ ರಚನಾ ಸಭೆ ಕರೆಯುವುದಾಗಿ ಮತ್ತು ಮಧ್ಯಂತರ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು. ಆದರೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಮಧ್ಯಂತರ ಸರ್ಕಾರ ರಚಿಸುವ ವಿಚಾರದಲ್ಲಿ ಭಿನ್ನತೆ ಉಂಟಾಯಿತು. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ 1946ರ ಆಗಸ್ಟ್ 16 ರಂದು ನೇರ ಕಾರ್ಯಾಚರಣೆ ದಿನಕ್ಕೆ (Direct Action Day) ಕರೆ ನೀಡಿತು. ಇದರಿಂದ ದೇಶಾದ್ಯಂತ ಕೋಮುಗಲಭೆಗಳು ನಡೆದವು. ಡಾ. ಬಾಬು ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ಸೇರಿದ ಸಂವಿಧಾನ ಸಭೆಯಲ್ಲಿ ಮುಸ್ಲಿಂ ಲೀಗ್ ಭಾಗವಹಿಸಲಿಲ್ಲ. ಹಿಂದು ಮತ್ತು ಮುಸ್ಲಿಂ ವಿಭಜನೆಯನ್ನು ಸೃಷ್ಟಿಸುವ ಆಸಕ್ತಿಯನ್ನು ಬ್ರಿಟಿಷರು ಹೊಂದಿದ್ದರು. ಬಂಗಾಳ ವಿಭಜನೆ, 1909ರ ಕಾಯ್ದೆಯ ಅನುಷ್ಠಾನದ ಸಂದರ್ಭಗಳಲ್ಲಿ ಬ್ರಿಟಿಷರು ತಮ್ಮ ರಾಜಕೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಪ್ರಯತ್ನಗಳನ್ನು ಮಾಡಿದ್ದನ್ನು ಇಲ್ಲಿ ಕಾಣಬಹುದು. ಹಾಕಿದ ವಿಭಜನೆಯ ಬೇರುಗಳು ದೇಶವಿಭಜನೆಯಲ್ಲಿ ಪರ್ಯಾವಸಾನವಾಯಿತು.

ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಸಂಬಂಧ ತೀರ ಹದಗೆಟ್ಟಿತ್ತು. ಈ ಸಮಯದಲ್ಲಿ ಬ್ರಿಟಿಷ್ ಸರ್ಕಾರ ಶೀಘ್ರವಾಗಿ ಅಧಿಕಾರವನ್ನು ಹಸ್ತಾಂತರಿಸುವುದಾಗಿ ತಿಳಿಸಿ, 1946ರ ಮಾರ್ಚ್‌ನಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭಾರತಕ್ಕೆ ವೈಸ್‌ರಾಯ್ ಆಗಿ ಕಳುಹಿಸಿತು. ಬ್ಯಾಟನ್‌ರವರು ಗಾಂಧೀಜಿ, ಜಿನ್ನಾ ಮತ್ತಿತರ ನಾಯಕರೊಂದಿಗೆ ಮಾತುಕತೆ ನಡೆಸಿ ಭಾರತವನ್ನು ವಿಭಜಿಸುವ ಯೋಜನೆಯನ್ನು ರೂಪಿಸಿದರು. 1947ರ ಜುಲೈನಲ್ಲಿ ಭಾರತ ಸ್ವಾತಂತ್ರ್ಯ ಮಸೂದೆಯು ಕಾಯ್ದೆಯ ರೂಪವನ್ನು ಪಡೆಯಿತು. ಕಾಯ್ದೆಯನ್ವಯ 1947ರ ಆಗಸ್ಟ್ 15ರಂದು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಪ್ರತ್ಯೇಕ ರಾಷ್ಟ್ರಗಳು ಉದಯಿಸಿದವು. ರ್‍ಯಾಡ್ ಕ್ಲಿಫ್ ಆಯೋಗವು ಈ ದೇಶಗಳ ಗಡಿಗಳನ್ನು ಗುರುತಿಸಿತು. ಪಂಡಿತ್ ಜವಾಹರಲಾಲ್ ನೆಹರುರವರು ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನವನ್ನು ಸ್ವೀಕರಿಸಿದರು.

1948ರ ಜನವರಿ 30ರಂದು ಪ್ರಾರ್ಥನಾ ಸಭೆಗೆ ನಡೆದು ಹೋಗುತ್ತಿದ್ದ ಹಿಂದೂ ಮುಸ್ಲಿಂ ಭಾವೈಕ್ಯತೆಯ ಹರಿಕಾರ ಗಾಂಧೀಜಿಯವರನ್ನು ನಾಥೂರಾಮ್ ಗೂಡ್ಸೆ ಎಂಬುವವನು ಹತ್ಯೆ ಮಾಡಿದನು. ಭೌತಿಕವಾಗಿ ಗಾಂಧೀಜಿಯವರನ್ನು ಕೊನೆಗಾಣಿಸಿದರೂ ಅವರ ಸಮಾನತೆಯ ಆಶಯಗಳು, ಮಾನವೀಯ ಸಂವೇದನೆಗಳು, ಭಾವೈಕ್ಯತೆಯ ಕನಸುಗಳು, ಮನುಕುಲದ ಆದರ್ಶಗಳಾಗಿ ಉಳಿದಿವೆ.




ಜಿನ್ನಾ ಹಿಂದೂ ಮತ್ತು ಮುಸ್ಲಿಮರು ಒಂದು ದೇಶವಾಗಲು ಸಾಧ್ಯವೇ ಇಲ್ಲ ಎಂದು ಘೋಷಿಸಿದರು. ಎರಡನೆಯ ಮಹಾಯುದ್ಧ ಮುಗಿದು ಬ್ರಿಟನ್‌ನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತು. ಇದು ಭಾರತದಲ್ಲಿನ ರಾಜಕೀಯ ಬಿಕ್ಕಟ್ಟನ್ನು ಶಮನಗೊಳಿಸಲು ಕ್ರಮ ಕೈಗೊಂಡಿತು. ಇದು ಕ್ಯಾಬಿನೆಟ್ ನಿಯೋಗವನ್ನು ಭಾರತಕ್ಕೆ ಸ್ವಯಂ ಅಧಿಕಾರವನ್ನು ನೀಡುವ ಕುರಿತು ಚರ್ಚಿಸಲು ಕಳುಹಿಸಿತು. ಈ ನಿಯೋಗವು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನೊಂದಿಗೆ ಚರ್ಚಿಸಿತು. ಭಾರತಕ್ಕೆ ಫೆಡರಲ್ ಮಾದರಿ ಸರ್ಕಾರವನ್ನು ಸೂಚಿಸಿತು. ಸಂವಿಧಾನ ರಚನಾ ಸಭೆ ಕರೆಯುವುದಾಗಿ ಮತ್ತು ಮಧ್ಯಂತರ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು. ಆದರೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಮಧ್ಯಂತರ ಸರ್ಕಾರ ರಚಿಸುವ ವಿಚಾರದಲ್ಲಿ ಭಿನ್ನತೆ ಉಂಟಾಯಿತು. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ 1946ರ ಆಗಸ್ಟ್ 16 ರಂದು ನೇರ ಕಾರ್ಯಾಚರಣೆ ದಿನಕ್ಕೆ (Direct Action Day) ಕರೆ ನೀಡಿತು. ಇದರಿಂದ ದೇಶಾದ್ಯಂತ ಕೋಮುಗಲಭೆಗಳು ನಡೆದವು. ಬಂಗಾಳ ಒಂದರಲ್ಲೇ ಸಾವಿರಾರು ಅಮಾಯಕ ಹಿಂದೂಗಳನ್ನು ಕೇವಲ 48 ತಾಸುಗಳ ಅವಧಿಯಲ್ಲಿ ಮೂಲಭೂತವಾದಿ ಮುಸ್ಲಿಮರು ಅಮಾನುಷವಾಗಿ ಕೊಂದರು. ಡಾ. ಬಾಬು ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ಸೇರಿದ ಸಂವಿಧಾನ ಸಭೆಯಲ್ಲಿ ಮುಸ್ಲಿಂ ಲೀಗ್ ಭಾಗವಹಿಸಲಿಲ್ಲ.

ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಸಂಬಂಧ ತೀರ ಹದಗೆಟ್ಟಿತ್ತು. ಈ ಸಮಯದಲ್ಲಿ ಬ್ರಿಟಿಷ್ ಸರ್ಕಾರ ಶೀಘ್ರವಾಗಿ ಅಧಿಕಾರವನ್ನು ಹಸ್ತಾಂತರಿಸುವುದಾಗಿ ತಿಳಿಸಿ, 1946ರ ಮಾರ್ಚ್‌ನಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭಾರತಕ್ಕೆ ವೈಸ್‌ರಾಯ್ ಆಗಿ ಕಳುಹಿಸಿತು. ಬ್ಯಾಟನ್‌ರವರು ಗಾಂಧೀಜಿ, ಜಿನ್ನಾ ಮತ್ತಿತರ ನಾಯಕರೊಂದಿಗೆ ಮಾತುಕತೆ ನಡೆಸಿ ಭಾರತವನ್ನು ವಿಭಜಿಸುವ ಯೋಜನೆಯನ್ನು ರೂಪಿಸಿದರು. 1947ರ ಜುಲೈನಲ್ಲಿ ಭಾರತ ಸ್ವಾತಂತ್ರ್ಯ ಮಸೂದೆಯು ಕಾಯ್ದೆಯ ರೂಪವನ್ನು ಪಡೆಯಿತು. ಕಾಯ್ದೆಯನ್ವಯ 1947ರ ಆಗಸ್ಟ್ 15ರಂದು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಪ್ರತ್ಯೇಕ ರಾಷ್ಟ್ರಗಳು ಉದಯಿಸಿದವು. ರ್‍ಯಾಡ್‌ಕ್ಲಿಫ್ ಆಯೋಗವು ಈ ದೇಶಗಳ ಗಡಿಗಳನ್ನು ಗುರುತಿಸಿತು. ಪಂಡಿತ್ ಜವಾಹರಲಾಲ್ ನೆಹರುರವರು ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ಪ್ರಮಾಣವಚನವನ್ನು ಸ್ವೀಕರಿಸಿದರು.

25


ವಿವಿಧತೆ ವಿವರ ಡಿಲೀಟ್

ಪರಿಷ್ಕರಣ ಸಮಿತಿ ಸಿದ್ಧಪಡಿಸಿದ್ದ ಪಠ್ಯಪುಸ್ತಕದ 'ಜವಾಹರಲಾಲ್ ನೆಹರು' ಪಾಠಭಾಗದಲ್ಲಿ, 'ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ವಿವಿಧತೆಯನ್ನು ಒಪ್ಪುವ ತಾತ್ವಿಕ ತಳಹದಿಯನ್ನು ಹಾಕಿದರು' ಎಂಬ ವಿವರ ಇತ್ತು. ರೋಹಿತ್ ಚಕ್ರತೀರ್ಥ ನೇತೃತ್ವದ ಪರಿಶೀಲನಾ ಸಮಿತಿಯು ಇದನ್ನು, 'ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ಪ್ರಜಾಪ್ರಭುತ್ವೀಯ ತಳಹದಿಯನ್ನು ಹಾಕಿದರು' ಎಂದು ಬದಲಿಸಲಾಗಿದೆ. 'ಭಾರತಕ್ಕೆ ವಿವಿಧತೆಯನ್ನು ಒಪ್ಪುವ ತಾತ್ವಿಕ ತಳಹದಿಯನ್ನು' ಎಂಬ ವಿವರವನ್ನು ಕೈಬಿಡಲಾಗಿದೆ



ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನ ಮಂತ್ರಿಯಾಗಿದ್ದ ನೆಹರುರವರನ್ನು ನಾವು ಕಾಣುತ್ತೇವೆ. 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಮೊದಲ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ನೇತೃತ್ವದಲ್ಲಿ ಭಾರತದ ಅನೇಕ ದೇಶೀ ಸಂಸ್ಥಾನಗಳ ವಿಲೀನಿಕರಣಕ್ಕೆ ನೆಹರು ಅವರು ಕಾರಣರಾದರು. ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ವಿವಿಧತೆಯನ್ನು ಒಪ್ಪುವ ತಾತ್ವಿಕ ತಳಹದಿಯನ್ನು ಹಾಕಿದರು. ಬಂಡವಾಳ ಹಾಗೂ ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯು ನೆಹರು ಅವರ ಆಧುನಿಕ ಭಾರತದ ಅಭಿವೃದ್ಧಿಯ ಮೈಲಿಗಲ್ಲಾಯಿತು. ಬೃಹತ್ ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು

ಚಟುವಟಿಕೆ : ಪಂಡಿತ್ ಜವಾಹರಲಾಲ್ ನೆಹರೂ ರವರು ಪ್ರಥಮ ಪ್ರಧಾನಮಂತ್ರಿಯಾಗಿ ರೂಪಿಸಿದ ವಿದೇಶಾಂಗ ನೀತಿಯ ಬಗ್ಗೆ ಹೆಚ್ಚಿನ ಮಾಹಿತಿ ಓದಿರಿ.



ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನ ಮಂತ್ರಿಯಾಗಿದ್ದ ನೆಹರುರವರನ್ನು ನಾವು ಕಾಣುತ್ತೇವೆ. 'ಉಕ್ಕಿನ ಮನುಷ್ಯ' ಎಂದು ಖ್ಯಾತಿಯಾಗಿದ್ದ ಭಾರತದ ಮೊದಲ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ ನೇತೃತ್ವದಲ್ಲಿ ಭಾರತದ ಅನೇಕ ದೇಶೀ ಸಂಸ್ಥಾನಗಳ ವಿಲೀನಿಕರಣಕ್ಕೆ ನೆಹರು ಅವರು ಕಾರಣರಾದರು. ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಭಾರತಕ್ಕೆ ಪ್ರಜಾಪ್ರಭುತ್ವೀಯ ತಳಹದಿಯನ್ನು ಹಾಕಿದರು. ಬಂಡವಾಳ ಹಾಗೂ ಸಮಾಜವಾದಿ ತತ್ವಗಳನ್ನೊಳಗೊಂಡ ಮಿಶ್ರ ಆರ್ಥಿಕ ನೀತಿಯು ನೆಹರು ಅವರ ಆಧುನಿಕ ಭಾರತದ ಮೈಲಿಗಲ್ಲಾಯಿತು. ಬೃಹತ್ ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 154

ಶಿವ–ಸತೀ ಮದುವೆ ಸಂಭ್ರಮ

ದಕ್ಷಪ್ರಜಾಪತಿ ತನ್ನ ಮಗಳು ಸತೀದೇವಿಯನ್ನು ತನಗೆ ವಿವಾಹ ಮಾಡಿಕೊಡಲು ಒಪ್ಪಿದ್ದಾನೆ ಎಂದು ಬ್ರಹ್ಮ ಹೇಳಿದ ಮಾತನ್ನು ಕೇಳಿ ಸಂಭ್ರಮಿಸಿದ ಶಿವ ಮುಂದಿನ ವಿವಾಹಕಾರ್ಯಕ್ಕೆ ಅಣಿಯಾಗುತ್ತಾನೆ. ಬ್ರಹ್ಮನಿಗೆ ಹೇಳುತ್ತಾನೆ: 'ವಿಧಿಬ್ರಹ್ಮನೇ, ನಿನ್ನೊಡನೆ ಹಾಗೂ ನಾರದನೊಂದಿಗೆ ಈಗಲೇ ನಾನು ದಕ್ಷನ ಮನೆಗೆ ತೆರಳುವೆ. ನೀನು ನಾರದ, ಮರೀಚಿಮುನಿ ಮೊದಲಾದ ನಿನ್ನ ಮಾನಸಪುತ್ರರನ್ನು ಕರೆಸು. ಅವರ ಜೊತೆ ನನ್ನ ಪ್ರಮಥಗಣಗಳನ್ನೂ ಕರೆದುಕೊಂಡು ದಕ್ಷನ ಮನೆಗೆ ಹೋಗೋಣ' ಎಂದು.

ಶಿವನ ಮಾತಿನಂತೆ ಬ್ರಹ್ಮ ತನ್ನ ಮಾನಸಪುತ್ರರಾದ ನಾರದ, ಮರೀಚಿ ಮೊದಲಾದವರ ಸ್ಮರಿಸುತ್ತಾನೆ. ತಕ್ಷಣವೇ ಮಾನಸಪುತ್ರರೆಲ್ಲ ಬ್ರಹ್ಮನ ಮುಂದೆ ಪ್ರತ್ಯಕ್ಷರಾಗುತ್ತಾರೆ. ಶಿವ-ಸತೀಯ ವಿವಾಹ ಸಮಾರಂಭಕ್ಕೆ ಹೋಗಬೇಕೆಂದು ಬ್ರಹ್ಮ ತಿಳಿಸಿದಾಗ ಮಾನಸಪುತ್ರರೆಲ್ಲ ಸಂತೋಷದಿಂದ ದಕ್ಷನ ಮನೆ ಕಡೆಗೆ ಹೊರಟರು. ಇತ್ತ ಶಿವ ವಿಷ್ಣುವನ್ನು ಸ್ಮರಿಸಿದಾಗ ಆತ ಕೂಡಲೇ ಲಕ್ಷ್ಮಿಯೊಂದಿಗೆ ಗರುಡವನ್ನೇರಿ ತನ್ನ ಸೈನ್ಯದೊಡನೆ ಅಲ್ಲಿಗೆ ಬಂದ. ಬ್ರಹ್ಮ-ವಿಷ್ಣು ಮತ್ತು ತನ್ನ ಪರಿವಾರದೊಂದಿಗೆ ಶಿವ ಚೈತ್ರ ಮಾಸದ ಶುಕ್ಲ ಪಕ್ಷದ ತ್ರಯೋದಶಿ ದಿನವಾದ ಭಾನುವಾರದಂದು ಉತ್ತರಾ ನಕ್ಷತ್ರದ ಘಳಿಗೆಯಲ್ಲಿ ಮದುವೆಗಾಗಿ ಹೊರಟ.

ಶಿವನ ವಿವಾಹದ ಸುದ್ದಿ ಕೇಳಿ ಬ್ರಹ್ಮ-ವಿಷ್ಣು-ಶಿವನ ಪರಿವಾರವಲ್ಲದೆ, ಹದಿನಾಲ್ಕು ಲೋಕದ ಎಲ್ಲಾ ದೇವತೆಗಳು, ಮುನಿಗಳು ಮದುವೆ ದಿಬ್ಬಣದೊಂದಿಗೆ ಸೇರಿದರು. ಮದುವೆ ಪರಿವಾರದೊಂದಿಗೆ ದಕ್ಷನ ಮನೆಗೆ ಮದುಮಗನಾಗಿ ಶಿವ ಹೋಗುತ್ತಿರುವಾಗ ತುಂಬಾ ಆಕರ್ಷಕವಾಗಿ ಶೋಭಿಸುತ್ತಿದ್ದ. ನಂದೀಕೇಶ್ವರನ ಮೇಲೆ ಮದುಮಗ ಶಿವ ಕುಳಿತಿದ್ದ. ಹಿಂಬಾಲಿಸಿ ಹೋಗುತ್ತಿದ್ದ ದೇವತೆಗಳು, ಮುನಿಗಳು ಮತ್ತು ಶಿವನ ಪ್ರಮಥಗಣಗಳು ಉತ್ಸಾಹಭರಿತರಾಗಿದ್ದರು. ಗಜಚರ್ಮ, ವ್ಯಾಘ್ರಚರ್ಮ, ಸರ್ಪಗಳು, ಸಿಂಹ, ಜಟೆಯಲ್ಲಿನ ಚಂದ್ರಕಲೆ ಇವೆಲ್ಲವೂ ಶಿವನ ಅಂಗಗಳಿಗೆ ಯೋಗ್ಯವಾದ ಅಲಂಕಾರಗಳಾಗಿ ಕಂಗೊಳಿಸುತ್ತಿದ್ದವು.

ವರನ ದಿಬ್ಬಣ ದಕ್ಷನ ಮನೆಯನ್ನು ಪ್ರವೇಶಿಸುತ್ತಿದ್ದಂತೆ ವಧುವಿನ ಪೋಷಕರಾದ ದಕ್ಷ ಮತ್ತವನ ಪತ್ನಿ ವೀರಿಣಿ ತಮ್ಮ ಪರಿವಾರದೊಡನೆ ಸಂತೋಷದಿಂದ ಬರಮಾಡಿಕೊಂಡರು. ದಕ್ಷ ದೇವತೆಗಳೆಲ್ಲರನ್ನೂ ಯೋಗ್ಯವಾಗಿ ಸತ್ಕರಿಸಿದ. ದೇವತೆಗಳು, ಪ್ರಮಥಗಳು ಮತ್ತು ಮುನಿಗಳೊಡನೆ ಶಿವನನ್ನು ಮನೆಯ ಒಳಗೆ ಕರೆದುಕೊಂಡು ಬಂದ.

ಶಿವನಿಗೆ ಮಹಾರ್ಘವಾದ ಸಿಂಹಾಸನವನ್ನು ಕೊಟ್ಟು ಕುಳ್ಳಿರಿಸಿದ. ಸರ್ವೇಶ್ವರನಾದ ಶಿವನನ್ನು ದಕ್ಷ ಪ್ರಜಾಪತಿ ವಿಧಿವತ್ತಾಗಿ ಪೂಜಿಸಿದ. ದೇವತೆಗಳು, ಪ್ರಮಥಗಣಗಳು ಮತ್ತು ಮುನಿಗಳನ್ನು ಸಹ ವಿಧಿವತ್ತಾಗಿ ಭಕ್ತಿಯಿಂದ ಪೂಜಿಸಿದ. ತನ್ನ ಮನೆಗೆ ಬಂದ ವರನ ಕಡೆಯವರೆಲ್ಲರಿಗೂ ಯಥೋಚಿತವಾಗಿ ಆದರಿಸಿ ಉಪಚರಿಸಿದ. ಬ್ರಹ್ಮನ ಮಾನಸಪುತ್ರರು ಮತ್ತು ತನ್ನ ಸೋದರ ಮುನಿಗಳನ್ನು ಬರಮಾಡಿಕೊಂಡು, ಅವರ ಕುಶಲಕ್ಷೇಮ ವಿಚಾರಿಸಿದ.

ಬಳಿಕ ದಕ್ಷಬ್ರಹ್ಮನು ತಂದೆಯಾದ ಬ್ರಹ್ಮನಿಗೆ ನಮಸ್ಕರಿಸಿ 'ಓ ತಂದೆಯಾದ ಬ್ರಹ್ಮನೇ, ನೀನೇ ನನ್ನ ಮಗಳ ವಿವಾಹವನ್ನು ನೆರವೇರಿಸಿಕೊಡಬೇಕು' ಎಂದು ಪ್ರಾರ್ಥಿಸಿದ. ದಕ್ಷನ ಪ್ರಾರ್ಥನೆಗೆ ಸಮ್ಮತಿಸಿದ ಬ್ರಹ್ಮ, ತನ್ನ ನೇತೃತ್ವದಲ್ಲೆ ವಿಧಿವತ್ತಾದ ವಿವಾಹಮಾಡಲು ಸಿದ್ಧನಾದ. ಆಗ ದಕ್ಷನು ಗ್ರಹಬಲದಿಂದ ಕೂಡಿರುವ ಒಳ್ಳೆಯ ಲಗ್ನವಿರುವ ಸುಮುಹೂರ್ತದಲ್ಲಿ ತನ್ನ ಪುತ್ರಿ ಸತಿಯನ್ನು ಹರ್ಷದಿಂದ ಶಂಕರನಿಗೆ ಧಾರೆ ಎರೆದುಕೊಟ್ಟ. ಆಗ ಶಿವ ಸಹ ವಿವಾಹವಿಧಿಯಂತೆ ಸುಂದರಿಯಾದ ಸತೀದೇವಿಯ ಪಾಣಿಗ್ರಹಣವನ್ನು ಸಂತೋಷದಿಂದ ಮಾಡಿದ.

ಬ್ರಹ್ಮ, ವಿಷ್ಣು, ನಾರದ, ಮೊದಲಾದ ದೇವತೆಗಳು, ಮುನಿಗಳು, ಪ್ರಮಥಗಣಗಳು ಶಂಕರನನ್ನು ಸ್ತೋತ್ರ ಮಾಡಿ ಸಂತೋಷಗೊಳಿಸಿದರು. ಮದುವೆ ನಂತರ ಗಾನ-ನರ್ತನಗಳ ಮನರಂಜನೆಯ ಉತ್ಸವವು ವಿಜೃಂಭಣೆಯಿಂದ ನಡೆಯಿತು. ಮಗಳ ಮದುವೆ ಯಶಸ್ವಿಯಾಗಿ ನಡೆದಿದ್ದಕ್ಕೆ ದಕ್ಷ ಮತ್ತವನ ಪತ್ನಿ ವೀರಿಣಿ ಸಂತೋಷಗೊಂಡರಲ್ಲದೆ, ತಮ್ಮ ಕನ್ಯೆಯನ್ನು ಶಿವನಿಗೆ ಕೊಟ್ಟು ಕೃತಾರ್ಥರಾದೆವೆಂದು ಸಂಭ್ರಮಿಸಿದರು. ಶಿವ–ಸತಿಯರ ಮದುವೆಯು ಮಂಗಳಮಯವಾಗಿ ನಡೆದು, ಸುಖಮಯವಾಯಿತು ಎಂಬಲ್ಲಿಗೆ ಶಿವಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಹದಿನೆಂಟನೆಯ ಅಧ್ಯಾಯ ಮುಗಿಯಿತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಹೆಸರಿನ ಹಂಬಲ ಬೇಡ

ಹೆಸರು ಹೆಸರೆಂಬುದೇಂ? ಕಸುರು ಬೀಸುವ ಗಾಳಿ|
ಹಸೆಯೊಂದು ನಿನಗೇಕೆ ಬ್ರಹ್ಮಪುರಿಯೊಳಗೆ?||
ಶಿಶುವಾಗು ನೀಂ ಮನದಿ, ಹಸುವಾಗು, ಸಸಿಯಾಗು|
ಕಸಬೊರಕೆಯಾಗಿಳೆಗೆ – ಮಂಕುತಿಮ್ಮ ||656||

ಪದ-ಅರ್ಥ: ಹೆಸರೆಂಬುದೇಂ? = ಹೆಸರು + ಎಂಬುದು + ಏಂ(ಏನು), ಕಸುರು = ಕೊಳಕು, ಅಪಕ್ವವಾದದ್ದು, ಬ್ರಹ್ಮಪುರಿ = ಪ್ರಪಂಚ, ಕಸಬೊರಕೆಯಾಗಿಳೆಗೆ = ಕಸಬೊರಕೆ (ಪೊರಕೆ) + ಆಗು + ಇಳೆಗೆ (ಭೂಮಿಗೆ)

ವಾಚ್ಯಾರ್ಥ: ಹೆಸರು, ಹೆಸರೆಂದರೇನು? ಅದು ಅಪಕ್ವತೆ ಬೀಸುವ ಗಾಳಿ. ಈ ಪ್ರಪಂಚದೊಳಗೆ ನಿನಗೆ ಪ್ರತಿಷ್ಠೆ ಏಕೆ? ಮನದಲ್ಲಿ ಮಗುವಾಗು, ಸಾಧುವಾಗು, ಬೆಳೆಯುವ ಸಸಿಯಂತಾಗು, ಕಸ ನಿವಾರಿಸುವ ಪೊರಕೆಯಂತಾಗು ಪ್ರಪಂಚಕ್ಕೆ.

ವಿವರಣೆ: ಊರಲ್ಲೊಬ್ಬ ದಡ್ಡ ಮನುಷ್ಯ. ಅವನಿಗೊಂದು ಹುಚ್ಚು ಹತ್ತಿತು. ತಾನೂ ಪಂಡಿತನಾಗಬೇಕು, ಜನ ತನ್ನನ್ನು ಪಂಡಿತನೆಂದು ಕರೆಯಬೇಕು. ಅವನಿಗೋ ಏನೂ ಗೊತ್ತಿಲ್ಲ. ಜನ ಅವನನ್ನು ಹೇಗೆ ಪಂಡಿತ ಎಂದು ಕರೆದಾರು? ಆತ ಹೋಗಿ ಬೀರ್ಬಲ್‌ನ ಮುಂದೆ ಅತ್ತುಕೊಂಡು ತನ್ನ ಅಪೇಕ್ಷೆಯನ್ನು ಹೇಳಿದ. ಬೀರಬಲ್ ಅವನಿಗೊಂದು ಸಲಹೆ ಕೊಟ್ಟ. 'ನೀನು ನಾಳೆ ರಸ್ತೆಯಲ್ಲಿ ಹೋಗುವಾಗ ಅನೇಕ ಮಕ್ಕಳು ನಿನ್ನನ್ನು 'ಪಂಡಿತ, ಪಂಡಿತ' ಎಂದು ಕೂಗುತ್ತಾರೆ. ಆಗ ನೀನು ಕೋಪ ಮಾಡಿಕೊಂಡವರಂತೆ ಅವರನ್ನು ಅಟ್ಟಿಸಿಕೊಂಡು ಹೋಗು'. ಅವನು ಹೇಳಿದಂತೆ ಇವನು ಹೋಗುವಾಗ ಮಕ್ಕಳು ಕೂಗುತ್ತ ಬಂದರು. ಅವರಿಗೆ ಹಾಗೆ ಮಾಡಲು ಹೇಳಿದವನೇ ಬೀರ್ಬಲ್. ಈ ಪೆದ್ದ ಅವರನ್ನು ಅಟ್ಟಿಸಿಕೊಂಡು ಹೋದಂತೆ ಮಾಡಿದ. ಮಕ್ಕಳಿಗೆ ತಮಾಷೆ. ಅಂದಿನಿಂದ ಅವನು ಎಲ್ಲಿಗೆ ಹೋದರೂ ಮಕ್ಕಳು 'ಪಂಡಿತ ಬಂದ' ಎನ್ನುತ್ತಿದ್ದರು. ಮುಂದೆ ಅದೇ ಹೆಸರು ಅವನಿಗೆ ಸ್ಥಿರವಾಗಿ, ಹಿರಿಯರು ಕೂಡ ಅವನನ್ನು ಪಂಡಿತ ಎಂದೇ ಕರೆದರಂತೆ. ಊರ ಜನ ಅವನನ್ನು ಗೌರವದಿಂದ ಪಂಡಿತ ಎಂದದ್ದಲ್ಲ, ಅವನ ಮೂರ್ಖತನಕ್ಕೆ, ತಮಾಷೆಗೆ ಹೇಳಿದ್ದು. ಹೆಸರು ಗಳಿಸುವ ಪ್ರಯತ್ನ, ಅವನ ಅಪಕ್ವತೆಯ ದ್ಯೋತಕ.

ಕಗ್ಗ ಆ ಮಾತನ್ನು ಹೇಳುತ್ತದೆ. ಹೆಸರು ಗಳಿಸಲು ಮಾಡುವ ಪ್ರಯತ್ನಗಳೆಲ್ಲ 'ಕಸುರು ಬೀಸುವ ಗಾಳಿ'. ಕಸುರು ಎನ್ನುವ ಪದಕ್ಕೆ ಎರಡು ಅರ್ಥಗಳಿವೆ. ಒಂದು ಅರ್ಥ, ಕೊಳಕು ಅಥವಾ ಹೊಲಸು. ಹೆಸರನ್ನು ಪಸರಿಸುವ ಯತ್ನಗಳೆಂದರೆ ಅದು ಕೊಳಕಿನ ಮೇಲೆ ಹಾದು ಬಂದ ಗಾಳಿ ಇದ್ದಂತೆ. ಆ ಕೊಳಕು ಒಂದೆಡೆಗೆ ಇದ್ದರೂ ಗಾಳಿಯಿಂದಾಗಿ ಅದು ಕೊಳಕುತನವನ್ನು ಊರಲೆಲ್ಲ ಪಸರಿಸುತ್ತದೆ. ಇನ್ನೊಂದು ಅರ್ಥ ಅಪಕ್ವತೆ. ತನ್ನತನವನ್ನು ಹೇಳಿಕೊಳ್ಳುವುದು ಮನಸ್ಸಿನ ಅಪಕ್ವತೆ. ತನ್ನ ಹೆಸರನ್ನು ಹಬ್ಬಿಸುವ ವ್ಯರ್ಥಪ್ರಯತ್ನವೇ ಅಪಕ್ವತೆ.

ಅಸಂಮಾನೇ ತಪೋವೃದ್ಧಿಃ ಸಂಮಾನಾಚ್ಚ ತಪಃ ಕ್ಷಯಃ |
ಪೂಜಯಾ ಪುಣ್ಯಹಾನಿಃ ಸ್ಯಾನ್ನಿಂದಯಾ ಸದ್ಗತಿ-ರ್ಭವೇತ್ ||

'ಸಂಮಾನಕ್ಕೆ ಆಸೆ ಪಡದಿದ್ದಷ್ಟೂ ತಪಸ್ಸು ಹೆಚ್ಚುತ್ತದೆ. ಪ್ರಸಿದ್ಧಿಯನ್ನು ಬಯಸಿದಷ್ಟು ತಪಸ್ಸು ಕಡಿಮೆಯಾಗುತ್ತದೆ. ಜನ ಮರ್ಯಾದೆ ತೋರಿದಷ್ಟೂ ಪುಣ್ಯ ನಷ್ಟವಾಗುತ್ತದೆ. ಜನರ ನಿಂದೆಯ ಬಗ್ಗೆ ಉದಾಸೀನವಾಗಿದ್ದಷ್ಟೂ ಸದ್ಗತಿಯಾಗುತ್ತದೆ'.

ಸ್ವವಿಕಾಸದ ಎತ್ತರದ ಹಂತಗಳನ್ನು ಕಂಡವರು ಹೆಸರಿನ ತಹತಹಕ್ಕೆ ಹೋಗುವುದಿಲ್ಲ. ಕಗ್ಗ ಒಂದು ಉಪದೇಶವನ್ನು ನೀಡುತ್ತದೆ. ಹೆಸರಿನ ಬಯಕೆಗೆ ಹೋಗಬೇಡ. ಮನದಲ್ಲಿ ಶಿಶುವಿನಂತೆ ಮುಗ್ಧನಾಗು, ಹಸುವಿನಂತೆ ಸಾಧುವಾಗು, ಸದಾ ಬೆಳೆಯುವ ಸಸಿಯಂತೆ ಧನಾತ್ಮಕವಾಗಿರು. ಅದಷ್ಟೇ ಅಲ್ಲ, ಹೆಸರಿನ ಕಸ ಹರಡುವದಕ್ಕಿಂತ ಕಸವನ್ನು ತೆಗೆದುಹಾಕುವ ಪೊರಕೆಯಂತಾಗು ಎನ್ನುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 23, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ದಶಮಿ ಗಂ. 21-42, ನಕ್ಷತ್ರ: ರೇವತಿ ಗಂ. 06-14 ಯೋಗ: ಅತಿಗಂಡ ಗಂ. 28-52, ಕರಣ: ವಣಿಜ ಗಂ. 09-09, ಮಿಥುನ ಮಾಸದ 08 ನೇ ದಿನ.
ರಾಹುಕಾಲ: ಮಧ್ಯಾಹ್ನ 01:30–03:00
ಸೂರ್ಯೋದಯ: 06-09 **ಸೂರ್ಯಾಸ್ತ:** 06-56
ಮುಸ್ಲಿಂ ದಿನಾಂಕ: 23 ಜುಲ್ಹಾಯದ್
ಅದೃಷ್ಟ ಸಂಖ್ಯೆ: 2, 5

ಮೇಷ: ಗುರಿಯನ್ನು ಮುಟ್ಟುವತ್ತ ನಿಮ್ಮ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ನಿಮ್ಮ ಯೋಜನೆಗಳು ನೀವು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿರುವುದು.

ವೃಷಭ: ಈ ದಿನ ಕಂಪೆನಿಯಲ್ಲಿ ಸಿಗುವ ಗೌರವವನ್ನು ಉಳಿಸಿಕೊಳ್ಳುವತ್ತ ಹೆಚ್ಚಿನ ಗಮನ ಹರಿಸುವುದು ಉತ್ತಮ. ಬಡಗಿ ಕೆಲಸ ಮಾಡುವವರಿಗೆ ಇಂದು ಸುಯೋಗದ ದಿನ. ಆತ್ಮೀಯರ ಭೇಟಿಯಾಗುವುದು.

ಮಿಥುನ: ನಿಮ್ಮ ಯೋಜನೆಗಳು ಅರ್ಧದಲ್ಲಿಯೇ ನಿಂತಿರುವುದರಿಂದ ಆಗಿದ್ದ ನಿರಾಸೆಯು ನಿಮ್ಮ ಆತ್ಮವಿಶ್ವಾಸದಿಂದ ಈ ದಿನ ಪುನಃ ಸಕಾರಾತ್ಮಕ ತಿರುವು ಪಡೆದುಕೊಳ್ಳಲಿದೆ. ಅದು ನಿಮ್ಮಲ್ಲಿ ಹೆಚ್ಚಿನ ಸಂತೋಷ ಮೂಡಿಸುವುದು.

ಕರ್ಕಾಟಕ: ಈ ದಿನ ದಿನಚರಿಯ ಹೊರತು ಪಡಿಸಿದ ಕೆಲಸಕ್ಕೆ ನಿಮ್ಮ ಸುಪ್ತ ಮನಸ್ಸು ಯೋಜನೆಗಳನ್ನು ಸ್ಥಗಿತಗೊಳಿಸುವಂತೆ ಆದೇಶಿಸುತ್ತಿದೆ. ನಿಮ್ಮ ಭಾವನೆಗಳಿಗೆ ಮಾನ್ಯತೆ ನೀಡುವುದು ನಿಮ್ಮ ಅಭ್ಯಾಸವಾಗಿರಲಿ.

ಸಿಂಹ: ನೀವು ಹಣಕಾಸಿನ ವಿಷಯದಲ್ಲಿ ಜಾಗರೂಕತೆ ವಹಿಸ ಬೇಕಾಗುವುದು. ಕಚೇರಿಯಲ್ಲಿದ್ದ ಭಿನ್ನಾಭಿಪ್ರಾಯಗಳು ಬಗೆಹರಿಯುವುದು. ಹೊಸ ಮನೆಯ ನಿರ್ಮಾಣದ ಕೆಲಸಗಳನ್ನು ಪೂರೈಸಿಕೊಳ್ಳುವ ಬಗ್ಗೆ ನಿಮ್ಮ ಹೆಚ್ಚಿನ ಗಮನವಿರಲಿ.

ಕನ್ಯಾ: ಸಹವರ್ತಿಗಳು ನಿಮ್ಮ ಬೆಂಬಲಕ್ಕೆ ಬರುವರು. ವೃತ್ತಿ ಅಥವಾ ಕೆಲಸಗಳಲ್ಲಿ ಬದಲಾವಣೆ ಸನ್ನಿಹಿತವಾಗಲಿದೆ. ಕಾರ್ಖಾನೆ ಕೆಲಸಗಾರರ ಬೇಡಿಕೆಗಳು ಇತ್ಯರ್ಥವಾಗುತ್ತದೆ. ದೇವತಾಕಾರ್ಯಗಳಿಂದ ಮನಸ್ಸಿಗೆ ನೆಮ್ಮದಿ ಸಿಗುವುದು.

ತುಲಾ: ವ್ಯವಹಾರಗಳಲ್ಲಿ ನಿಮ್ಮ ಪಾಲಿಗೇ ಹೆಚ್ಚಿನ ಜಯ ಇರಲಿದೆ. ಮಕ್ಕಳ ಜೊತೆ ದೂರದ ಪ್ರವಾಸದ ಸಾಧ್ಯತೆ. ಕೌಟುಂಬಿಕ ಸಮಸ್ಯೆಗಳಿಗೆ ಎದುರುತ್ತರ ನೀಡದಿರುವುದು ಅತ್ಯುನ್ನತ ಪರಿಹಾರವೆಂದು ಅನುಭವಕ್ಕೆ ಬರುತ್ತದೆ.

ವೃಶ್ಚಿಕ: ಧೀಮಂತರ ಸಹಕಾರದಿಂದ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಉತ್ತಮವಾಗಿ ನೆರವೇರಿಸಿಕೊಳ್ಳುವಿರಿ. ಅನಿರೀಕ್ಷಿತ ಕೆಲಸಗಳಿಂದ ಸಂತಸ ಹೆಚ್ಚುವುದು.

ಧನು: ಅಭಿವೃದ್ಧಿಗೆ ಬೇಕಾದ ಅದ್ಭುತ ಅವಕಾಶವು ದೇವರ ಆಶೀರ್ವಾದದಿಂದ ನಿಮ್ಮ ಪಾಲಿಗೆ ಸಿಗಲಿದೆ. ಕೆಲಸ-ಕಾರ್ಯವನ್ನು ಜಾಣ್ಮೆಯಿಂದ ಸೂಕ್ಷ್ಮವಾಗಿ ನಿರ್ವಹಿಸುವ ಬುದ್ಧಿವಂತಿಕೆಯನ್ನು ತೋರುವಿರಿ.

ಮಕರ: ನಿಮ್ಮ ದೃಷ್ಟಿಕೋನ ವಿಶಾಲವಾಗಿರುವುದರಿಂದ ವ್ಯವಹಾರ ಸುಗಮವಾಗಿ ನಡೆಯುವುದು. ಉತ್ತಮ ಧನಾಗಮನವಿದ್ದರೂ ಸಂತಸದ ಕೊರತೆ ಕಾಣಲಿದೆ.


ಕುಂಭ: ಹೊಸದಾಗಿ ಉದ್ಯೋಗಕ್ಕೆ ಸೇರಲು ಹೆಚ್ಚಿನ ಸಿದ್ಧತೆಯನ್ನು ನಡೆಸಿಕೊಳ್ಳಿರಿ ಹಾಗೂ ಉದ್ಯೋಗ ಸಿಗುವ ಸಮಯದಲ್ಲೇ ವೇತನದ ಬಗ್ಗೆ ಹೆಚ್ಚಿನ ಗಮನ ನೀಡುವುದು ಸರಿಯಲ್ಲ.

ಮೀನ: ಯಾವುದೇ ಗುತ್ತಿಗೆಯನ್ನು ನೀಡುವ ಮೊದಲು ಎಲ್ಲ ದಾಖಲೆಪತ್ರಗಳಲ್ಲಿ ಸೂಕ್ತ ಸಹಿ ಪಡೆದುಕೊಳ್ಳಲು ಮರೆಯದಿರಿ. ವ್ಯವಹಾರದಲ್ಲಿ ನಿಮ್ಮಿಂದಲೇ ತಪ್ಪುಗಳು ಸಂಭವಿಸಿ ನಷ್ಟವಾಗಬಹುದು. ದೂರ ಪ್ರಯಾಣದ ಸಂಭವವಿದೆ.

ಪದಬಂಧ 4997 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಡಗಿನ ಚುಕ್ಕಾಣಿ ಹಿಡಿದವನು (4)
2.ಹಿಮದ ಹತ್ತಿರ ಕೋಣ ಕಾಣಿಸಿದೆ (3)
4.ಶ್ರೀಕೃಷ್ಣನ ಸ್ನೇಹಿತ (3)
6.ಹಯಿಲಿಡುತ್ತಾ ಓದಿದ ಮರಣಪತ್ರ (3)
7.ಪ್ರೇಮಿಗಳ ಅಗಲಿಕೆಯ ಬೇನೆ (5)
10.ನೆಲವನ್ನು ಗೋಮಯದಿಂದ ಸಾರಿಸುವುದು (3)
11.ಸೊಕ್ಕು ಹೀಗೆ ಬಂದಿದೆ (3)
13.ನರ ನೋಡುತ್ತಿರುವ ಷಹರು (3)
14.ಇತರರಿಗೆ ವಹಿಸಿಕೊಡುವುದು (4)

ಮೇಲಿಂದ ಕೆಳಕ್ಕೆ
1.ಇನ್ನೂ ಕರು ಹಾಕದ ಹಸು (3)
2.ಮಡಿವಂತೆಯ ಉಡಿ! (3)
3.ಬರ ಬಂದಾಗ ನೀಡಿದ ಪಾನಕ (4)
5.ಮನದಿಂದ ಸಲ್ಲಿಸಿದ ಅರ್ಜಿ (3)
6.ದೃಷ್ಟಾಂತವನ್ನು ಹೀಗೆ ನೀಡಿ (5)
8.ಈ ಪರಿ ಕಾಣಿಸುತ್ತಿರುವ ಆವರಣ (3)
9.ಇದು ಹಾಸ್ಯ ನಾಟಕ (4)
10.ಹತ್ತು ನೂರಿದು (3)
12.ಅಶ್ವ ಇಲ್ಲಿಗೆ ಬಂದಿದೆ (4)



4996ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಪವಾಸ 3.ಮೃಗಜಲ 5.ತೊಗರಿ 6.ರಿಪು 7.ಒಣಹರಟೆ 10.ದ್ವೀಪ 12.ನೆನಪು 14.ನತದೃಷ್ಟ 15.ವರ್ಧಮಾನ

ಮೇಲಿಂದ ಕೆಳಕ್ಕೆ: 1.ಉಸಾಬರಿ 2.ಸಮೀಕರಣ 3.ಮೃತ್ಯು 4.ಲಬಾರಿನ 5.ತೊಗಟೆ 7.ಒನಪು 8.ರಜತೋತ್ಸವ 9.ಮನೆತನ 11.ಪರಿಜ್ಞಾನ 13.ಇಷ್ಟ

ಸುಡೊಕು 5383

				5		2		8
5		4	1		8		3	
	8	3		7			5	4
	6			3		1		2
2		5		1	7			
	3			8		5		6
		8			6		2	
3		2	7	4				
	5			2		4		1


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5382 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಷೇರುಪೇಟೆ ವಹಿವಾಟು 709



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	15,188
ಇಂದಿನ ಅಂತ್ಯ	15,413
▼	225
ದಿನದ ಕನಿಷ್ಠ	15,385

ವಿನಿಮಯ ದರ

$ ಡಾಲರ್	78.37
£ ಪೌಂಡ್	95.67
€ ಯುರೊ	82.10
¥ ಯೆನ್ (100ಕ್ಕೆ)	58

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹530
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹532

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1545 (1565)
ಸೋಯಾ (ರಿಫೈನ್ಡ್)	₹1335 (1357)
ಸೂರ್ಯಕಾಂತಿ (ರಿಫೈನ್ಡ್)	₹1700 (1700)
ಪಾಮೋಲಿನ್	₹1277 (1300)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹365-600
ದ್ವಿತಳಿ (ಬಿ.ವಿ)	₹408-786

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹173
ಆರ್ಎಸ್ಎಸ್-5	₹165
ಗುಡ್ ಲಾಟ್	₹157

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹600-1000

‘ಅಡುಗೆ ಎಣ್ಣೆ ದರ ಇಳಿಮುಖ’



ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಇಳಿಕೆ ಹಾಗೂ ಸಕಾಲದಲ್ಲಿ ಸರ್ಕಾರದ ಮಧ್ಯಪ್ರವೇಶದಿಂದಾಗಿ ಅಡುಗೆ ಎಣ್ಣೆಗಳ ಚಿಲ್ಲರೆ ಮಾರಾಟ ಬೆಲೆ ಇಳಿಕೆ ಆಗುತ್ತಿದೆ ಎಂದು ಆಹಾರ ಕಾರ್ಯದರ್ಶಿ ಸುಧಾನ್ಶು ಪಾಂಡೆ ತಿಳಿಸಿದ್ದಾರೆ.

ಕಡಲೆಕಾಯಿ ಎಣ್ಣೆ ಹೊರತುಪಡಿಸಿ ಉಳಿದೆಲ್ಲ ಅಡುಗೆ ಎಣ್ಣೆಗಳ ದರವು ಸದ್ಯ ಕೆ.ಜಿಗೆ ₹ 150ರಿಂದ ₹ 190ರ ನಡುವೆ ಇದೆ ಎಂದು ಸರ್ಕಾರ ತಿಳಿಸಿದೆ. ಕಳೆದ ವಾರ ಅದಾನಿ ವಿಲ್ಮರ್ ಮತ್ತು ಮದರ್ ಡೈರಿ ಕಂಪನಿಗಳು ಎಂಆರ್‌ಪಿಯನ್ನು ₹ 10ರಿಂದ ₹ 15ರವರೆಗೆ ಇಳಿಕೆ ಮಾಡಿವೆ.

ಗ್ರಾಹಕ ವ್ಯವಹಾರಗಳ ಸಚಿವಾಲಯದ ಮಾಹಿತಿಯ ಪ್ರಕಾರ, ಕಡಲೆಕಾಯಿ ಎಣ್ಣೆ ದರವು ಜೂನ್ 1ರಂದು ಕೆ.ಜಿಗೆ ₹ 86.43 ಇದ್ದಿದ್ದು ಜೂನ್ 21ರ ಅಂತ್ಯಕ್ಕೆ ₹ 188.14ಕ್ಕೆ ಬಂದಿದೆ. ಸಾಸಿವೆ ಎಣ್ಣೆ ದರ ₹ 183.68ರಿಂದ ₹ 180.85ಕ್ಕೆ ಇಳಿಕೆ ಆಗಿದೆ.

ಸೋಯಾ ಎಣ್ಣೆ ಬೆಲೆ ₹ 169.65ರಿಂದ ₹ 167.67ಕ್ಕೆ, ಸೂರ್ಯಕಾಂತಿ ಎಣ್ಣೆ ದರ ₹ 193ರಿಂದ ₹ 189.99ಕ್ಕೆ ಇಳಿಕೆ ಆಗಿದೆ. ತಾಳೆ ಎಣ್ಣೆ ದರವು ₹ 156.4ರಿಂದ ₹ 152.52ಕ್ಕೆ ಇಳಿಕೆ ಕಂಡಿದೆ.

ಚಾಲ್ತಿ ಖಾತೆ ಕೊರತೆ ಶೇ 1.2ರಷ್ಟು

ಮುಂಬೈ (ಪಿಟಿಐ): ದೇಶದ ಚಾಲ್ತಿ ಖಾತೆ ಕೊರತೆಯು (ಸಿಎಡಿ) 2021–22ರಲ್ಲಿ ಒಟ್ಟು ಜಿಡಿಪಿಯ ಶೇಕಡ 1.2ರಷ್ಟು ಆಗಿದೆ ಎಂದು ಆರ್‌ಬಿಐ ಹೇಳಿದೆ. 2020–21ರಲ್ಲಿ ಚಾಲ್ತಿ ಖಾತೆ ಮಿಗತೆ ಶೇ 0.9ರಷ್ಟು ಇತ್ತು.

ಚಾಲ್ತಿ ಖಾತೆ ಕೊರತೆ ಸೃಷ್ಟಿಯಾಗಿರುವುದಕ್ಕೆ ಮುಖ್ಯ ಕಾರಣ ವ್ಯಾಪಾರ ಕೊರತೆ ಜಾಸ್ತಿ ಆಗಿರುವುದು ಎಂದು ಆರ್‌ಬಿಐ ಹೇಳಿದೆ.

ಈ ವರ್ಷದ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಸಿಎಡಿಯು ಜಿಡಿಪಿಯ ಶೇಕಡ 1.5ಕ್ಕೆ ತಗ್ಗಿದೆ. ಇದು ಡಿಸೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಶೇ 2.6ರಷ್ಟು ಇತ್ತು.

ಹಣದುಬ್ಬರ: ಆರ್‌ಬಿಐ ಗವರ್ನರ್ ಕಳವಳ

ಮುಂಬೈ (ಪಿಟಿಐ): ಹಣದುಬ್ಬರ ದರವು ಹೆಚ್ಚಿನ ಮಟ್ಟದಲ್ಲಿಯೇ ಮುಂದುವರಿಯುವುದು ಅರ್ಥ ವ್ಯವಸ್ಥೆಯ ಪಾಲಿಗೆ ಕಳವಳ ಮೂಡಿಸುವ ಸಂಗತಿ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು ಹಣಕಾಸು ನೀತಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ರೆಪೊ ದರವನ್ನು ಶೇ 0.50ರಷ್ಟು ಹೆಚ್ಚಿಸುವ ತೀರ್ಮಾನ ಕೈಗೊಂಡ ಸಂದರ್ಭದಲ್ಲಿ ಅವರು ಈ ಮಾತು ಆಡಿದ್ದಾರೆ.

ಎಂಪಿಸಿ ಸಭೆಯ ವಿವರಗಳನ್ನು ಆರ್‌ಬಿಐ ಬುಧವಾರ ಪ್ರಕಟಿಸಿದೆ. ಹಣದುಬ್ಬರ ಇದ್ದರೂ ಆರ್ಥಿಕ ಚಟುವಟಿಕೆಗಳ ಪುನಶ್ಚೇತನವು ಆಗುತ್ತಿದೆ ಎಂದು ದಾಸ್ ಅವರು ಸಭೆಯಲ್ಲಿ ಹೇಳಿದ್ದಾರೆ.





ಮುಂಬೈ ಧಾರಣೆ

ಶೇಂಗಾ

22-6-2022

ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1555 (1575)
ಒಂದು ವಾರದ ಡೆಲಿವರಿ	1550 (1570)
ಸೋಯಾ ಕಚ್ಚಾ	1255 (1380)
ಪಾಮ್ ವಾರದ ಡೆಲಿವರಿ	1275 (1333)
ಸೂರ್ಯಕಾಂತಿ ಎಣ್ಣೆ ಕಚ್ಚಾ	1680 (1700)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,000 (50,700)
ಬೆಳ್ಳಿ ಕೆ.ಜಿ 60,700 (61,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಪುತ್ತೂರು	
ಕೋಕ	11000-26000
ಹೊಸತು	30500-43000
ಶಿವಮೊಗ್ಗ	
ಬೆಟ್ಟೆ	49790-52400
ಗೊರಬಲು	17000-37399
ರಾಶಿ	43869-49401
ಸರಕು	56899-75696
ಸಿದ್ದಾಪುರ	
ಬಿಳಿಗೋಟು	26399-31699
ಚಾಲಿ	34899-39500
ಕೋಕ	23191-32777
ಕೆಂಪುಗೋಟು	29689-32019
ರಾಶಿ	45009-48799
ತಟ್ಟಿಬೆಟ್ಟೆ	44399-46509
ಶಿರಸಿ	
ಬೆಟ್ಟೆ	33011-44699
ಬಿಳಿಗೋಟು	16899-33699
ಚಾಲಿ	35141-40152
ರಾಶಿ	45910-48199
ತಿಪಟೂರು ಕೊಬ್ಬರಿ	
ಕನಿಷ್ಠ	13800
ಗರಿಷ್ಠ	14400
ಮಾದರಿ	13800

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	16100	16100	233.20 ಸೆಂಟ್ಸ್
ಎಸಿ	9100	8600	8900	
ಆರ್‌ಪಿ	9750	9850	9975	ಲಂಡನ್
ಆರ್‌ಸಿ	4800	4500	4600	2087 ಡಾಲರ್ಸ್

ಷೇರುಪೇಟೆಯ ಎರಡು ದಿನಗಳ ಸಕಾರಾತ್ಮಕ ವಹಿವಾಟಿಗೆ ತಡೆ

ಲಾಭ ಗಳಿಕೆಗೆ ಕುಸಿದ ಸೂಚ್ಯಂಕ


ಮುಂಬೈ (ಪಿಟಿಐ): ಲಾಭ ಗಳಿಕೆಯ ವಹಿವಾಟಿಗೆ ಒಳಗಾಗಿ ದೇಶದ ಷೇರುಪೇಟೆಗಳ ಸೂಚ್ಯಂಕಗಳು ಬುಧವಾರ ಇಳಿಕೆ ಕಂಡವು. ಇದರಿಂದಾಗಿ ಎರಡು ದಿನಗಳ ಗಳಿಕೆಯ ವಹಿವಾಟಿಗೆ ಅಡ್ಡಿ ಉಂಟಾಯಿತು.

ವಿದೇಶಿ ಬಂಡವಾಳ ಹೊರಹರಿವಿನ ಜೊತೆಗೆ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ದಾಖಲೆಯ ಮಟ್ಟಕ್ಕೆ ಕುಸಿತ ಕಂಡಿರುವುದು ಸಹ ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 709 ಅಂಶ ಇಳಿಕೆ ಕಂಡು 51,822 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 225 ಅಂಶ ಇಳಿಕೆಯಾಗಿ 15,413 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ವರ್ಷಾಂತ್ಯದ ವೇಳೆಗೆ ನಿಫ್ಟಿ ಶೇಕಡ 6ರಷ್ಟು ಇಳಿಕೆ ಕಂಡು, 14,500 ಅಂಶಗಳಿಗೆ ಕುಸಿಯಲಿದೆ ಬಿಒಎಫ್‌ಎ ಸೆಕ್ಯುರಿಟೀಸ್

ಕೆಲವು ವಲಯಗಳ ಇಳಿಕೆ (%)



‘ಡಾಲರ್ ಮೌಲ್ಯವು ವೃದ್ಧಿಯಾಗುತ್ತಿದ್ದು, ಅಮೆರಿಕದ ಬಾಂಡ್ ಗಳಿಕೆಯು ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ಹೀಗಾಗಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಗೆ (ಎಫ್‌ಐಐ) ಭಾರತದ ಮಾರುಕಟ್ಟೆಗಳಲ್ಲಿ ಷೇರು ಮಾರಾಟ ನಿಲ್ಲಿಸಲು ಯಾವುದೇ ಕಾರಣ ಸಿಗುತ್ತಿಲ್ಲ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 4.19ರಷ್ಟು ಇಳಿಕೆ ಆಗಿ ಒಂದು ಬ್ಯಾರಲ್‌ಗೆ 109.8 ಡಾಲರ್‌ಗೆ ತಲುಪಿತು.

81ಕ್ಕಿಂತ ಕೆಳಮಟ್ಟಕ್ಕೆ ಬರಲಿದೆ ರೂಪಾಯಿ

ಮುಂಬೈ: ಪ್ರಸಕ್ತ ವರ್ಷದ ಅಂತ್ಯದ ಒಳಗೆ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 81ಕ್ಕಿಂತ ಕೆಳಗಿನ ಮಟ್ಟಕ್ಕೆ ಕುಸಿಯಲಿದೆ ಎಂದು ಬಿಒಎಫ್‌ಎ ಸೆಕ್ಯುರಿಟೀಸ್ ಅಂದಾಜಿಸಿದೆ. ಇದು ತಾನು ಈ ಹಿಂದೆ ಮಾಡಿದ್ದ ಅಂದಾಜಿಗಿಂತಲೂ ಕೆಳಗಿನ ಮಟ್ಟ ಎಂದು ಅದು ಹೇಳಿದೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಬುಧವಾರದ ವಹಿವಾಟಿನಲ್ಲಿ 21 ಪೈಸೆ ಕುಸಿದು 78.40ಕ್ಕೆ (ತಾತ್ಕಾಲಿಕ) ಇಳಿಕೆ ಕಂಡಿದೆ.

‘ಕಚ್ಚಾ ತೈಲ ಬೆಲೆ ಜಾಸ್ತಿ ಆಗಿರುವುದರಿಂದ ಮತ್ತು ಕೆಲವು ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿರುವುದರಿಂದ ರೂಪಾಯಿ ಮೌಲ್ಯ ಇನ್ನಷ್ಟು ಕುಸಿಯುವ ಸಾಧ್ಯತೆಯೂ ಹೆಚ್ಚಾಗಿದೆ’ ಎಂದು ಅದು ಹೇಳಿದೆ.

ಹೀಗಿದ್ದರೂ, ಆರ್‌ಬಿಐ ಬಳಿ ಇರುವ 600 ಬಿಲಿಯನ್ ಡಾಲರ್ ಮೀಸಲು, ರೂಪಾಯಿ ಮೌಲ್ಯ ಕುಸಿತ ತಡೆಯಲು ನೆರವಾಗಬಹುದು ಎಂದು ಕೂಡ ಬಿಒಎಫ್‌ಎ ಸೆಕ್ಯುರಿಟೀಸ್‌ನ ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಿನ್ನದ ದರ ₹205, ಬೆಳ್ಳಿ ₹ 926 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರ 10 ಗ್ರಾಂಗೆ ₹ 205ರಷ್ಟು ಇಳಿಕೆ ಆಗಿದ್ದು ₹ 50,487ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 926ರಷ್ಟು ಕಡಿಮೆ ಆಗಿ ₹ 59,959ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಐಟಿಸಿ: 220 ನೌಕರರಿಗೆ ₹ 1 ಕೋಟಿಗೂ ಹೆಚ್ಚು ಸಂಬಳ

ನವದೆಹಲಿ (ಪಿಟಿಐ): ದೇಶದ ಬೃಹತ್ ಕಂಪನಿಗಳ ಪೈಕಿ ಒಂದಾಗಿರುವ ‘ಐಟಿಸಿ’ಯಲ್ಲಿ 220 ನೌಕರರು ವಾರ್ಷಿಕ ₹ 1 ಕೋಟಿಗಿಂತ ಹೆಚ್ಚು ವೇತನ ಪಡೆಯುತ್ತಿದ್ದಾರೆ. ₹ 1 ಕೋಟಿಗಿಂತ ಹೆಚ್ಚು ವೇತನ ಪಡೆಯುವ ನೌಕರರ ಪ್ರಮಾಣವು 2021–22ರಲ್ಲಿ ಶೇಕಡ 44ರಷ್ಟು ಹೆಚ್ಚಳವಾಗಿದೆ.

2020–21ರಲ್ಲಿ ಇವರ ಸಂಖ್ಯೆ 153 ಆಗಿತ್ತು ಎಂದು ಕಂಪನಿಯು ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ.

ಕಂಪನಿಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಆಗಿರುವ ಸಂಜೀವ್ ಪುರಿ ಅವರ ವಾರ್ಷಿಕ ಒಟ್ಟು ಆದಾಯವು 2021–22ರಲ್ಲಿ ₹ 12.59 ಕೋಟಿ ಆಗಿದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 5.35ರಷ್ಟು ಹೆಚ್ಚು.

ವಿದ್ಯುತ್ ಚಾಲಿತ ಇವಿಟ್ರಿಕ್ ರೈಸ್ ಬೈಕ್ ಬಿಡುಗಡೆ

ಮುಂಬೈ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳನ್ನು ತಯಾರಿಸುವ ಇವಿಟ್ರಿಕ್ ಮೋಟರ್ಸ್ ಕಂಪನಿಯು ತನ್ನ ಮೊದಲ ಇ–ಬೈಕ್ ‘ಇವಿಟ್ರಿಕ್ ರೈಸ್’ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 1.60 ಲಕ್ಷ.

ಬುಧವಾರದಿಂದಲೇ ಇದರ ಬುಕಿಂಗ್ ಆರಂಭ ಆಗಿದ್ದು, ₹5 ಸಾವಿರ ಪಾವತಿಸಿ ಬುಕಿಂಗ್ ಮಾಡಬಹುದು ಎಂದು ಕಂಪನಿ ತಿಳಿಸಿದೆ. ಗರಿಷ್ಠ ವೇಗ ಪ್ರತಿ ಗಂಟೆಗೆ 70 ಕಿಲೋ ಮೀಟರ್ ಇದ್ದು, ಒಮ್ಮೆ ಪೂರ್ತಿ ಚಾರ್ಜ್ ಮಾಡಿದರೆ 110 ಕಿಲೋ ಮೀಟರ್ ಚಲಾಯಿಸಬಹುದು ಎಂದು ಕಂಪನಿ ತಿಳಿಸಿದೆ.

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ಲಾಭ ₹ 6.90 ಕೋಟಿ

ಬೆಂಗಳೂರು: ಚಾರ್ಟರ್ಡ್ ಸಹಕಾರಿ ಬ್ಯಾಂಕ್ 2022ರ ಮಾರ್ಚ್ ಅಂತ್ಯಕ್ಕೆ ತೆರಿಗೆ ಪಾವತಿಸಿದ ನಂತರ ₹ 6.90 ಕೋಟಿ ಲಾಭ ಗಳಿಸಿದೆ. ಒಟ್ಟಾರೆ ಠೇವಣಿ ಸಂಗ್ರಹ ₹ 232 ಕೋಟಿ ಇದ್ದು, ₹ 141 ಕೋಟಿ ಸಾಲ ನೀಡಲಾಗಿದೆ ಎಂದು ಬ್ಯಾಂಕ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಹೊಸ ಪಲ್ಸರ್ ಬೆಲೆ ₹ 1.28 ಲಕ್ಷ

ನವದೆಹಲಿ (ಪಿಟಿಐ): ಬಜಾಜ್ ಆಟೊ ಕಂಪನಿಯು ದೇಶದ ಮಾರುಕಟ್ಟೆಗೆ ಬುಧವಾರ ಹೊಸ ಪಲ್ಸರ್ ಎನ್160 ಬೈಕ್ ಬಿಡುಗಡೆ ಮಾಡಿದ್ದು, ಇದರ ಎಕ್ಸ್ ಷೋರೂಂ ಬೆಲೆ ₹ 1.28 ಲಕ್ಷ ಇದೆ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಬಿಡುಗಡೆ ಆಗಿರುವ ಪಲ್ಸರ್ 250 ಪ್ಲಾಟ್‌ಫಾರಂನಲ್ಲಿಯೇ ಹೊಸ ಪಲ್ಸರ್ ಎನ್160 ನಿರ್ಮಿಸಲಾಗಿದೆ. ಡ್ಯುಯಲ್ ಚಾನಲ್ ಎಬಿಎಸ್ ಒಳಗೊಂಡಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

165 ಸಿಸಿ ಎಂಜಿನ್ ಇದ್ದು, ಯುಎಸ್‌ಬಿ ಮೊಬೈಲ್ ಚಾರ್ಜಿಂಗ್, ಗಿಯರ್ ಪೊಸಿಷನ್ ಇಂಡಿಕೇಟರ್ ಸೇರಿದಂತೆ ಹಲವು ವೈಶಿಷ್ಟ್ಯಗಳನ್ನು ಇದು ಒಳಗೊಂಡಿದೆ ಎಂದು ಹೇಳಿದೆ.

ರಸ್ತೆ ಸವಾರಿಯ ಅನುಭವವನ್ನು ಕಟ್ಟಿಕೊಡಲು ಹೊಸ ಪಲ್ಸರ್ ಹೇಳಿ ಮಾಡಿಸಿದ್ದಾಗಿದೆ ಎಂದು ಕಂಪನಿಯ ಮೋಟರ್‌ಸೈಕಲ್ಸ್‌ನ ಅಧ್ಯಕ್ಷ ಸಾರಂಗ್ ಕಾನಡೆ ತಿಳಿಸಿದ್ದಾರೆ.

ಅಫ್ಗಾನಿಸ್ತಾನದಲ್ಲಿ ಕಂಪಿಸಿದ ಭೂಮಿ: 1,500 ಜನರಿಗೆ ಗಾಯ

ಭೂಕಂಪನ: ಸಾವಿರಕ್ಕೂ ಹೆಚ್ಚು ಸಾವು

ಕಾಬೂಲ್(ಎಪಿ): ಅಫ್ಗಾನಿಸ್ತಾನದ ಪೂರ್ವ ಭಾಗದಲ್ಲಿ ಬುಧವಾರ ನಸುಕಿನಲ್ಲಿ ಸಂಭವಿಸಿದ ಪ್ರಬಲ ಭೂಕಂಪನದಿಂದ ಒಂದು ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, ಅಂದಾಜು 1,500 ಜನರು ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಾರಿ ಸಾವು, ನೋವು ಹಾಗೂ ಆಸ್ತಿ ಹಾನಿ ಆಗಿರುವುದರಿಂದ ತಾಲಿಬಾನ್ ಸರ್ಕಾರವು ಪರಿಹಾರ ಕಾರ್ಯಾಚರಣೆಗೆ ಅಂತರರಾಷ್ಟ್ರೀಯ ನೆರವು ಕೇಳಿದೆ. ಅಫ್ಗನ್‌ನಲ್ಲಿ ಈವರೆಗೆ ಸಂಭವಿಸಿದ ಭೂಕಂಪನಗಳಲ್ಲಿ ಇದು ದಶಕದಲ್ಲೇ ಅತ್ಯಂತ ಭೀಕರವಾದುದು ಎಂದು ತಾಲಿಬಾನ್ ಸರ್ಕಾರ ಹೇಳಿದೆ.

ಪಾಕಿಸ್ತಾನ ಗಡಿ ಸಮೀಪದ ಪಕ್ತಿಕಾ ಪ್ರಾಂತ್ಯದ ಪರ್ವತ ಪ್ರದೇಶದಲ್ಲಿ ನೂರಾರು ಮನೆಗಳು, ಕಟ್ಟಡಗಳು ನೆಲ ಸಮವಾಗಿವೆ. ಭೂಕುಸಿತ ಉಂಟಾಗಿ, ಹಲವು ಜನರು ಅವಶೇಷಗಳಡಿ ಸಿಲುಕಿದ್ದಾರೆ ಎಂದು ಸರ್ಕಾರಿ ಸುದ್ದಿಸಂಸ್ಥೆ ‘ಬಖ್ತಾರ್’ ವರದಿ ಮಾಡಿದೆ.

ಭೂಕಂಪನದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 6.1 ದಾಖಲಾಗಿದೆ. ಕಂಪನದ ಕೇಂದ್ರಬಿಂದು 10 ಕಿ.ಮೀ. ಆಳದಲ್ಲಿತ್ತು. ಆಸ್ತಿ ಮತ್ತು ಜೀವಹಾನಿ ಹೆಚ್ಚಲು ಇದು ಕೂಡ ಕಾರಣ ಎಂದು ತಜ್ಞರು ಅಂದಾಜಿಸಿದ್ದಾರೆ.



ಅಫ್ಗಾನಿಸ್ತಾನದ ಪೂರ್ವ ಭಾಗದ ಪಕ್ತಿಕಾ ಪ್ರಾಂತ್ಯದಲ್ಲಿ ಬುಧವಾರ ನಸುಕಿನಲ್ಲಿ ಸಂಭವಿಸಿದ ಭೂಕಂಪನದಿಂದ ಮನೆಗಳು ನೆಲಸಮಗೊಂಡಿವೆ –ಎಪಿ/ಪಿಟಿಐ ಚಿತ್ರ

ಖೋಸ್ಟ್ ಪ್ರಾಂತ್ಯದ ಒಂದೇ ಜಿಲ್ಲೆಯಲ್ಲಿ ಭೂಕಂಪನದಿಂದ ಕನಿಷ್ಠ 25 ಜನರು ಸಾವನ್ನಪ್ಪಿದ್ದು, 95ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಕಾಬೂಲ್‌ನಲ್ಲಿ, ಪ್ರಧಾನಿ ಮೊಹಮ್ಮದ್ ಹಸನ್ ಅಖುಂದ್ ಅಧ್ಯಕ್ಷೀಯ ಅರಮನೆಯಲ್ಲಿ ಪರಿಹಾರ ಕಾರ್ಯಾಚರಣೆ ಸಂಬಂಧ ತುರ್ತು ಸಭೆ ನಡೆಯಿತು.

ಪಕ್ತಿಕಾ ಮತ್ತು ಖೋಸ್ಟ್ ಪ್ರಾಂತ್ಯಗಳಲ್ಲಿ ತಾಲಿಬಾನ್ ಅಧಿಕಾರಿಗಳು ತ್ವರಿತ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲು ಹೆಲಿಕಾಪ್ಟರ್‌ವರೆಗೆ ಕಂಬಳಿಯಲ್ಲಿ ಎತ್ತಿಕೊಂಡು ಹೋಗುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಯಾಗಿವೆ.

ಅಫ್ಗಾನಿಸ್ತಾನದ ತುರ್ತು ಸೇವೆ ಅಧಿಕಾರಿ ಶರಫುದ್ದೀನ್ ಮುಸ್ಲಿಂ, ‘2002ರ ನಂತರ ದೇಶದಲ್ಲಿ ಸಂಭವಿಸಿದ ಅತ್ಯಂತ ಭೀಕರ ಭೂಕಂಪನವಿದು’ ಎಂದು ಹೇಳಿದ್ದಾರೆ.

‘4 ಜಿಲ್ಲೆಗಳಲ್ಲಿ ತೀವ್ರ ಭೂಕಂಪನ ಸಂಭವಿಸಿದೆ. ಸಂತ್ರಸ್ತರ ನೆರವಿಗೆ ಸಂಸ್ಥೆಗಳು ಪರಿಹಾರ ತಂಡಗಳನ್ನು ಕಳುಹಿಸಬೇಕು’ ಎಂದು ತಾಲಿಬಾನ್ ಆಡಳಿತದ ಉಪ ವಕ್ತಾರ ಬಿಲಾಲ್ ಕರಿಮಿ ಟ್ವೀಟ್‌ನಲ್ಲಿ ಮನವಿ ಮಾಡಿದ್ದಾರೆ.

ಪಾಕ್‌ನಲ್ಲೂ ಭೂಕಂಪನ: ವ್ಯಕ್ತಿ ಸಾವು

ಇಸ್ಲಾಮಾಬಾದ್(ಪಿಟಿಐ): ಪಾಕಿಸ್ತಾನದ ಕೆಲವು ಭಾಗಗಳಲ್ಲಿ ಬುಧವಾರ ನಸುಕಿನಲ್ಲಿ ರಿಕ್ಟರ್ ಮಾಪಕದಲ್ಲಿ 6.1 ತೀವ್ರತೆಯ ಪ್ರಬಲ ಭೂಕಂಪನ ಸಂಭವಿಸಿದೆ. ಖೈಬರ್-ಪಖ್ತುಂಕ್ವಾ ಪ್ರಾಂತ್ಯದಲ್ಲಿ ಇದರಿಂದ ಮನೆಯ ಮೇಲ್ಛಾವಣಿ ಕುಸಿದು ವ್ಯಕ್ತಿ ಸಾವನ್ನಪ್ಪಿದ್ದಾರೆ.

‘ಭೂಕಂಪನದ ಕೇಂದ್ರಬಿಂದು ಅಫ್ಗಾನಿಸ್ತಾನದ ಖೋಸ್ಟ್‌ನ ನೈರುತ್ಯಕ್ಕೆ 44 ಕಿ.ಮೀ. ದೂರ ಮತ್ತು 50.8 ಕಿ.ಮೀ. ಆಳದಲ್ಲಿತ್ತು. ಮುಂಜಾನೆ 1.54ಕ್ಕೆ (ಸ್ಥಳೀಯ ಕಾಲಮಾನ) ಭೂಕಂಪನ ಸಂಭವಿಸಿದೆ. ಪೇಶಾವರ, ಇಸ್ಲಾಮಾಬಾದ್, ಲಾಹೋರ್ ಮತ್ತು ಪಂಜಾಬ್‌ನ ಇತರ ಭಾಗಗಳಲ್ಲೂ ಕಂಪನದ ಅನುಭವವಾಗಿದೆ’ ಎಂದು ಪಾಕಿಸ್ತಾನದ ಹವಾಮಾನ ಇಲಾಖೆ ಹೇಳಿದೆ.

ಲಂಡನ್: ಕೊಳಚೆಯಲ್ಲಿ ಪೋಲಿಯೊ ವೈರಸ್

ಲಂಡನ್ (ಪಿಟಿಐ): ಇಲ್ಲಿನ ಒಳ ಚರಂಡಿಯ ಮಾದರಿಗಳಲ್ಲಿ ಪೋಲಿಯೊ ವೈರಸ್ ಪತ್ತೆಯಾದ ನಂತರ ತಮ್ಮ ಮಕ್ಕಳಿಗೆ ಕಾಲ ಕಾಲಕ್ಕೆ ಲಸಿಕೆ ಹಾಕಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಬ್ರಿಟನ್‌ನ ಆರೋಗ್ಯ ಅಧಿಕಾರಿಗಳು ಬುಧವಾರ ಪೋಷಕರಿಗೆ ಮನವಿ ಮಾಡಿದ್ದಾರೆ.

ಫೆಬ್ರುವರಿ ಮತ್ತು ಮೇ ನಡುವೆ ತೆಗೆದ ಒಳಚರಂಡಿ ಮಾದರಿಗಳಲ್ಲಿ ಹಲವಾರು ವೈರಸ್‌ಗಳು ಕಂಡು ಬಂದ ನಂತರ ತನಿಖೆಗಳು ನಡೆಯುತ್ತಿವೆ. ವೈರಸ್ ವಿಕಸನಗೊಳ್ಳುವುದು ಮುಂದುವರೆಸಿದೆ. ಇದನ್ನು "ಲಸಿಕೆ-ಪಡೆದ" ಪೋಲಿಯೊವೈರಸ್ ಟೈಪ್ 2 (ವಿಡಿಪಿವಿ2) ಎಂದು ವರ್ಗೀಕರಿಸಲಾಗಿದೆ. ಇದು ಅಪರೂಪದ ಸಂದರ್ಭಗಳಲ್ಲಿ ಲಸಿಕೆ ಪಡೆಯದ ಜನರಲ್ಲಿ ಪಾರ್ಶ್ವವಾಯುಗಳಂತಹ ಗಂಭೀರ ಕಾಯಿಲೆಗೆ ಕಾರಣವಾಗಬಹುದು ಎಂದು ಎಂದು ಯುಕೆ ಹೆಲ್ತ್ ಸೆಕ್ಯುರಿಟಿ ಏಜೆನ್ಸಿ (ಯುಕೆಎಚ್‌ಎಸ್ಎ) ಎಚ್ಚರಿಸಿದೆ.


2003ರಲ್ಲಿ ಬ್ರಿಟನ್ ಅನ್ನು ಪೋಲಿಯೊ ಮುಕ್ತ ಎಂದು ಘೋಷಿಸಲಾಯಿತು.

ಶ್ರೀಲಂಕಾ ಪ್ರಧಾನಿ ರಾನಿಲ್ ವಿಕ್ರಮಸಿಂಘೆ

ಭಾರತದಿಂದ ಸಿಕ್ಕಿದ್ದು ದೇಣಿಗೆಯಲ್ಲ

ಕೊಲಂಬೊ(ಪಿಟಿಐ): ‘ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ನಮಗೆ ಭಾರತ ನೀಡಿದ ಹಣಕಾಸಿನ ನೆರವು ದತ್ತಿ ದೇಣಿಗೆಗಳಲ್ಲ’ ಎಂದು ಶ್ರೀಲಂಕಾದ ಸಂಸತ್ತಿಗೆ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರು ತಿಳಿಸಿದ್ದಾರೆ. ಅಲ್ಲದೆ, ಈ ಹಣಕಾಸಿನ ನೆರವಿನ ಸಾಲವನ್ನು ಮರುಪಾವತಿಸಲೇಬೇಕು ಎಂದು ಹೇಳಿದ್ದಾರೆ.

‘ಭಾರತದಿಂದ ನಾವು ಸಾಲದ ರೂಪದಲ್ಲಿ ₹31 ಸಾವಿರ ಕೋಟಿ ನೆರವು ಪಡೆದಿದ್ದೇವೆ. ದೇಶದ ಆರ್ಥಿಕತೆಯು ಸಂಪೂರ್ಣವಾಗಿ ಕುಸಿದಿದೆ. ದೇಶವು ಈಗ ಇಂಧನ, ಅಡುಗೆ ಅನಿಲ, ವಿದ್ಯುತ್ ಮತ್ತು ಆಹಾರವಷ್ಟೇ ಅಲ್ಲದೆ, ಇನ್ನೂ ಗಂಭೀರ ಪ್ರಮಾಣದ ಸಮಸ್ಯೆಯನ್ನು ಎದುರಿಸುತ್ತಿದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.



ರಾನಿಲ್ ವಿಕ್ರಮಸಿಂಘೆ

ಹೀಗಾಗಿ, ಅಂತರರಾಷ್ಟ್ರೀಯ ಹಣಕಾಸು ನಿಧಿ ಸಂಸ್ಥೆಯಿಂದ ಹೆಚ್ಚುವರಿ ಸಾಲ ಪಡೆಯಲು ಶೀಘ್ರವೇ ಒಪ್ಪಂದ ಏರ್ಪಡಬೇಕಿದೆ ಎಂದು ಪ್ರತಿಪಾದಿಸಿದರು.

ಭಾರತದ ನಿಯೋಗ ಭೇಟಿ: ವಿದೇಶಿ ವಿನಿಮಯದ ಕೊರತೆಯಿಂದ ಆರ್ಥಿಕ ದುಸ್ಥಿತಿಗೆ ಸಿಲುಕಿದ ಶ್ರೀಲಂಕಾಕ್ಕೆ ಭಾರತದಿಂದ ಮತ್ತೊಂದು ಸುತ್ತಿನ ಹಣಕಾಸಿನ ನೆರವಿನ ಅಗತ್ಯವಿದೆಯೇ ಎಂಬ ಪರಿಶೀಲನೆಗಾಗಿ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ನೇತೃತ್ವದ ಭಾರತ ಸರ್ಕಾರದ ನಿಯೋಗವು ಗುರುವಾರ ಶ್ರೀಲಂಕಾಕ್ಕೆ ಬರಲಿದೆ. ಈ ತಂಡವು, ಶ್ರೀಲಂಕಾದ ಆರ್ಥಿಕ ಪರಿಸ್ಥಿತಿ ಬಗ್ಗೆಯೂ ಅವಲೋಕಿಸಲಿದೆ.

ತೆಲಂಗಾಣದ ಯುವಕ ಗುಂಡೇಟಿಗೆ ಬಲಿ

ವಾಷಿಂಗ್ಟನ್(ಪಿಟಿಐ): ಅಮೆರಿಕದ ಮೇರಿಲ್ಯಾಂಡ್‌ನಲ್ಲಿ ಸ್ಪೋರ್ಟ್ಸ್ ಯುಟಿಲಿಟಿ ವಾಹನದಲ್ಲಿ ಗುಂಡಿನ ದಾಳಿಗೆ ತುತ್ತಾದಂತೆ ಕಂಡುಬಂದಿದ್ದ ತೆಲಂಗಾಣದ ನಲ್ಗೊಂಡ ನಗರದ ಯುವಕ ಸಾಯಿ ಚರಣ್ ನಕ್ಕಾ (25) ಮೃತಪಟ್ಟಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಹುಂಡೈ ಟಕ್ಸನ್ ಎಸ್‌ಯುವಿ ಕಾರಿನಲ್ಲಿದ್ದ ಸಾಯಿ ಚರಣ್ ನಕ್ಕಾ ಮೇಲೆ ಸೋಮವಾರ ಗುಂಡಿನ ದಾಳಿ ನಡೆದಿತ್ತು. ಅವರನ್ನು ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ, ಅವರು ಸ್ವಲ್ಪ ಹೊತ್ತಿನ ನಂತರ ಮೃತಪಟ್ಟರು ಎಂದು ಸ್ಥಳೀಯ ಸುದ್ದಿ ಸಂಸ್ಥೆ ವರದಿ ಮಾಡಿದೆ.

‘ಮಗ 2020ರ ಆಗಸ್ಟ್‌ನಲ್ಲಿ ಅಮೆರಿಕ್ಕೆ ಹೋಗಿದ್ದ. ಎಂಎಸ್ ಕೋರ್ಸ್ ಮುಗಿಸಿದ ನಂತರ, 6 ತಿಂಗಳಿಂದ ಮೇರಿಲ್ಯಾಂಡ್‌ನಲ್ಲಿ ಕೆಲಸ ಮಾಡುತ್ತಿದ್ದ. ಇತ್ತೀಚೆಗಷ್ಟೇ ಕಾರು ಖರೀದಿಸಿದ್ದ’ ಎಂದು ಯುವಕನ ತಂದೆ ನರಸಿಂಹ ತಿಳಿಸಿದ್ದಾರೆ. ಅಮೆರಿಕದಲ್ಲಿ ಗುಂಡಿನ ದಾಳಿಯಿಂದ ವರ್ಷಕ್ಕೆ 38,000ಕ್ಕೂ ಹೆಚ್ಚು ಮಂದಿ ಬಲಿಯಾಗುತ್ತಿದ್ದಾರೆ. 85,000ಕ್ಕೂ ಹೆಚ್ಚು ಮಂದಿ ಗಾಯಗೊಳ್ಳುತ್ತಿದ್ದಾರೆ ಎಂದು ಪಬ್ಲಿಕ್ ಹೆಲ್ತ್ ಅಸೋಸಿಯೇಷನ್ ಹೇಳಿದೆ.





ರಣಜಿ: ಮಧ್ಯಪ್ರದೇಶ ಬೌಲರ್‌ಗಳ ಮಿಂಚು; ಯಶಸ್ವಿ ಜೈಸ್ವಾಲ್ ಅರ್ಧಶತಕ

ಅನುಭವ್ ಶಿಸ್ತಿನ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ತಂಡವು ಈ ಬಾರಿಯ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಮತ್ತು ಸೆಮಿಫೈನಲ್‌ನಲ್ಲಿ ರನ್‌ಗಳ ರಾಶಿ ಪೇರಿಸಿತ್ತು. ಆದರೆ ಬುಧವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರಂಭವಾದ ಫೈನಲ್‌ನಲ್ಲಿ ಮಧ್ಯಪ್ರದೇಶದ ಬೌಲರ್‌ಗಳು ಮುಂಬೈ 'ಓಟ'ಕ್ಕೆ ತಡೆಯೊಡ್ಡಿದರು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಮುಂಬೈ ತಂಡವು ಮೊದಲ ದಿನದಾಟದ ಮುಕ್ತಾಯಕ್ಕೆ 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 248 ರನ್ ಗಳಿಸಿತು. ಈ ಋತುವಿನಲ್ಲಿ 800ಕ್ಕೂ ಹೆಚ್ಚು ರನ್ ಗಳಿಸಿರುವ ಸರ್ಫರಾಜ್ ಖಾನ್ (ಬ್ಯಾಟಿಂಗ್ 40; 125 ಎಸೆತ) ಮತ್ತು ಆಲ್‌ರೌಂಡರ್ ಶಮ್ಸ್ ಮಲಾನಿ (ಬ್ಯಾಟಿಂಗ್ 12, 43ಎಸೆತ) ಕ್ರೀಸ್‌ನಲ್ಲಿದ್ದಾರೆ. ಮುಂಬೈ ಇನಿಂಗ್ಸ್‌ಗೆ ಉತ್ತಮ ಆರಂಭ ನೀಡಿದ ನಾಯಕ ಪೃಥ್ವಿ ಶಾ (47; 79ಎ, 4X5, 6X1) ಮತ್ತು ಯಶಸ್ವಿ ಜೈಸ್ವಾಲ್ (78; 163ಎ) ಅವರ ವಿಕೆಟ್‌ಗಳನ್ನು ಗಳಿಸಿದ ಬಲಗೈ ಮಧ್ಯಮವೇಗಿ ಅನುಭವ್ ಅಗರವಾಲ್ ಮುಂಬೈ ತಂಡದ ಬೃಹತ್ ಮೊತ್ತದ ಗುರಿಗೆ ಅಡ್ಡಿಯಾದರು.



ಮಧ್ಯಪ್ರದೇಶ ತಂಡದ ಅನುಭವ್ ಅಗರವಾಲ್ –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಯಶಸ್ವಿ ಕಳೆದ ಮೂರು ಇನಿಂಗ್ಸ್‌ಗಳಲ್ಲಿಯೂ ಶತಕ ದಾಖಲಿಸಿದ್ದರು. ಇಲ್ಲಿಯೂ ಕೂಡ ಅವರು ಶತಕದತ್ತ ಹೆಜ್ಜೆ ಇಟ್ಟಿದ್ದರು. ಆದರೆ ಊಟದ ನಂತರದ ಅವಧಿಯಲ್ಲಿ ಯಶ್ ದುಬೆ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು.

ಅವರಿಗೆ ಉತ್ತಮ ಜೊತೆ ನೀಡಿದ ಆಫ್‌ಸ್ಪಿನ್ನರ್ ಸಾರಾಂಶ್ ಜೈನ್ (31ಕ್ಕೆ2) ಅರ್ಮಾನ್ ಜಾಫರ್ ಮತ್ತು ಹಾರ್ದಿಕ್ ತಮೊರೆ ವಿಕೆಟ್‌ಗಳನ್ನು ಕಬಳಿಸಿ ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು. ಸೆಮಿಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಹಾರ್ದಿಕ್ ಮತ್ತು ಎರಡನೇಯದ್ದರಲ್ಲಿ ಜಾಫರ್ ಶತಕ ಗಳಿಸಿದ್ದರು.

ದೇಶಿ ಕ್ರಿಕೆಟ್‌ನಲ್ಲಿ 'ಚಾಂಪಿಯನ್ ಕೋಚ್' ಎಂದೇ ಹೆಸರು ಗಳಿಸಿರುವ ಚಂದ್ರಕಾಂತ್ ಪಂಡಿತ್ ಮಾರ್ಗದರ್ಶನದ ಮಧ್ಯಪ್ರದೇಶ ತಂಡದ ಬೌಲರ್‌ಗಳು ಶಿಸ್ತಿನ ದಾಳಿ ನಡೆಸಿದರು. ಇದರಿಂದಾಗಿ ಮುಂಬೈ ಬ್ಯಾಟರ್‌ಗಳು ಸರಾಗವಾಗಿ ರನ್ ಗಳಿಸಲು ಸಾಧ್ಯವಾಗಲಿಲ್ಲ.

ಮುಂಬೈ 42ನೇ ರಣಜಿ ಟ್ರೋಫಿ ಜಯದತ್ತ ಕಣ್ಣು ನೆಟ್ಟಿದೆ. ಮಧ್ಯಪ್ರದೇಶ ತಂಡವು ಚೊಚ್ಚಲ ಪ್ರಶಸ್ತಿ ಗೆಲುವಿನ ಛಲದಲ್ಲಿದೆ.

ಆರ್‌ಸಿಬಿ..ಆರ್‌ಸಿಬಿ..

ಪಂದ್ಯ ವೀಕ್ಷಿಸಲು ಸೇರಿದ್ದ ಪ್ರೇಕ್ಷಕರು 'ಆರ್‌ಸಿಬಿ.. ಆರ್‌ಸಿಬಿ..' ಎಂದು ಪದೇ ಪದೇ ಕೂಗಿದರು. ಮುಂಬೈ ತಂಡದ ಬ್ಯಾಟರ್‌ಗಳು, ಬೌಂಡರಿ ಗಳಿಸಿದಾಗ ಅಥವಾ ವಿಕೆಟ್‌ಗಳು ಉರುಳಿದಾಗಲೆಲ್ಲ ಪ್ರೇಕ್ಷಕರು ಆರ್‌ಸಿಬಿ.. ಆರ್‌ಸಿಬಿ..ಎಂದು ಕೂಗುತ್ತಿದ್ದರು.

ಚಿನ್ನಸ್ವಾಮಿ ಕ್ರೀಡಾಂಗಣ 'ಶತಕ'

ಮುಂಬೈ ಮತ್ತು ಮಧ್ಯಪ್ರದೇಶ ನಡುವಣ ಪಂದ್ಯದ ಆಯೋಜನೆಯೊಂದಿಗೆ ಚಿನ್ನಸ್ವಾಮಿ ಕ್ರೀಡಾಂಗಣವು ದೇಶಿ ಕ್ರಿಕೆಟ್ ಇತಿಹಾಸದಲ್ಲಿ ವಿನೂತನ ದಾಖಲೆಯನ್ನು ಬರೆಯಿತು.

ಒಟ್ಟಾರೆ 100ನೇ ರಣಜಿ ಪಂದ್ಯವನ್ನು ಆಯೋಜಿಸಿದ ಶ್ರೇಯಕ್ಕೆ ಚಿನ್ನಸ್ವಾಮಿ ಕ್ರೀಡಾಂಗಣವು ಭಾಜನವಾಯಿತು.

'ನೂರು ಪಂದ್ಯಗಳ ಪೈಕಿ 98ರಲ್ಲಿ ಮೈಸೂರು/ಕರ್ನಾಟಕ ತಂಡ ಆಡಿದೆ. ಅದರಲ್ಲಿ 46ರಲ್ಲಿ ಗೆಲುವು, 8ರಲ್ಲಿ ಸೋಲು ಮತ್ತು 44ರಲ್ಲಿ ಡ್ರಾ ಸಾಧಿಸಿದೆ. 2008–09ರಲ್ಲಿ ತಮಿಳುನಾಡು ಮತ್ತು ಬಂಗಾಳ ಕ್ವಾರ್ಟರ್‌ಫೈನಲ್ ಹಾಗೂ ಈಗ ಮುಂಬೈ ಮತ್ತು ಮಧ್ಯಪ್ರದೇಶ ತಂಡಗಳು ಫೈನಲ್ ಆಡುತ್ತಿವೆ. ಬೆಂಗಳೂರಿನಲ್ಲಿ ಮೊದಲಿನಿಂದಲೂ ಸೆಂಟ್ರಲ್ ಕಾಲೇಜು ಮೈದಾನದಲ್ಲಿಯೂ ರಣಜಿ ಪಂದ್ಯಗಳು ನಡೆದಿವೆ. ಇತ್ತೀಚೆಗೆ ಆಲೂರಿನ ಕ್ರೀಡಾಂಗಣದಲ್ಲಿ, ಜಸ್ಟ್ ಕ್ರಿಕೆಟ್ ಮೈದಾನಗಳಲ್ಲಿಯೂ ರಣಜಿ ಪಂದ್ಯಗಳು ನಡೆದಿವೆ. ಆದರೆ 100 ರಣಜಿ ಪಂದ್ಯಗಳನ್ನು ಆಯೋಜಿಸಿದ ಹೆಗ್ಗಳಿಕೆ ಚಿನ್ನಸ್ವಾಮಿ ಕ್ರೀಡಾಂಗಣದ್ದಾಗಿದೆ' ಎಂದು ದೇಶಿ ಕ್ರಿಕೆಟ್ ಅಂಕಿ ಅಂಶ ಪರಿಣತ ಚನ್ನಗಿರಿ ಕೇಶವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

ಸ್ಕೋರ್ ಕಾರ್ಡ್

ಮುಂಬೈ ಮೊದಲ ಇನಿಂಗ್ಸ್ 5ಕ್ಕೆ248 (90 ಓವರ್‌ಗಳಲ್ಲಿ)

ಪೃಥ್ವಿ ಬಿ ಅನುಭವ್ 47 (79ಎ, 4X5, 6X1), ಯಶಸ್ವಿ ಸಿ ದುಬೆ ಬಿ ಅನುಭವ್ 78 (163ಎ, 4X7, 6X1), ಅರ್ಮಾನ್ ಸಿ ದುಬೆ ಬಿ ಕುಮಾರ್ 26 (56ಎ, 4X3), ಸುವೇದ್ ಸಿ ಶ್ರೀವಾಸ್ತವ ಬಿ ಸಾರಾಂಶ್ 18 (30ಎ, 4X2), ಸರ್ಫರಾಜ್ ಬ್ಯಾಟಿಂಗ್ 40 (125ಎ, 4X3), ತಮೊರೆ ಸಿ ರಜತ್ ಬಿ ಸಾರಾಂಶ್ 24 (44ಎ, 4X3), ಶಮ್ಸ್ ಬ್ಯಾಟಿಂಗ್ 12 (43ಎ, 4X1)

ಇತರೆ 3(ಬೈ 1, ಲೆಗ್‌ಬೈ 1, ವೈಡ್ 1)

ವಿಕೆಟ್ ಪತನ: 1–87 (ಪೃಥ್ವಿ ಶಾ;27.4), 2–120 (ಅರ್ಮಾನ್ ಜಾಫರ್; 40.6), 3–147 (ಸುವೇದ್ ಜಾಫರ್; 50.1), 4–185 (ಯಶಸ್ವಿ ಜೈಸ್ವಾಲ್; 59.4), 5–228 (ಹಾರ್ದಿಕ್ ತಮೊರೆ; 74.5)

ಬೌಲಿಂಗ್: ಕುಮಾರ್ ಕಾರ್ತಿಕೇಯ ಸಿಂಗ್ 31–6–91–1, ಅನುಭವ್ ಅಗರವಾಲ್ 19–3–56–2, ಸಾರಾಂಶ್ ಜೈನ್ 17–2–31–2, ಗೌರವ್ ಯಾದವ್ 23–5–68–0.



ಮುಂಬೈ ತಂಡದ ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್

ಏಷ್ಯನ್ ಸೈಕ್ಲಿಂಗ್: ರೊನಾಲ್ಡೊಗೆ ಬೆಳ್ಳಿ



ರೊನಾಲ್ಡೊ

ನವದೆಹಲಿ (ಪಿಟಿಐ): ತಮ್ಮ ವೃತ್ತಿಜೀವನದ ಶ್ರೇಷ್ಠ ಸಾಧನೆ ತೋರಿದ ಭಾರತದ ರೊನಾಲ್ಡೊ ಸಿಂಗ್ ಅವರು ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗಳಿಸಿದರು.

ಸೀನಿಯರ್ ವಿಭಾಗದ ಸ್ಪ್ರಿಂಟ್ ಸ್ಪರ್ಧೆಯಲ್ಲಿ ಅವರಿಗೆ ಪದಕ ಒಲಿಯಿತು. ಬುಧವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನಲ್ಲಿ ರೊನಾಲ್ಡೊ ಮೂರನೇ ಪದಕ ತಮ್ಮದಾಗಿಸಿಕೊಂಡರು. ಸೀನಿಯರ್ ಸ್ಪ್ರಿಂಟ್‌ನಲ್ಲಿ ಜಪಾನ್‌ನ ಕೆಂಟೊ ಯಮಸಕಿ ಚಿನ್ನ ಜಯಿಸಿದರೆ, ಕಜಕಸ್ತಾನದ ಆ್ಯಂಡ್ರೆ ಚುಗಾಯ್ ಕಂಚು ಗೆದ್ದರು.

ಜೂನಿಯರ್ ವಿಭಾಗದ 15 ಕಿ.ಮೀ. ಪಾಯಿಂಟ್ಸ್ ರೇಸ್‌ನಲ್ಲಿ ಬಿರ್ಜಿತ್ ಯುಮ್ನಾನ್ ಮತ್ತು ಮಹಿಳೆಯರ 10 ಕಿ.ಮೀ. ಸ್ಕ್ರ್ಯಾಚ್ ರೇಸ್‌ನಲ್ಲಿ ಚಾಯಾನಿಕಾ ಗೊಗೊಯಿ ಕಂಚು ತಮ್ಮದಾಗಿಸಿಕೊಂಡರು.

ಭಾರತ (2 ಚಿನ್ನ, 6 ಬೆಳ್ಳಿ ಮತ್ತು 15 ಕಂಚು) ಪದಕಪಟ್ಟಿಯಲ್ಲಿ ಐದನೇ ಸ್ಥಾನ ಗಳಿಸಿತು. ಜಪಾನ್ (18 ಚಿನ್ನ, 7 ಬೆಳ್ಳಿ ಮತ್ತು 2 ಕಂಚು) ಅಗ್ರಸ್ಥಾನ ಗಳಿಸಿತು.

ಕೊಹ್ಲಿಗೆ ಕೋವಿಡ್

ನವದೆಹಲಿ: ಮಾಲ್ಡೀವ್ಸ್ ಪ್ರವಾಸದಿಂದ ಹಿಂದಿರುಗಿದ ಭಾರತ ಕ್ರಿಕೆಟ್ ತಂಡದ ಆಟಗಾರ ವಿರಾಟ್ ಕೊಹ್ಲಿ ಅವರಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಡಿಎನ್‌ಎ ವೆಬ್‌ಸೈಟ್ ವರದಿ ಮಾಡಿದೆ.

ಇತ್ತೀಚೆಗೆ ಮುಕ್ತಾಯಗೊಂಡ ದಕ್ಷಿಣ ಆಫ್ರಿಕಾ ವಿರುದ್ಧದ ಟಿ–20 ಸರಣಿಯಿಂದ ವಿಶ್ರಾಂತಿ ಪಡೆದಿದ್ದ ವಿರಾಟ್ ಕೊಹ್ಲಿ, ಪತ್ನಿ ಅನುಷ್ಕಾ ಶರ್ಮಾ ಮತ್ತು ಮಗಳು ವಾಮಿಕಾ ಅವರೊಂದಿಗೆ ಮಾಲ್ಡೀವ್ಸ್‌ಗೆ ಪ್ರವಾಸಕ್ಕೆ ತೆರಳಿದ್ದರು.

ಮಹಿಳಾ ಟಿ–20 ಕ್ರಿಕೆಟ್: ಮೊದಲ ಪಂದ್ಯ ಇಂದು

ಭಾರತಕ್ಕೆ ಶ್ರೀಲಂಕಾ ಸವಾಲು

ಡಂಬುಲಾ (ಪಿಟಿಐ): ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ಭಾರತ ತಂಡದ ನಾಯಕತ್ವ ವಹಿಸಿರುವ ಹರ್ಮನ್‌ಪ್ರೀತ್ ಕೌರ್ ಗುರುವಾರ ಮೊದಲ ಟಿ20 ಪಂದ್ಯದಲ್ಲಿ ಶ್ರೀಲಂಕಾ ತಂಡದ ಸವಾಲಿಗೆ ಸಜ್ಜಾಗಿದ್ದಾರೆ.

ಮೂರು ಪಂದ್ಯಗಳ ಸರಣಿಯ ಮೊದಲ ಹಣಾಹಣಿ ಇಲ್ಲಿ ನಡೆಯಲಿದ್ದು, ಮುಂಬರುವ ಕಾಮನ್‌ವೆಲ್ತ್ ಗೇಮ್ಸ್ ಮತ್ತು ಟಿ20 ವಿಶ್ವಕಪ್ ಟೂರ್ನಿಗೆ ಸಿದ್ಧವಾಗುತ್ತಿರುವ ಭಾರತ ತಂಡವು ಇಲ್ಲಿ ಉತ್ತಮ ಸಾಮರ್ಥ್ಯ ತೋರುವ ತವಕದಲ್ಲಿದೆ.

2022ರ ವಿಶ್ವಕಪ್ ಬಳಿಕ ಭಾರತ ಆಡಲಿರುವ ಮೊದಲ ಸರಣಿ ಇದು. ಈ ತಿಂಗಳ ಆರಂಭದಲ್ಲಿ ತಂಡದ ಪ್ರಮುಖ ಆಟಗಾರ್ತಿ ಮಿಥಾಲಿ ರಾಜ್ ಎಲ್ಲ ಮಾದರಿಗಳಿಗೆ ವಿದಾಯ ಹೇಳಿದ್ದರು. ಅವರ ಅನುಪಸ್ಥಿತಿಯಲ್ಲಿ ತಂಡ ಮೊದಲ ಬಾರಿ ಕಣಕ್ಕಿಳಿಯಲಿದೆ.

ಮಿಥಾಲಿ ದಾಖಲೆ ಮೀರುವತ್ತ ಹರ್ಮನ್‌ಪ್ರೀತ್: 33 ವರ್ಷದ ಬ್ಯಾಟರ್ ಹರ್ಮನ್‌ಪ್ರೀತ್ ಟಿ20 ಮಾದರಿಯಲ್ಲಿ ಮಿಥಾಲಿ ದಾಖಲೆಯನ್ನು ಮೀರುವ ಹಾದಿಯಲ್ಲಿದ್ದಾರೆ. 121 ಪಂದ್ಯಗಳನ್ನು ಆಡಿರುವ ಹರ್ಮನ್‌ಪ್ರೀತ್ 2319 ರನ್ ಕಲೆಹಾಕಿದ್ದು, ಇನ್ನು 46 ರನ್ ಗಳಿಸಿದರೆ ಮಿಥಾಲಿ (2364) ಅವರ ರನ್ ದಾಖಲೆ ಮೀರಲಿದ್ದಾರೆ.

ಪಾಕಿಸ್ತಾನ ಎದುರು ಇತ್ತೀಚೆಗೆ ನಡೆದ ಟಿ20 ಸರಣಿಯಲ್ಲಿ 0–3ರಿಂದ ವೈಟ್‌ವಾಶ್ ಅನುಭವಿಸಿರುವ ಶ್ರೀಲಂಕಾ ತಂಡವು ಈ ಪಂದ್ಯದ ಮೂಲಕ ಪುಟಿದೇಳುವ ಹಂಬಲದಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 2.30 (ಭಾರತೀಯ ಕಾಲಮಾನ).

ಕ್ರಿಕೆಟ್‌ಗೆ ಮರಳಿದ ಖಾಜಿ

• ರೋಷನ್ ತ್ಯಾಗರಾಜನ್

ಬೆಂಗಳೂರು: ಮೂರು ವರ್ಷಗಳ ಹಿಂದೆ ಕರ್ನಾಟಕ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ನಡೆದಿತ್ತೆನ್ನಲಾದ ಮ್ಯಾಚ್ ಫಿಕ್ಸಿಂಗ್ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಆಟಗಾರ ಅಬ್ರಾರ್ ಖಾಜಿ ಕ್ರಿಕೆಟ್‌ಗೆ ಮರಳಿದ್ದಾರೆ.

2019ರಲ್ಲಿ ಪ್ರಕರಣ ನಡೆದಿತ್ತು. ಆಗ ಕರ್ನಾಟಕ ತಂಡದ ಮಾಜಿ ನಾಯಕ ಸಿ.ಎಂ. ಗೌತಮ್, ಅಮಿತ್ ಮಾವಿ ಮತ್ತು ಬೆಳಗಾವಿ ಪ್ಯಾಂಥರ್ಸ್ ತಂಡದ ಮಾಲೀಕರನ್ನು ಪೊಲೀಸರು ಬಂಧಿಸಿ ತನಿಖೆ ಮಾಡಿದ್ದರು. ಕಳೆದ ಜನವರಿಯಲ್ಲಿ ನಾಲ್ವರು ಆಟಗಾರರನ್ನು ಕರ್ನಾಟಕ ಹೈಕೋರ್ಟ್ ಆರೋಪ ಮುಕ್ತಗೊಳಿಸಿತ್ತು. ಇದರಿಂದಾಗಿ ನಿರಾಳವಾಗಿರುವ ಅಬ್ರಾರ್, ಜವಾನ್ಸ್ ಕ್ರಿಕೆಟ್ ಕ್ಲಬ್‌ನಲ್ಲಿ ಅಭ್ಯಾಸ ನಡೆಸುತ್ತಿದ್ದಾರೆ. ಕೆಎಸ್‌ಸಿಎ ದ್ವಿತೀಯ ಡಿವಿಷನ್ ಮೊದಲ ಗುಂಪಿನಲ್ಲಿ ಆಡಲಿದ್ದಾರೆ.

'ಬಹಳ ಕಷ್ಟದ ಸಮಯ ಇದಾಗಿತ್ತು. ಪತ್ನಿ, ಕುಟುಂಬ ಮತ್ತು ಆಪ್ತ ಸ್ನೇಹಿತರು ನಾನು ಕುಸಿಯದಂತೆ ನೋಡಿಕೊಂಡರು. ಅವರ ಬೆಂಬಲದಿಂದ ಕಠಿಣ ಸಮಯವನ್ನು ಎದುರಿಸಲು ಸಾಧ್ಯವಾಯಿತು. ಎರಡು ಮೂರು ವರ್ಷಗಳ ಅವಧಿಯಲ್ಲ ರಾಜ್ಯದ ಕೆಲವು ಯುವ ಆಟಗಾರರಿಗೆ ತರಬೇತಿ ನೀಡಲು ಸಮಯ ವಿನಿಯೋಗಿಸಿದೆ. ಅದರಿಂದಾಗಿ ನನ್ನ ಆತ್ಮಸ್ಥೈರ್ಯ ವೃದ್ಧಿಯಾಯಿತು. ಈಗ ಮತ್ತೆ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳುತ್ತಿರುವುದು ಸಂತಸವಾಗಿದೆ' ಎಂದು ಎಡಗೈ ಸ್ಪಿನ್ನರ್ ಖಾಜಿ ಹೇಳಿದರು.



ಅಬ್ರಾರ್ ಖಾಜಿ

'ನಡೆದು ಹೋದ ಘಟನೆಯ ಕುರಿತು ಇಲ್ಲಿಯವರೆಗೂ ನನ್ನ ಹಳೆಯ ಸ್ನೇಹಿತರಾಗಲಿ ಮತ್ತು ತಂಡದ ಸಹ ಆಟಗಾರರಾಗಲಿ ಪ್ರಸ್ತಾಪ ಮಾಡಿಲ್ಲ. ಆ ಮೂಲಕ ಅವರು ನನ್ನ ಆತ್ಮವಿಶ್ವಾಸ ವೃದ್ಧಿಯಾಗಲು ಕಾರಣರಾಗಿದ್ದಾರೆ. ತರಬೇತಿ ಪಡೆಯುವ ಮಕ್ಕಳ ಪಾಲಕರು ಕೂಡ ನನ್ನನ್ನು ಪ್ರೋತ್ಸಾಹಿಸಿದ್ದಾರೆ' ಎಂದು ಖಾಜಿ ಕೃತಜ್ಞತೆ ಸಲ್ಲಿಸುತ್ತಾರೆ.

ಸ್ಕ್ವಾಷರ್ಸ್‌ಗೆ ಜಯ

ಬೆಂಗಳೂರು: ಫ್ಲೈಯಿಂಗ್ ಡೆವಿಲ್ಸ್ ತಂಡವು ಬೆಂಗಳೂರು ಸ್ಕ್ವಾಷ್ ಲೀಗ್‌ನಲ್ಲಿ ಬುಧವಾರ 4–3ರಿಂದ ಸ್ಕ್ವಾವ್ ಸ್ಟ್ರೈಕರ್ಸ್ ಎದುರು ಗೆದ್ದಿತು. ಮತ್ತೊಂದು ಪಂದ್ಯದಲ್ಲಿ ಸ್ಮ್ಯಾಷಿಂಗ್ ಸ್ಕ್ವಾಷರ್ಸ್ 4–3ರಿಂದ ರೇಜಿಂಗ್ ರ್‍ಯಾಕೆಟ್ಸ್ ವಿರುದ್ಧ ಜಯಿಸಿತು.

29ರಿಂದ ಟಿಟಿ

ಬೆಂಗಳೂರು: ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯು (ಕೆಟಿಟಿಎ) ಇದೇ 29ರಿಂದ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯನ್ನು ಆಯೋಜಿಸಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಜುಲೈ 3ರವರೆಗೆ 11, 13, 15, 17 ಮತ್ತು 19 ವರ್ಷದೊಳಗಿನವರು, ಎನ್‌ಎಂಎಸ್, ಪುರುಷ ಮತ್ತು ಮಹಿಳಾ ಸಿಂಗಲ್ಸ್ ವಿಭಾಗಗಳಲ್ಲಿ ಟೂರ್ನಿ ನಡೆಯಲಿದೆ. ನೋಂದಾವಣೆ ಮತ್ತು ಮಾಹಿತಿಗಾಗಿ http://karnatakatt.com/ktta2022 ವೆಬ್‌ಸೈಟ್ ಮತ್ತು ಶ್ರೀ ರವಿ ನಾಯಕ್ (ಮೊಬೈಲ್ ಸಂಖ್ಯೆ 9845545933) ಅವರನ್ನು ಸಂಪರ್ಕಿಸಬೇಕು ಎಂದು ಕೆಟಿಟಿಎ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ವಿಮಾನಪುರ, ವಿವೇಕ್ ಎಸ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಿತ್ಯ ಗಳಿಸಿದ 23 ಪಾಯಿಂಟ್ಸ್ ನೆರವಿನಿಂದ ವಿಮಾನಪುರ ಎಸ್‌ಸಿ ತಂಡವು ಎಸ್. ರಂಗರಾಜನ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಸಿ ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿತು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಟೂರ್ನಿಯ ಸೆಮಿಫೈನಲ್ ಹಣಾಹಣಿಯಲ್ಲಿ ವಿಮಾನಪುರ 87–47ರಿಂದ ಶಂಕರನಗರ ಎಸ್‌ಸಿ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ರಾಹುಲ್ 16 ಪಾಯಿಂಟ್ಸ್ ಕಲೆಹಾಕಿದರು. ಶಂಕರನಗರ ತಂಡಕ್ಕಾಗಿ ಜೋಸೆಫ್ 15 ಪಾಯಿಂಟ್ಸ್ ಗಳಿಸಿದರು.

ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ವಿವೇಕ್ ಎಸ್‌ಸಿ ತಂಡಕ್ಕೆ 78–64ರಿಂದ ಡಿಆರ್‌ಡಿಒ ವಿರುದ್ಧ ಗೆಲುವು ಒಲಿಯಿತು.

ವಿಜೇತ ತಂಡದ ಪರ ಜೋಷುವಾ ಮತ್ತು ಜೊನಾಥನ್ ತಲಾ 19 ಪಾಯಿಂಟ್ಸ್ ಗಳಿಸಿದರು. ಡಿಆರ್‌ಡಿಒ ತಂಡದ ಪಾರ್ಥಿವ್ (21) ಮತ್ತು ಅತುಲ್ (17) ಮಿಂಚಿದರು.

ಇದಕ್ಕೂ ಮೊದಲು ನಡೆದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ವಿಮಾನಪುರ 82–38ರಿಂದ ಪಿಪಿಸಿ ಎದುರು, ಶಂಕರನಗರ 80–51ರಿಂದ ಆರ್ಯನ್ಸ್ ಎಸ್‌ಸಿ ಮೈಸೂರು ಎದುರು, ಡಿಆರ್‌ಡಿಒ 74–58ರಿಂದ ವೈಎಫ್‌ಬಿಸಿ ಕೋಲಾರ ಎದುರು, ವಿವೇಕ್ ಎಸ್‌ಸಿ 70–59ರಿಂದ ಆರಿಯನ್ಸ್ ಎದುರು ಜಯ ಸಾಧಿಸಿದ್ದವು.




ಟೆನಿಸ್ ಅಂಕಣಕ್ಕೆ ಮರಳಿದ ಸೆರೆನಾ

ಈಸ್ಟ್‌ಬಾರ್ನ್ (ಎಎಫ್‌ಪಿ): ದೀರ್ಘ ಬಿಡುವಿನ ನಂತರ ಟೆನಿಸ್ ಅಂಕಣಕ್ಕೆ ಮರಳಿದ ಸೆರೆನಾ ವಿಲಿಯಮ್ಸ್ ಜಯದ ಆರಂಭ ಮಾಡಿದರು.

ಮಂಗಳವಾರ ಇಲ್ಲಿ ನಡೆದ ಈಸ್ಟ್‌ಬಾರ್ನ್ ಅಂತರರಾಷ್ಟ್ರೀಯ ಟೆನಿಸ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಸೆರೆನಾ ಮತ್ತು ಆನ್ಸ್ ಜುಬೇರ್ ಅವರೊಂದಿಗೆ 2-6, 6-3, 13-11 ರಲ್ಲಿ ಸಾರಾ ಸೊರಿಬಸ್ ಮತ್ತು ಮಾರಿ ಬುಜ್‌ಕೊವಾ ಜೋಡಿಯನ್ನು ಮಣಿಸಿದರು. ಟೂರ್ನಿಯ ಎಂಟರ ಘಟ್ಟ ಪ್ರವೇಶಿಸಿದರು. 23 ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ ಗೆದ್ದಿರುವ ದಾಖಲೆಯ ಒಡತಿ ಸೆರೆನಾ ಹೋದ ವರ್ಷದ ವಿಂಬಲ್ಡನ್ ನಂತರ ಕಣಕ್ಕಿಳಿದಿರಲಿಲ್ಲ. ಆ ಟೂರ್ನಿಯಲ್ಲಿ ಅವರು ಗಾಯಗೊಂಡು ಹೊರನಡೆದಿದ್ದರು.

40 ವರ್ಷದ ಸೆರೆನಾ ಅವರು ತಾವು ವೃತ್ತಿಪರ ಟೆನಿಸ್‌ಗೆ ಮರಳುವ ಕುರಿತು ಘೋಷಣೆ ಮಾಡಿ ಅಚ್ಚರಿ ಮೂಡಿಸಿದ್ದರು. ಅದಕ್ಕೂ ಮುನ್ನ ಅವರು ಟೆನಿಸ್‌ನಿಂದ ನಿವೃತ್ತಿಯಾಗಲಿದ್ದಾರೆ ಎಂಬ ಮಾತುಗಳೂ ಕೇಳಿಬಂದಿದ್ದವು.

ಇದೇ 27ರಂದು ವಿಂಬಲ್ಡನ್ ಶುರುವಾಗಲಿದೆ. ಈ ಹೊತ್ತಿನಲ್ಲಿ ಸೆರೆನಾ ಕಣಕ್ಕೆ ಮರಳಿರುವುದು ಟೆನಿಸ್ ವಲಯದಲ್ಲಿ ಸಂಚಲನ ಮೂಡಿಸಿದೆ.



ಆನ್ಸ್ ಜಬೇರ್ ಮತ್ತು ಸೆರೆನಾ ವಿಲಿಯಮ್ಸ್ ಜೋಡಿ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ವಿಶ್ವ ಈಜು: ಹಿಂದೆ ಸರಿದ ಡ್ರೆಸೆಲ್

ಬುಡಾಪೆಸ್ಟ್ (ಎಎಫ್‌ಪಿ/ರಾಯಿಟರ್ಸ್): ಒಲಿಂಪಿಕ್ ಚಾಂಪಿಯನ್ ಅಮೆರಿಕದ ಸೆಲೆಬ್ ಡ್ರೆಸೆಲ್ ಇಲ್ಲಿ ನಡೆಯುತ್ತಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿದಿದ್ದಾರೆ.

50 ಮೀ, 100 ಮೀ ಬಟರ್‌ಫ್ಲೈ ಮತ್ತು 50 ಮೀ ಫ್ರೀಸ್ಟೈಲ್ ವಿಭಾಗಗಳಲ್ಲಿ ಅವರು ಹೋದ ವರ್ಷ ಚಾಂಪಿಯನ್ ಆಗಿದ್ದರು.

ಈ ಬಾರಿ 100 ಮೀ ಫ್ರೀಸ್ಟೈಲ್‌ನಲ್ಲಿ ಡ್ರೆಸೆಲ್ ತಮ್ಮ ಚಾಂಪಿಯನ್ ಪಟ್ಟ ಉಳಿಸಿಕೊಳ್ಳಲು ಸಿದ್ಧತೆ ಮಾಡಿಕೊಂಡಿದ್ದರು. ಅವರಿಗೆ ಕಠಿಣ ಪೈಪೋಟಿಯೊಡ್ಡಲು ರೊಮೆನಿಯಾದ ಡೇವಿಡ್ ಪೊಪೊವಿಚಿ ಕೂಡ ತಯಾರಾಗಿದ್ದರು. ಈ ವಿಭಾಗದಲ್ಲಿ ಡೇವಿಡ್ ಗೆಲ್ಲುವ ಈಜುಪಟುವೆಂದು ಕೂಡ ಬಿಂಬಿಸಲಾಗಿತ್ತು.

ಪ್ರೊ ಲೀಗ್ ಹಾಕಿ: ಭಾರತ ಮಹಿಳಾ ತಂಡಕ್ಕೆ 3ನೇ ಸ್ಥಾನ


ರಾಟರ್‌ಡ್ಯಾಮ್ (ಪಿಟಿಐ): ವಂದನಾ ಕಟಾರಿಯಾ ಗಳಿಸಿದ ಎರಡು ಗೋಲುಗಳ ಬಲದಿಂದ ಭಾರತ ಮಹಿಳಾ ತಂಡವು ಎರಡನೇ ಲೆಗ್ ಪಂದ್ಯದಲ್ಲಿಯೂ ಅಮೆರಿಕ ತಂಡವನ್ನು 4–0ಯಿಂದ ಮಣಿಸಿತು. ಇದರೊಂದಿಗೆ ಮೊದಲ ಬಾರಿ ಕಣಕ್ಕಿಳಿದಿದ್ದ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಮೂರನೇ ಸ್ಥಾನ ಗಳಿಸಿತು.

ಮಂಗಳವಾರ ನಡೆದ ಮೊದಲ ಲೆಗ್ ಪಂದ್ಯದಲ್ಲಿ ಭಾರತ 4–2ರಿಂದ ಅಮೆರಿಕವನ್ನು ಸೋಲಿಸಿತ್ತು.

ಬುಧವಾರದ ಪಂದ್ಯದಲ್ಲಿ ವಂದನಾ 39 ಮತ್ತು 54ನೇ ನಿಮಿಷ, ಸೋನಿಕಾ (54ನೇ ನಿ.) ಮತ್ತು ಸಂಗೀತಾ ಕುಮಾರಿ (58ನೇ ನಿ.) ಗೋಲು ಗಳಿಸಿದರು.

ಐರ್ಲೆಂಡ್‌ನ ಡಬ್ಲಿನ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತ 23 ವರ್ಷದೊಳಗಿನ ಮಹಿಳಾ ತಂಡವು 3–0ಯಿಂದ ಉಕ್ರೇನ್‌ಗೆ ಸೋಲುಣಿಸಿತು.

ಐಸಿಯುನಲ್ಲಿ ಜಹೀರ್ ಅಬ್ಬಾಸ್



ಜಹೀರ್ ಅಬ್ಬಾಸ್

ಲಂಡನ್ (ಪಿಟಿಐ): ಕೋವಿಡ್‌ನಿಂದ ಬಳಲುತ್ತಿರುವ ಪಾಕಿಸ್ತಾನದ ದಿಗ್ಗಜ ಕ್ರಿಕೆಟಿಗ ಜಹೀರ್ ಅಬ್ಬಾಸ್ ಅವರು ಇಲ್ಲಿಯ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದಾರೆ.

ದುಬೈನಿಂದ ಲಂಡನ್‌ಗೆ ತೆರಳುವ ಸಂದರ್ಭದಲ್ಲಿ ಅಬ್ಬಾಸ್ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿತ್ತು. ಈಗ ಅವರಿಗೆ ಆಕ್ಸಿಜನ್ ಅಳವಡಿಸಲಾಗಿದೆ ಎಂದು ಜಿಯೊ ನ್ಯೂಸ್ ವರದಿ ಮಾಡಿದೆ. ಪಾಕ್ ಪರ 72 ಟೆಸ್ಟ್ ಪಂದ್ಯಗಳಿಂದ 5062 ರನ್ ಕಲೆಹಾಕಿರುವ ಅಬ್ಬಾಸ್, 62 ಏಕದಿನ ಪಂದ್ಯಗಳಿಂದ 2572 ರನ್ ಗಳಿಸಿದ್ದಾರೆ.

ಫುಟ್‌ಬಾಲ್: ಸಿದ್ಧಾರ್ಥ್ ನಾಲ್ಕು ಗೋಲು

ಬೆಂಗಳೂರು: ಸಿದ್ಧಾರ್ಥ್ ಗಳಿಸಿದ ನಾಲ್ಕು, ಸಿದ್ ಮತ್ತು ಪ್ರಣವ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಗ್ರೀನ್‌ವಿಡ್ ಹೈಸ್ಕೂಲ್ ತಂಡವು ಸುಬ್ರತೊ ಕಪ್ ಫುಟ್‌ಬಾಲ್ ವಲಯಮಟ್ಟದ ಅರ್ಹತಾ ಟೂರ್ನಿಯ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಕೆಎಸ್‌ಎಫ್‌ಎ ಸಹಯೋಗದಲ್ಲಿ ಸೇಂಟ್ ಜೋಸೆಫ್ ಹೈಸ್ಕೂಲ್ ಆಯೋಜಿಸಿರುವ ಟೂರ್ನಿಯ ಬಿ ಗುಂಪಿನ ಸೆಣಸಾಟದಲ್ಲಿ ಗ್ರೀನ್‌ವುಡ್ 14–0ಯಿಂದ ಅಪೋಲೊ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಎದುರು ಗೆದ್ದಿತು. ಸಿದ್ಧಾರ್ಥ್ 11, 27, 29, 35ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಸಿದ್ (3, 21 ಮತ್ತು 24ನೇ ನಿ.), ಪ್ರಣವ್ (14, 18, 45ನೇ ನಿ.), ವಿಜೇತ ತಂಡದಲ್ಲಿ ಮಿಂಚಿದರು. ಬಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಬಾಲ್ಡ್‌ವಿನ್ ಬಾಯ್ಸ್ 1–0ರಿಂದ ಎನ್‌ಎಫ್‌ಎಲ್ ಎದುರು ಜಯ ಸಾಧಿಸಿತು. ಸಿ ಗುಂಪಿನ ಪಂದ್ಯಗಳಲ್ಲಿ ಗ್ರೀನ್‌ವುಡ್ ಇಂಟರ್‌ನ್ಯಾಷನಲ್ ತಂಡವು 6–0ಯಿಂದ ಶಿಶುಗೃಹ ಶಾಲಾ ತಂಡದ ಎದುರು, ಅಂಬರ್‌ವ್ಯಾಲಿ 2–0ಯಿಂದ ರ್‍ಯಾನ್ ಇಂಟರ್‌ನ್ಯಾಷನಲ್ ಎದುರು ಜಯ ಸಾಧಿಸಿದವು. ಅಂಬರ್ ವ್ಯಾಲಿ ತಂಡವು ಕ್ರೈಸ್ಟ್ ಅಕಾಡೆಮಿಯಿಂದ ವಾಕ್‌ಓವರ್ ಪಡೆಯಿತು.



ಅಂಬರ್‌ವ್ಯಾಲಿ ತಂಡದ ತನಿಶ್ (ಬಲ) ಮತ್ತು ರ್‍ಯಾನ್ ಇಂಟರ್‌ನ್ಯಾಷನಲ್ ತಂಡದ ಮುಹಮ್ಮದ್ ಫದಿ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ರ‍್ಯಾಂಕಿಂಗ್: ಇಶಾನ್, ದಿನೇಶ್‌ಗೆ ಬಡ್ತಿ

ದುಬೈ (ಪಿಟಿಐ): ಅನುಭವಿ ವಿಕೆಟ್‌ಕೀಪರ್ –ಬ್ಯಾಟರ್ ದಿನೇಶ್ ಕಾರ್ತಿಕ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟಿ20 ರ‍್ಯಾಂಕಿಂಗ್‌ನಲ್ಲಿ 108 ಸ್ಥಾನಗಳ ಬಡ್ತಿ ಪಡೆದಿದ್ದಾರೆ. ಯುವ ಆಟಗಾರ ಇಶಾನ್ ಕಿಶನ್ ಆರನೇ ಸ್ಥಾನಕ್ಕೇರಿದ್ದಾರೆ.

ಈಚೆಗೆ ಮುಕ್ತಾಯವಾದ ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯಲ್ಲಿ ದಿನೇಶ್ ಉತ್ತಮವಾಗಿ ಆಡಿದ್ದರು. ಅವರು ಈಗ 87ನೇ ಸ್ಥಾನಕ್ಕೇರಿದ್ದಾರೆ.

ಇದೇ ಸರಣಿಯಲ್ಲಿ ಯುವ ವಿಕೆಟ್‌ಕೀಪರ್ ಬ್ಯಾಟರ್ ಇಶಾನ್ ಒಟ್ಟು 206 ರನ್ ಗಳಿಸಿದ್ದರು. ಇದರಿಂದಾಗಿ ಅವರು ಏಳರಿಂದ ಆರನೇ ಸ್ಥಾನಕ್ಕೇರಿದ್ದಾರೆ. ಸರಣಿಯಕೊನೆಯ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. 2–2ರಿಂದ ಸಮವಾಗಿತ್ತು.

ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಟೆಸ್ಟ್ ರ‍್ಯಾಂಕಿಂಗ್‌ನ ಆಲ್ ರೌಂಡರ್ ವಿಭಾಗದಲ್ಲಿ ಭಾರತದ ರವೀಂದ್ರ ಜಡೇಜ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಅಗ್ರಸ್ಥಾನದಲ್ಲಿದ್ದಾರೆ.

ಈಜು: ರಾಜ್ಯ ತಂಡದಲ್ಲಿ ಅಥರ್ವ್, ಅಲಿಸಾ

ಬೆಂಗಳೂರು: ಅಥರ್ವ್ ಪಾಲ್ ಸಿಂಗ್ ರಾಥೋಡ್ ಮತ್ತು ಅಲಿಸಾ ಸ್ವೀಡಲ್ ರೆಗೊ ಅವರು ರಾಷ್ಟ್ರೀಯ ಸಬ್ ಜೂನಿಯರ್ ಈಜು ಮತ್ತು ಡೈವಿಂಗ್ ಚಾಂಪಿಯನ್‌ಷಿಪ್‌ಗೆ ಪ್ರಕಟಿಸಲಾದ ಕರ್ನಾಟಕ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್ ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಇದೇ ಶುಕ್ರವಾರದಿಂದ 26ರವರೆಗೆ ನಡೆಯಲಿದೆ.

ತಂಡಗಳು: ಬಾಲಕರು: ಅಥರ್ವ್ ಪಾಲ್ ಸಿಂಗ್ ರಾಥೋಡ್, ರೆಯಾಂಶ್‌ಕಾಂತಿ ವೈ, ಸಮರ್ಥ್ ಆರ್. ಗೌಡ, ಶರಣ್ ಶ್ರೀಧರ್, ಅರ್ಜುನ್ ರಾಘವನ್, ಜಸ್ ಸಿಂಗ್, ಎಸ್. ಕ್ರಿಶ್, ವಿಹಾನ್ ಚತುರ್ವೇದಿ, ವೈಭವ್ ಪ್ರತಾಪ್, ಕೃಷ್ಣಾನಂದ ಕುಮಾರ್, ಮಯೂರೇಶ್ ಜಾಧವ್, ಆರಿನ್ ಮೊಸೆಸ್ ವಾಸ್, ಪೂಜಿತ್ ರಾಜ್, ಅರ್ನವ್ ಕುಲಕರ್ಣಿ, ಸೋಹನ್ ಸೂರಿ. ಬಾಲಕಿಯರು: ಅಲಿಸಾ ಸ್ವೀಡಲ್ ರೆಗೊ, ಆದ್ಯಾ ನಾಯರ್. ದೇವಿಕಾ ಎಂ, ಸಾನ್ವಿ ಮೈಗೂರ್, ಶೆಲಿನ್ ಸುನಿಲ್, ತ್ರಿಶಾ ಸಿಂಧು ಎಸ್, ವಿಭಾ ರೆಡ್ಡಿ ಮರಮ್, ಶಿವಾನಿ ಶೆಣೈ ಕೇರ್ಕಿ, ಸ್ಪರ್ಶ ಹರೀಶ್, ಜನನಿ ವೆಂಕಟೇಶ್ವರ ಪೆರುಮಾಳ್, ಶಕ್ಯಾ ಜೆ. ರಾವ್, ಖುಷಿ ಕೆ. ಮಹೇಶ್, ಚೈತ್ರಾ ಎಸ್. ಪ್ರಸಾದ್, ಪೂರ್ವಿಕಾ ವೆಂಕಟೇಶ್, ನಯನಾ ಪಿ.

ವ್ಯವಸ್ಥಾಪಕ: ಸತೀಶ್‌ಕುಮಾರ್ ಬಿ, ಶಿವ ಪ್ರಸಾದ್. ಕೋಚ್‌ಗಳು: ಗಿರೀಶ್ ಬಿ, ಶ್ರೀಶ್ ರೆಡ್ಡಿ, ಯಾಕೂಬ್ ಸಲೀಮ್, ವೆಂಕಟೇಶ್ ಆರ್.

ಬ್ಯಾಸ್ಕೆಟ್‌ಬಾಲ್: ಅದಿತಿಗೆ ಸ್ಥಾನ



ಅದಿತಿ ನಾಗರಾಜನ್

ಬೆಂಗಳೂರು: ಕರ್ನಾಟಕದ ಅದಿತಿ ನಾಗರಾಜನ್ ಅವರು ಫಿಬಾ 16 ವರ್ಷದೊಳಗಿನ ಮಹಿಳೆಯರ ಏಷ್ಯಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ಗೆ ಪ್ರಕಟಿಸಲಾದ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಜೋರ್ಡಾನ್‌ನ ಅಮನ್‌ನಲ್ಲಿ ಶುಕ್ರವಾರದಿಂದ ಜೂನ್ 30ರವರೆಗೆ ಟೂರ್ನಿಯು ನಡೆಯಲಿದೆ.

ತಂಡ ಇಂತಿದೆ: ಮನ್‌ಮೀತ್ ಕೌರ್ (ನಾಯಕಿ), ಅದಿತಿ ನಾಗರಾಜನ್, ರಿಚಾ ರವಿ, ಮುಸ್ಕಾನ್ ಸಿಂಗ್, ಎಂ. ಹರಿಮಾ ಸುಂದರಿ, ಆರ್. ದೀಪ್ತಿ, ಕೋಮಲ್‌ಪ್ರೀತ್ ಕೌರ್, ಪ್ರಾರ್ಥನಾ ಸಾಳ್ವೆ, ಮೋನಿ ಅದ್ಲಾ, ಆರ್ಶಿಯಾ ದಬಾಸ್, ಚಂಚನಾ ಟಿ.ಎಸ್, ಒಶೀನ್ ಸಿಂಗ್. ಕೋಚ್‌ಗಳು: ಮನೀಷಾ ಡಾಂಗೆ, ಸಲೋನಿ. ವ್ಯವಸ್ಥಾಪಕಿ: ಮೀನಾಲತಾ ಎಂ. ಫಿಸಿಯೊ: ಅಹಾನಾ ಪುರಾಣಿಕ್. ರೆಫರಿ: ಅಲನ್ ಸಿ. ಜೋಸ್.

ಅರ್ಚನಾ ಕಾಮತ್ ಅರ್ಜಿ ವಜಾ

ಬೆಂಗಳೂರು: ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಭಾರತದ ಟೇಬಲ್ ಟೆನಿಸ್ ಮಹಿಳಾ ತಂಡದ ಆಯ್ಕೆ ಪಟ್ಟಿ ಪ್ರಕಟಣೆಗೆ ಇದ್ದ ನಿರ್ಬಂಧವನ್ನು ಹೈಕೋರ್ಟ್ ತೆರವುಗೊಳಿಸಿದೆ.

ತಂಡದ ಆಯ್ಕೆ ಪ್ರಶ್ನಿಸಿ ಬೆಂಗಳೂರಿನ ಆಟಗಾರ್ತಿ ಅರ್ಚನಾ ಕಾಮತ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಸ್. ದಿನೇಶ್‌ಕುಮಾರ್ ನೇತೃತ್ವದ ವಿಭಾಗೀಯ ಪೀಠ ಬುಧವಾರ ವಜಾಗೊಳಿಸಿದೆ.

'ಆಟಗಾರರ ಆಯ್ಕೆಗೆ ನಿವೃತ್ತ ಮುಖ್ಯ ನ್ಯಾಯಮೂರ್ತಿ ನೇತೃತ್ವದಲ್ಲಿ ಇಬ್ಬರು ತಜ್ಞರಿರುವ ಆಡಳಿತಗಾರರ ಸಮಿತಿ ರಚಿಸಲಾಗಿದೆ. ಅದು 2022ರ ಫೆಬ್ರುವರಿಯಲ್ಲಿ ಅಧಿಕಾರ ವಹಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಆಟಗಾರರ ಆಯ್ಕೆ ವಿಚಾರ ತಜ್ಞರಿಗೆ ಬಿಟ್ಟಿದ್ದು, ಅದರಲ್ಲಿ ಕೋರ್ಟ್ ಹಸ್ತಕ್ಷೇಪ ಮಾಡಲಾಗದು. ಜೊತೆಗೆ ಇದೇ ವಿಚಾರಕ್ಕೆ ಸಂಬಂಧಿಸಿದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಕೂಡ ವಜಾಗೊಳಿಸಿದೆ. ಹಾಗಾಗಿ ಅರ್ಜಿ ವಜಾಗೊಳಿಸಲಾಗುತ್ತಿದೆ' ಎಂದು ನ್ಯಾಯಪೀಠ ಹೇಳಿದೆ.